ಮುಂಗಾರು

ಸಂಪಾದಕ: ವಡ್ಡರ್ಸೆ ರಘುರಾಮ ಶೆಟ್ಟಿ

EXCLUSIVE BANARASI SAREES
& SILKS FABRICS WITH STRIKING
DESIGNS

JAYANTi textiles
HAMPANKATTA MANGALORE-1

MUNGARU KRNL 46 ಸಂಪುಟ 3 ಸಂಚಿಕೆ 39 | ಮಂಗಳೂರು, ಸೋಮವಾರ ಅಕ್ಟೋಬರ್ 20, 1986 | ಬೆಲೆ 80 ಪೈಸೆ (ಮುಂಬೈ: 1-00 ರೂ.) ಪುಟ 8

ರಾಷ್ಟ್ರೀಯ ಒಮ್ಮತದ ಮೀಸಲಾತಿ ನೀತಿ

ಸಮಗ್ರತಾ ಮಂಡಳಿ ಸಭೆಗೆ ಹೆಗಡೆ ಕರೆ

ಹೊಸದಿಲ್ಲಿ, ಅ. 19- ಮೀಸಲಾತಿ ನೀತಿಯ ಬಗ್ಗೆ ರಾಷ್ಟ್ರೀಯ ಒಮ್ಮತವನ್ನು ರೂಪಿಸಬೇಕೆಂದು ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಕರೆನೀಡಿದ್ದು, ಈ ಕುರಿತು ಚರ್ಚಿಸಲು 'ರಾಷ್ಟ್ರೀಯ ಸಮಗ್ರತಾ ಸಮಿತಿ'ಯ ಸಭೆ ಜರಗಬೇಕೆಂದು ಸೂಚಿಸಿದ್ದಾರೆ.

ಹಿಂದುಳಿದಿರುವಿಕೆಯನ್ನು ಮತ್ತು ಶೇಕಡಾವಾರು ಪ್ರಮಾಣವನ್ನು ನಿರ್ಧರಿಸುವಲ್ಲಿ ರಾಜ್ಯಗಳು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ಈ ಕ್ರಮ ಮುಖ್ಯವಾಗುತ್ತದೆಂದು ಹೇಳಿದ ಅವರು, "ರಾಷ್ಟ್ರೀಯ ಮಟ್ಟದ ನಿರ್ಧಾರ ಜನತೆಗೆ ಸಮ್ಮತವಾಗುವುದೆಂದು ತಾವು ಭಾವಿಸುವುದಾಗಿ" ತಿಳಿಸಿದರು.

ಇತ್ತೀಚಿನ ತಮ್ಮ ಮೀಸಲಾತಿ ಆಜ್ಞೆಯಲ್ಲಿ ಎಲ್ಲ ಜಾತಿಗಳನ್ನೂ ಸಂತೃಪ್ತಿಪಡಿಸಲು ರೂಪಿಸಲಾಗಿದೆಯೆಂಬ ಟೀಕೆಯನ್ನು ಅವರು ತಳ್ಳಿಹಾಕಿದರು. ಹೊಸ ಹಿಂದುಳಿದ ವರ್ಗಗಳ ಆಯೋಗ ತನ್ನ ವರದಿ ಸಲ್ಲಿಸುವ ತನಕ ಮಾತ್ರ ಈ ಆಜ್ಞೆ ಊರ್ಜಿತದಲ್ಲಿರುವುದಾಗಿ ಅವರು ಹೇಳಿದರು.

ಮುಖ್ಯಮಂತ್ರಿಯವರು ತಾವು 'ಚುನಾವಣಾ ಸುಧಾರಣೆ' ಕುರಿತು ಬರೆದ ಪುಸ್ತಕ ಬಿಡುಗಡೆಗೊಳಿಸಿದ ನಂತರ ಪಿ.ಟಿ.ಐ. ವಾರ್ತಾದಾರರೊಂದಿಗೆ ಮಾತನಾಡುತ್ತಿದ್ದರು. ಚುನಾವಣಾ ಸುಧಾರಣೆಗಳ ಕುರಿತು ರಾಷ್ಟ್ರ ಮಟ್ಟದಲ್ಲಿ ಚರ್ಚೆ ನಡೆಯಬೇಕೆಂದು ಕರೆ ನೀಡಿದ ಅವರು, ಕೇಂದ್ರ ಸರಕಾರ ಈ ನಿಟ್ಟಿನಲ್ಲಿ ಉಪಕ್ರಮಿಸುವುದಾಗಿ ಆಶಿಸಿದರು. ಕರ್ನಾಟಕ ಸರಕಾರವು ಚುನಾವಣಾ ಸುಧಾರಣೆಗಳನ್ನು ತರಲು ಪ್ರಯತ್ನಿಸಿದ್ದು, ಅವು ಕೇವಲ ರಾಜ್ಯದ ಅಧಿಕಾರ ವ್ಯಾಪ್ತಿಗೆ ಸೇರಿದ್ದಕ್ಕೆ ಸೀಮಿತವಾಗಿದೆಯೆಂದು ಅವರು ಹೇಳಿದರು.

ಥ್ಯಾಲೆಂಡ್‌ನಲ್ಲಿ ಪ್ರಧಾನಿ ರಾಜೀವ್: ಬಿಗಿ ಭದ್ರತೆ

ಬ್ಯಾಂಕಾಕ್, ಅ.19- ಒಂದು ದಿನದ ಥ್ಯಾಲೆಂಡ್ ಭೇಟಿಗಾಗಿ ಬಿಗುಭದ್ರತೆಯ ನಡುವೆ ಪ್ರಧಾನಿ ರಾಜೀವ್‌ಗಾಂಧಿಯವರು ಇಂದು ಇಲ್ಲಿ ಆಗಮಿಸಿದರು. ರಾಜೀವ್ ಗಾಂಧಿ ಥ್ಯಾಲೆಂಡ್‌ಗೆ ಭೇಟಿ ನೀಡುತ್ತಿರುವ ಪ್ರಥಮ ಭಾರತೀಯ ಪ್ರಧಾನಿಯಾಗಿದ್ದಾರೆ.

ರಾಜೀವ್ ಇರುವ ನ್ಯೂಜಿಲೆಂಡ್ ವಿಮಾನ ಇಳಿದ ಮಿಲಿಟರಿ ವಿಮಾನದಾಣದಲ್ಲಿ ಇಳಿಯುತ್ತಿದ್ದಂತೆ ಸ್ವಯಂಚಾಲಿತ ಶಸ್ತ್ರಗಳಿಂದ ಸಜ್ಜಿತರಾಗಿದ್ದ ಭದ್ರತಾ ಪಡೆಯೋಧರು ವಿಲ್ಯಾಣವನ್ನು ಸುತ್ತುವರಿದು ನಿಂತರು. ವಿಮಾನ ನಿಲ್ದಾಣದಿಂದ ರಾಜೀವ ಗಾಂಧಿ ತಂಗುವ ಹೊಟೇಲ್ ಓರಿಯಂಟ್ ತನಕದ 26ಕಿ.ಮೀ. ಉದ್ದಕ್ಕೂ ಅಲ್ಲಲ್ಲಿ ಭದ್ರತಾ ಪಡೆ ಕಾವಲನ್ನಿರಿಸಲಾಗಿತ್ತು.

ಅಭೂತಪೂರ್ವ ಭದ್ರತೆ ಇದ್ದಾಗಲೂ, ಸಾವಿರಾರು ಜನರು ಮಾರ್ಗದುದ್ದಕ್ಕೂ ನಿಂತು ರಾಜೀವ್ ಗಾಂಧಿ ಬರುತ್ತಿದ್ದಂತೆ ಹರ್ಷೋದ್ಗಾರ ಗೈದರು. ಹೊಟೇಲ್ ಸುತ್ತಮುತ್ತಲೂ ಬಿಗಿಕಾವಲು ವ್ಯವಸ್ಥೆ ಮಾಡಲಾಗಿದೆ.

ಹಿಂದುಳಿದವರ ಚಳವಳಿಗೆ ಕೊಡಲಿ ಏಟು

ಮಧ್ಯಾವಧಿ ಮೀಸಲಾತಿ ಸೂತ್ರಕ್ಕೆ ವೆಂಕಟಸ್ವಾಮಿ ಟೀಕೆ

(ಮುಂಗಾರು ವರದಿ)

ಬೆಂಗಳೂರು, ಅ. 19:- ಮೂರು ವರ್ಗಗಳ ತಾತ್ಕಾಲಿಕ ಮೀಸಲಾತಿ ಬಗೆಗಿನ ಸರಕಾರಿ ಆದೇಶವು ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜಾಗೃತಿಯನ್ನು 'ದುರ್ಬಲಗೊಳಿಸಿದೆ' ಎಂದು ಎರಡನೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ವೆಂಕಟಸ್ವಾಮಿ ಅವರು ಹೇಳಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಬೆಂಗಳೂರು ವರದಿಗಾರರ ಕೂಟವು ಏರ್ಪಡಿಸಿದ ಪತ್ರಿಕಾ ಸಂದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು ರಾಜ್ಯದ ಶೇ. 92ರಷ್ಟು ಜನರಿಗೆ ಮೀಸಲಾತಿ ಸೌಲಭ್ಯ ಒದಗಿಸಿದರೆ ನಿಜವಾದ ಹಿಂದುಳಿದವರ ಕಲ್ಯಾಣವಾಗಲೀ ಮುನ್ನಡೆಯಾಗಲೀ ಹೇಗೆ ಸಾಧ್ಯವೆಂದು ಪ್ರಶ್ನಿಸಿದರು.

ರಾಜ್ಯ ಸಂಪುಟದ ಹೊಸ ಮೀಸಲಾತಿ ನಿಯಮವನ್ನು ಅವರು "ಹಂಡೆ ತುಂಬ ನೀರು ತುಂಬಿ, ಎರಡು ಲೀಟರು ಹಾಲು ಹಾಕಿ, ಹಾಲು ಕುಡಿಯಿರಿ ಎಂದು ಹೇಳಿದಂತಿದೆ" ಎಂದು ಗೇಲಿ ಮಾಡಿದರು.

ಹೊಸ ನೀತಿಯಲ್ಲಿ "ಎ" ಗುಂಪಿನ ಹೊರತು ಉಳಿದೆಲ್ಲ ಗುಂಪುಗಳ ಜಾತಿಗಳವರಿಗೆ ಆದಾಯದ ಮಿತಿ ಹೇರಿದ್ದು, ಮೀಸಲಾತಿಗೊಳಪಡುವ ಜನರ ಸಂಖ್ಯೆ ಶೇ. 92ರಷ್ಟು ಆಗಲಿ ಕೇವಲ 500ರಿಂದ 60ರಷ್ಟಾಗಬಹುದು ... ಎಂಬ ಮುಖ್ಯ

ಮಂತ್ರಿಯವರ ಹೇಳಿಕೆ ಬಗ್ಗೆ ಕೇಳಿದಾಗ ಸಂಬಳದವರ ಹೊರತು ರೈತರು, ವ್ಯಾಪಾರಿಗಳು, ವಕೀಲರು, ವೈದ್ಯರು ಇತ್ಯಾದಿ ಸ್ವಂತ ವೃತ್ತಿಯಲ್ಲಿ ತೊಡಗಿರುವವರೆಲ್ಲರೂ ಆದಾಯದ ಮಿತಿಯೊಳಗೆ ಪ್ರಮಾಣ ಪತ್ರ ಸಲ್ಲಿಸಿ ಮೀಸಲಾತಿ ಸೌಲಭ್ಯ ಪಡೆಯುವ ಸಾಧ್ಯತೆ ಇದೆ ಎಂದರು.

ಹಿಂದುಳಿದವರೆಂದರೆ ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕ ಪರಿಸ್ಥಿತಿ ಮತ್ತು ದೃಷ್ಟಿಕೋನಗಳಿಂದ ಪರಿಶಿಷ್ಟರಿಗೆ ಸರಿಸಮಾನರಾಗಿರುವ ಅಥವಾ ಆ ದೃಷ್ಟಿಯಿಂದ ಅವರಿಗೆ ಹತ್ತಿರವಾಗಿರುವ ಜಾತಿಗಳು ಎಂದು ವ್ಯಾಖ್ಯಾನಿಸಿದ ವೆಂಕಟಸ್ವಾಮಿಯವರು ಸುಪ್ರೀಂಕೋರ್ಟ್ ಹಿಂದುಳಿದ ವರ್ಗಗಳನ್ನು ಗುರುತಿಸಲು ನೀಡಿರುವ ಮಾರ್ಗಸೂಚಿ ಕೂಡ ಇದೇ ಆಗಿದೆ ಎಂದರು.

ಸಂವಿಧಾನದ 15 (4) ಮತ್ತು 16 (4) ವಿಧಿಗಳನ್ನು ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದವರ ಅಭ್ಯುದಯಕ್ಕೆ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿ ಕಲ್ಪಿಸಲು ಇರುವ ಅವಕಾಶವನ್ನು ಪರಿಶಿಷ್ಟರಿಗೆ ಸಮಾನವಾಗಿ ಅಥವಾ ಅವರ ಪರಿಸ್ಥಿತಿಗೆ ಅತೀ ಸಮೀಪದ ಬದುಕು ನಡೆಸುತ್ತಿರುವ ಪರಂಪರಾಗತ ಶೋಷಣೆಗೊಳಗಾದ ಪರಿಶಿಷ್ಟೇತರ ಹಿಂದುಳಿದ ಜಾತಿಗಳವರಿಗೆ ನೀಡಬೇಕೇ ವಿನಾ ಅವರಿಗಿಂತ ಬಹುಪಾಲು ಮುನ್ನಡೆ ಸಾಧಿಸಿರುವ ಜಾತಿ ಜನಾಂಗದವರಿಗೆ ಅಲ್ಲವೆಂದು ಅವರೂ ಹನ್ನೆ ಆಯೋಗದಲ್ಲಿ ಕೆಲವು ಜಾತಿಗಳನ್ನು ಹಿಂದುಳಿದ ಪಟ್ಟಿಯಿಂದ ಕೈಬಿಟ್ಟುದನ್ನು ಸಮರ್ಥಿಸಿಕೊಂಡರು.

ಸುಪ್ರೀಂ ಕೋರ್ಟ್‌ನ ಹಿಂದಿನ ಮುಖ್ಯ ನ್ಯಾಯಾಧೀಶ ವೈ. ವಿ. ಚಂದ್ರಚೂಡ್ ಅವರು ಹಿಂದುಳಿದವರನ್ನು ಗುರುತಿಸಲು ಜಾತಿ ಮತ್ತು ಆದಾಯ ಮೂಲಗಳನ್ನು ಗಮನದಲ್ಲಿರಿಸಿಕೊಳ್ಳಬೇಕೆಂದು ಸೂಚಿಸಿರುವಂತೆ ತಾನು ಹಿಂದುಳಿದವರ ವರ್ಗೀಕರಣಕ್ಕೆ ಜಾತಿಗಳನ್ನು ಮತ್ತು ಹಿಂದುಳಿದವರ ಪಟ್ಟಿಯಿಂದ ಕೈಬಿಡಲು ಕೆಲವು ಆದಾಯ ಮೂಲಗಳನ್ನೇ ಅನುಸರಿಸಿರುವುದಾಗಿ ವೆಂಕಟಸ್ವಾಮಿ ತಿಳಿಸಿದರು.

ಮುಂದಿನ 5, 10 ಅಥವಾ 15 ವರ್ಷಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ವ್ಯವಸ್ಥೆ ಹೋಗಿ ಎಲ್ಲರೂ ಸಾಮಾನ್ಯ ಸ್ಪರ್ಧೆಯಲ್ಲಿ ಆರಿಸಿ ಬರುವಂತಾಗಬೇಕೆಂಬ ಕಲ್ಪನೆಯನ್ನು ಗಮನದಲ್ಲಿರಿಸಿಕೊಂಡು ತಾನು ಹಿಂದುಳಿದವರ ವರ್ಗೀಕರಣ ಮಾಡಿರುವುದಾಗಿ ಅವರು ತಿಳಿಸಿದರು. ಕೆಲವೊಂದು ಜಾತಿಗಳು ಕ್ರಮೇಣ ಶೈಕ್ಷಣಿಕವಾಗಿ ಹಾಗೂ ಉದ್ಯೋಗಗಳಲ್ಲಿ ಮುಂದುವರಿದಂತೆ ಅವುಗಳನ್ನು ಮೀಸಲಾತಿ ವ್ಯವಸ್ಥೆಯಿಂದ ಕೈಬಿಡುವುದು ನಿಜವಾಗಿಯೂ ಅದು ಬೇಕಾದವರಿಗೆ ಒದಗಿಸುವ ದೃಷ್ಟಿಯಿಂದ ಅವಶ್ಯ ಎಂದು ವೆಂಕಟಸ್ವಾಮಿ ಅಭಿಪ್ರಾಯಪಟ್ಟರು.

ಸೌಜನ್ಯವಿಲ್ಲದ ಸರಕಾರ

ವರದಿಯ ಸಂಬಂಧವಾಗಿ [illegible] ವ್ಯಕ್ತಿ ಮಾಡಿದ ಆಯೋಗದ 5 ಸದಸ್ಯರ ಅಭಿಪ್ರಾಯಕ್ಕೆ ಮಹತ್ವ ಕೊಟ್ಟಿದೆ. ಸರಕಾರ ಹಾಗೂ ಮುಖ್ಯಮಂತ್ರಿಯವರು ಅಧ್ಯಕ್ಷರೂ ಸೇರಿದಂತೆ ಇತರ ಸದಸ್ಯರೊಂದಿಗೆ ಅಭಿಪ್ರಾಯವನ್ನು ಕೇಳುವ ಸೌಜನ್ಯವನ್ನು ತೋರದೆ ಇರುವ ಬಗೆಗೂ ಅವರು ವಿಷಾದ ವ್ಯಕ್ತಪಡಿಸಿದರು.

ವರದಿಯನ್ನು ಒಪ್ಪಿದ ಅವರ ವಿರುದ್ಧ ಮಾಡಿದ ಟೀಕೆ [illegible] ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ ಅವರು, [illegible] ಸೌಜನ್ಯದ ವಿಷಯ ಮಾತ್ರ [illegible] ಮುಖ್ಯಮಂತ್ರಿ [illegible] ಬಗ್ಗೆ ಪತ್ರಿಕೆಗಳಲ್ಲಿ ಬಂದಿದ್ದ ಕೆಲವು ಟೀಕೆಗಳನ್ನು ಅವರು ಓದಿ ಹೇಳಿದರು.

ಶಾಸನಾತ್ಮಕವಾದ ವ್ಯಕ್ತಿಯಲ್ಲ, [illegible] ಮಹತ್ವ [illegible] ಇಲ್ಲ ಎಂದು ಹೇಳಿಕೊಂಡ ಅವರು, ಆಯೋಗದ ಕಾರ್ಯನಿರ್ವಹಣೆಯ ಅವಧಿಯಲ್ಲಿ ಆಯೋಗದ ಸದಸ್ಯರಲ್ಲಿ ರಾಜಕೀಯ [illegible] ತಾವು ನಡೆಸಿಕೊಂಡಿರುವುದಾಗಿಯೂ ಹೇಳಿದರು. ತನ್ನ ಕಾರ್ಯನಿರ್ವಹಣೆಯಲ್ಲಿ ಯಾವುದೇ ಪಕ್ಷಪಾತ ಮಾಡಲೀ [illegible] ಪ್ರಭಾವಗಳಾಗಲೀ ಇರಲಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು.

'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು'

"ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು" ಎಂಬ ಗಾದೆಯಂತೆ ಸರ್ಕಾರ ಒಪ್ಪದೇ, ಮೊದಲು ವರದಿಯನ್ನು ತಿರಸ್ಕರಿಸಿ ಅದರ ಸಮಾಧಿ ಮಾಡಿದ್ದಾಯಿತು. ಆದರೆ ವರದಿಯು ಇನ್ನೂ ಜೀವಂತವಾಗಿರುತ್ತದೆ ಎಂದು ಹೇಳಿದ ವೆಂಕಟಸ್ವಾಮಿಯವರು, ವರದಿಯ ಲ್ಲಿನ ಉತ್ತಮ ಅಂಶಗಳ ಬಗೆಗೆ ಮುಖ್ಯಮಂತ್ರಿಯವರೂ ಸೇರಿದಂತೆ ಯಾರೂ ಗಮನಿಸದೇ ಹೋದ ಬಗೆಗೆ ಬೇಸರಗೊಂಡರು.

ಸರ್ಕಾರ ವರದಿಯನ್ನು ಒಪ್ಪಲಿ ಬಿಡಲಿ ತಮಗೆ ವಹಿಸಿದ ಕಾರ್ಯವನ್ನು ಅತ್ಯಂತ ಪ್ರಾಮಾಣಿಕವಾಗಿ ನ್ಯಾಯ ಪರತೆಯಿಂದ ನಿಷ್ಪಕ್ಷ ಮತದಿಂದ ಮಾಡಿದ ತೃಪ್ತಿ ತಮಗಿರುವುದಾಗಿ ಅವರು ಹೇಳಿಕೊಂಡರು.

ಮೌಲ್ಯಮಾಪನ ಬಹಿಷ್ಕಾರ ಚಳವಳಿ ನಾಲ್ಕನೇ ದಿನಕ್ಕೆ

ಬೆಂಗಳೂರು, ಅ. 19- ಸಹಾಯಕ ಶಿಕ್ಷಕರು ಮತ್ತು ಮೌಲ್ಯಮಾಪಕ ಉಪಮುಖ್ಯಸ್ಥರು ತಮ್ಮ ಕೆಲಸಕ್ಕೆ ಬಹಿಷ್ಕಾರ ಹಾಕಿದ್ದರಿಂದಾಗಿ ನಾಲ್ಕನೆ ದಿನವಾದ ಇಂದೂ ಎಸ್. ಎಸ್. ಎಲ್.ಸಿ. ಉತ್ತರಪತ್ರಿಕೆ ಮೌಲ್ಯಮಾಪಕ ಕಾರ್ಯ ಸ್ಥಗಿತವಾಯಿತು.

ತಮ್ಮ ಸಂಘದ ನಾಲ್ವರು ಪದಾಧಿಕಾರಿಗಳು ಮತ್ತು ಇತರ ಬಂಧಿತರ ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆಂದು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಾಯಕ ಶಿಕ್ಷಕರ ಸಂಘ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದೆ.

[illegible] ವೇತನ ಶ್ರೇಣಿಯಲ್ಲಿ ಆಗಿರುವ ಅನ್ಯಾಯದ ನಿವಾರಣೆ, ದೈನಂದಿನ ಮೌಲ್ಯಮಾಪನ ಭತ್ಯೆ ಮತ್ತು ಶುಲ್ಕವನ್ನು ಏರಿಸಬೇಕೆಂಬ ಬೇಡಿಕೆಯನ್ನು ಸಂಘವು ಮುಂದಿಟ್ಟಿದೆ.

ಕೇರಳದ ಖ್ಯಾತ ಚಲಚಿತ್ರ ನಟ ಕೊಟ್ಟಾರಕರ ನಿಧನ

ಕೊಲ್ಲಂ, ಅ.19- ಕೇರಳದ ಖ್ಯಾತ ನಟರಲ್ಲಿ ಒಬ್ಬರಾದ ಕೊಟ್ಟಾರಕರ ಶ್ರೀಧರನ್ ನಾಯರ್ ಅವರು ಇಂದು ಬೆಳಿಗ್ಗೆ ಇಲ್ಲಿ ನಿಧನರಾದರು. ಅವರಿಗೆ 64 ವರ್ಷ ವಯಸ್ಸಾಗಿತ್ತು.

ರಂಗಭೂಮಿ ನಟನಾಗಿ ತಮ್ಮ ಜೀವನ ಆರಂಭಿಸಿದ ಶ್ರೀಧರನ್ ನಾಯರ್, 30 ವರ್ಷಗಳ ಹಿಂದೆ ಚಲನಚಿತ್ರರಂಗವನ್ನು ಪ್ರವೇಶಿಸಿ 300ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು. ರಾಜ್ಯ ಸರಕಾರದ 'ಅತ್ಯುತ್ತಮ ಸಹ ನಟ' ಪ್ರಶಸ್ತಿಯನ್ನು ಅವರು ಎರಡು ಬಾರಿ ಗಳಿಸಿದ್ದರು.

ಪ್ರಾರಂಭದಲ್ಲಿ ಖಳ ನಾಯಕನ ಪಾತ್ರಗಳನ್ನು ವಹಿಸುತ್ತಿದ್ದ ನಾಯರ್, ನಂತರ ಕೇರಳದ ಅತ್ಯುತ್ತಮ ನಟರಲ್ಲಿ ಒಬ್ಬರೆಂದು ಖ್ಯಾತಿ ಪಡೆದರು. 'ಚೆಮ್ಮೀನ್'ನಂತಹ ಕೆಲವು ಚಿತ್ರಗಳಲ್ಲಿ ಅವರು ಸ್ಮರಣೀಯ ಪಾತ್ರಗಳನ್ನು ವಹಿಸಿದ್ದರು.

ಪತ್ನಿ, ಐವರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅಗಲಿದ ಶ್ರೀಧರನ್ ಅವರನ್ನು ಮೂತ್ರಕೋಶದ ತೊಂದರೆ ಕಂಡು ಬಂದುದನ್ನು ಅನುಸರಿಸಿ ನಿನ್ನೆರಾತ್ರಿ ತಡವಾಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ವಿಧಾನ ಸೌಧಕ್ಕೆ ರೈತರ ಜಾಥಾ

(ಮುಂಗಾರು ವರದಿ)

ಬೆಂಗಳೂರು, ಅ. 19 - ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಸೇರಿದ ಸಹಸ್ರಾರು ರೈತರು ತಮ್ಮ ಹತ್ತು ಬೇಡಿಕೆಗಳ ಬಗ್ಗೆ ಸರಕಾರವನ್ನು ಒತ್ತಾಯಿಸಲು ಇಂದಿಲ್ಲಿ ವಿಧಾನ ಸೌಧ ಚಲೋ ಆಚರಿಸಿದರು.

ರಾಜ್ಯದ ಎಲ್ಲಾ ಜಿಲ್ಲೆಗಳ ವಿವಿಧ ಭಾಗಗಳಿಂದ ರೈತರು ಹಾಗೂ ರೈತ ಕಾರ್ಮಿಕರು ತಮ್ಮ ಪ್ರದೇಶದ ಬಟ್ಟೆ ಬರಹಗಳನ್ನು ಹಾಗೂ ಬೇಡಿಕೆಗಳನ್ನೊಳಗೊಂಡ ಭಿತ್ತಿಪತ್ರಗಳನ್ನು ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಸಮಿತಿಯ ಮುಖಂಡರು ತಮ್ಮ ಬೇಡಿಕೆಗಳು ಹಾಗೂ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನೊಳಗೊಂಡ ಮನವಿಯೊಂದನ್ನು ಸರಕಾರಕ್ಕೆ ಸಲ್ಲಿಸಿದರು.

ಸಮಿತಿಯ ಬೇಡಿಕೆಗಳ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಅ. 27ರಂದು ಸಮಿತಿಯ ಪ್ರತಿನಿಧಿಗಳನ್ನು ಮಾತುಕತೆಗೆ ಕರೆದಿದ್ದಾರೆಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖ್ಯ ದಂಡಿ ಪಿ. ಜಗನ್ನಾಥ ಅವರು ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಕೇರಳ ಅಸೆಂಬ್ಲಿ ಅಧಿವೇಶನ ಇಂದು ಆರಂಭ

ತಿರುವನಂತಪುರ, ಅ.19- ನಾಳೆ ಇಲ್ಲಿ ಪ್ರಾರಂಭವಾಗುವ ಕೇರಳ ವಿಧಾನ ಸಭೆಯ ಚಳಿಗಾಲದ ಅಧಿವೇಶನದಲ್ಲಿ ಎಡ ರಂಗವು 53 ತಿಂಗಳುಗಳ ಕೆ. ಕರುಣಾಕರನ್ ನೇತೃತ್ವದ ಸಂಯುಕ್ತ ರಂಗದ ಮಂತ್ರಿ ಮಂಡಲ [illegible] ಆಕ್ಷೇಪ ಎತ್ತಲು ನಿರ್ಧರಿಸಿದೆ.

ಈಗಾಗಲೇ ಆಡಳಿತ ಪಕ್ಷಗಳು ನಿರ್ಧರಿಸಿದಂತೆ ಜನವರಿ ಅಥವಾ ಫೆಬ್ರವರಿಯಲ್ಲಿ ರಾಜ್ಯ ವಿಧಾನಸಭೆ ಚುನಾವಣೆ ನಡೆಯುವುದಾದರೆ ಈ ಅಧಿವೇಶನವೇ ಕೊನೆಯ ಅಧಿವೇಶನ ಆಗಲಿದೆ.

ಕೈಗಾರಿಕೆ ಅಭಿವೃದ್ಧಿಗೆ ಹೊಸ ಯೋಜನೆ

ಇಂದೋರ್, ಅ. 19- ಶೀಘ್ರದಲ್ಲಿ ಕೈಗಾರಿಕೆಗಳನ್ನು ಪುನರ್ವರ್ಗೀಕರಿಸಲಾಗುವುದು, ಶತಾಂಶ ರಫ್ತು ಆಧರಿತ ಉತ್ಪಾದನಾ ಘಟಕಗಳು ಉತ್ಪಾದನೆಯ ಹೆಚ್ಚಳಕ್ಕೆ ಅನುಮತಿ ಪಡೆಯದೆ ಇರುವುದು ಮತ್ತು ಸ್ವಂತ ಉದ್ಯೋಗಕ್ಕೆ ಹೆಚ್ಚಿನ ನಿಧಿಯನ್ನು ಒದಗಿಸುವುದು ಇತ್ಯಾದಿ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ ಕುರಿತ ಪ್ರಸ್ತಾಪಿತ ಯೋಜನೆಗಳ ವಿವರಗಳನ್ನು ಕೇಂದ್ರದ ಕೈಗಾರಿಕಾ ಮಂತ್ರಿ ಎನ್. ಡಿ. ತಿವಾರಿ ಇಂದಿಲ್ಲಿ ಪ್ರಕಟಿಸಿದರು.

ರಾಜ್ಯಗಳಿಂದ ಅವಶ್ಯಕ ಮಾಹಿತಿಗಳನ್ನು ಪಡೆದ ನಂತರ, ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯೋರ್ವರ ನೇತೃತ್ವದ ಒಂದು ಸಮಿತಿ ಕೈಗಾರಿಕಾ ಪುನರ್‌ವಿಂಗಡಣೆಯ ಕುರಿತಾದ ವರದಿಯನ್ನು ಸಲ್ಲಿಸುವುದೆಂದು ಅವರು ವರದಿಗಾರರಿಗೆ ತಿಳಿಸಿದರು.

ಸ್ವೋದ್ಯೋಗ ಯೋಜನೆಯಡಿಯಲ್ಲಿ 7.5 ಲಕ್ಷ ಜನರಿಗೆ 1200 ಕೋಟಿ ರೂಪಾಯಿ ಒದಗಿಸಲಾಗಿದ್ದು, 1990ರ ಹೊತ್ತಿಗೆ ಇನ್ನೂ ಹತ್ತು ಲಕ್ಷ ಜನರಿಗೆ 1400ಕೋಟಿ ರೂ.ಗಳನ್ನು ಈ ಯೋಜನೆಯಡಿಯಲ್ಲಿ ಒದಗಿಸಲು ಸರಕಾರ ಯೋಜಿಸಿದೆಯೆಂದು ಅವರು ಹೇಳಿದರು.

ಬಾಲಘಾಟ್‌ನಲ್ಲಿ ಖಾಸಗಿ ಕ್ಷೇತ್ರದ 300 ಕೋಟಿ ರೂ. ವೆಚ್ಚದ ಪಾಲಿಸ್ಟರ್ ಕಾರ್ಖಾನೆಯನ್ನು ಸ್ಥಾಪಿಸುವ ಪ್ರಸ್ತಾಪ ಸರಕಾರದ ಪರಿಶೀಲನೆಯಲ್ಲಿದ್ದು, ಇತ್ಯರ್ಥಕ್ಕಾಗಿ ಅದನ್ನು ಕೇಂದ್ರ ಮಂತ್ರಿ ಮಂಡಲದಲ್ಲಿ ಮಂಡಿಸಲಾಗುವುದೆಂದು ಅವರು ತಿಳಿಸಿದರು.

ಚುನಾವಣಾ ಮೈತ್ರಿ ಇಲ್ಲ: ಅಡ್ವಾಣಿ

ಜಮ್ಮು, ಅ.19- ಇತರ ಯಾವುದೇ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಮುಂಬರುವ ಕೇರಳ ಮತ್ತು ಪ.ಬಂಗಾಳ ಚುನಾವಣೆಗಳಲ್ಲಿ ಬಿ.ಜೆ.ಪಿ. ಸ್ವತಂತ್ರವಾಗಿ ಸ್ಪರ್ಧಿಸುವುದೆಂದು ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ. ಅಡ್ವಾಣಿ ಇಂದು ಹೇಳಿದರು.

ಬಾಂಗ್ಲಾದಿಂದ ಭಾರತೀಯ ಬೆಸ್ತರ ಬಿಡುಗಡೆ

ಢಾಕ್ಕಾ, ಅ. 19- ಬಾಂಗ್ಲಾದೇಶಕ್ಕೆ ಸೇರಿದ ಜಲಪ್ರದೇಶದಲ್ಲಿ ಮೀನುಗಾರಿಕೆ ನಡೆಸಿದರೆಂಬ ಆಪಾದನೆಗಾಗಿ, ಸುಂದರಬನದಲ್ಲಿ ಕಳೆದ ತಿಂಗಳು ಬಂಧಿಸಲಾಗಿದ್ದ 11 ಮಂದಿ ಭಾರತೀಯ ಬೆಸ್ತರನ್ನು ಬಿಡುಗಡೆ ಮಾಡಲಾಗಿದೆ ಎಂದು ಸರಕಾರದ ಅಧಿಕೃತ ದಿನಪತ್ರಿಕೆ 'ಬಾಂಗ್ಲಾದೇಶ ಟೈಮ್ಸ್' ಇಂದು ವರದಿ ಮಾಡಿತು.

ಬಾಂಗ್ಲಾದೇಶದ ನೌಕಾ ಕಾವಲು ಪಡೆ ವಶಪಡಿಸಿಕೊಂಡಿದ್ದ ಹನ್ನೊಂದು ಯಾಂತ್ರಿಕ ದೋಣಿಗಳನ್ನು ಬಿಡುಗಡೆ ಮಾಡಲಾಗಿದ್ದು, ಅವು ತಾಯ್ನಾಡಿಗೆ ಹಿಂತಿರುಗಿದೆ ಎಂದು ವರದಿ ಹೇಳಿದೆ.

ಭಾರತೀಯ ಬೆಸ್ತರ ವಿರುದ್ಧ ದಾಖಲು ಮಾಡಲಾಗಿದ್ದ ಮೊಕದ್ದಮೆಗಳನ್ನೂ ಹಿಂತೆಗೆದುಕೊಳ್ಳಲಾಗಿದೆ ಎಂದು ಪತ್ರಿಕೆ ತಿಳಿಸಿದೆ.

ತೆಲುಗು-ಗಂಗಾ ಯೋಜನೆ ವೆಚ್ಚ ಹೆಚ್ಚಳ ಸಂಭವ

ತಿರುಪತಿ, ಅ. 19- ಮೂಲತಃ 690 ಕೋಟಿ ರೂಪಾಯಿ ಅಂದಾಜು ವೆಚ್ಚದ ತೆಲುಗು-ಗಂಗಾ ಯೋಜನೆಯ ವೆಚ್ಚ ಹೆಚ್ಚುವ ಸಾಧ್ಯತೆ ಇದೆ ಎಂದು ಆಂಧ್ರ ಪ್ರದೇಶದ ಬೃಹತ್ ನೀರಾವರಿ ಖಾತೆ ಸಚಿವ ಕೆ. ಇ. ಕೃಷ್ಣ ಮೂರ್ತಿ ಹೇಳಿದ್ದಾರೆ.

ಕಳೆದ ವರ್ಷದ ತನಕ ತಮಿಳುನಾಡು ಈ ಯೋಜನೆಗೆ 47 ಕೋಟಿ ರೂಪಾಯಿಗಳನ್ನು ನೀಡಿದ್ದು, ಈ ವರ್ಷ ಏನೂ ನೀಡಿಲ್ಲ. ಮುಂದೆ ಹೆಚ್ಚುವರಿ ವೆಚ್ಚದ ಪಾಲನ್ನೂ ಅದು ಭರಿಸ ಬೇಕಾಗುವುದು ಎಂದು ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಅವರು ಹೇಳಿದರು.

ಈ ಯೋಜನೆಗಾಗಿ ಈಗಾಗಲೇ 130 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 1990ರ ವೇಳೆಗೆ ಅದು ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅವರು ಹೇಳಿದರು.

ಸಾಲಮೇಳದಲ್ಲಿ ಪಾಲ್ಗೊಳ್ಳದಿರಲು ಅಧಿಕಾರಿಗಳಿಗೆ ಕರೆ

ಬೆಂಗಳೂರು, ಅ. 19- ಸಾರ್ವಜನಿಕ ಸಾಲ ಮೇಳದ ಅಂಗವಾಗಿ ನಡೆಯುವ ಯಾವುದೇ ಮೆರವಣಿಗೆ ಅಥವಾ ಸಮಾರಂಭಗಳಲ್ಲಿ ಪಾಲ್ಗೊಳ್ಳದಂತೆ ತನ್ನ ಸದಸ್ಯರಿಗೆ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ (ಎಐಬಿಒಸಿ)ನಿರ್ದೇಶನ ನೀಡಿದೆ.

ಪ್ರಾಯೋಗಿಕವಲ್ಲದ ಗುರಿಗಳನ್ನು ಸಾಲ ಮೇಳಗಳಿಗಾಗಿ ನಿಗದಿ ಮಾಡಿ, ನ್ಯಾಯೋಚಿತವಲ್ಲದ ಕೆಲಸದ ಹೊರೆ ಹೇರುವ ಮೂಲಕ ಅಧಿಕಾರಿಗಳನ್ನು ಹಿಂಸಿಸಲಾಗುತ್ತಿದೆ ಎಂದು ಒಕ್ಕೂಟದ ಪತ್ರಿಕಾ ಹೇಳಿಕೆಯೊಂದರಲ್ಲಿ ಆಪಾದಿಸಲಾಗಿದೆ.

ಅರ್ಜಿಗಳ ಸ್ವೀಕಾರ ಮತ್ತು ಅವುಗಳನ್ನು ಪರಿಶೀಲಿಸಿ ಸಾಲ ನೀಡುವಿಕೆ ನಿರಂತರ ಪ್ರಕ್ರಿಯೆಯಾಗಿದೆ ಎಂದು ತಿಳಿಸಿದ ಹೇಳಿಕೆ, ಅಧಿಕಾರಿಗಳು ಬಡವರಿಗೆ ಸಾಲ ಒದಗಿಸುವ ಕ್ರಿಯೆಯನ್ನು, ಯಾವುದೇ ಗಡುವು ಅಥವಾ ಸಾಧ್ಯವಲ್ಲದ ಗುರಿಗಳನ್ನು ವಿಧಿಸಿಕೊಳ್ಳದೆಯೇ ಮುಂದುವರಿಸುವರು ಎಂದು ಹೇಳಿದೆ.

ಹೈಕೋರ್ಟ್ ನ್ಯಾಯಪೀಠ ಸ್ಥಾಪನೆ

ಶೀಘ್ರದಲ್ಲೇ ಕೇಂದ್ರ ಸರಕಾರದ ನಿರ್ಧಾರ

ಮದರಾಸು, ಅ. 19- ರಾಜ್ಯ ರಾಜಧಾನಿಗಳ ಹೊರತು ಇತರ ನಗರಗಳಲ್ಲಿ ನ್ಯಾಯಪೀಠಗಳನ್ನು ಸ್ಥಾಪಿಸಲು ಹೈಕೋರ್ಟ್‌ಗಳಿಗೆ ಅನುಮತಿ ನೀಡುವ ನಿರ್ಧಾರವನ್ನು ಶೀಘ್ರದಲ್ಲಿ ಕೈಗೊಳ್ಳಲಾಗುವುದೆಂದು ಕೇಂದ್ರದ ಕಾನೂನು ರಾಜ್ಯ ಸಚಿವ ಎಚ್. ಆರ್. ಭಾರದ್ವಾಜ್ ಇಂದು ಹೇಳಿದರು.

ಈ ವಿಚಾರದ ಕುರಿತು ಜಸ್ವಂತ್ ಸಿಂಗ್ ಆಯೋಗದ ವರದಿಯನ್ನು ಮುಂದಿನ ತಿಂಗಳು ಆರಂಭವಾಗುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದೆಂದು ಹೇಳಿದ ಅವರು, ಅನಂತರ ನ್ಯಾಯಪೀಠಗಳನ್ನು ಸ್ಥಾಪಿಸಲು ರಾಜ್ಯಗಳು ಸ್ವತಂತ್ರವಾಗಿರುವುವು ಎಂದು ತಿಳಿಸಿದರು.

ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಪಿ. ಎನ್. ಭಗವತಿಯವರ ವಿರೋಧವಿರುವುದರಿಂದ ದಕ್ಷಿಣದಲ್ಲಿ ಸುಪ್ರೀಂಕೋರ್ಟಿನ ನ್ಯಾಯಪೀಠವನ್ನು ಸ್ಥಾಪಿಸಲು ಕೇಂದ್ರ ಸರಕಾರ ನಿರ್ಧರಿಸಲಿಲ್ಲವೆಂದು ಸಚಿವರು ಹೇಳಿದರು.

ಇಲ್ಲಿಂದ 60 ಕಿ.ಮೀ. ದೂರದಲ್ಲಿರುವ ಪ್ರವಾಸಿ ಕೇಂದ್ರವಾದ ಮಾಮಲ್ಲಪುರಂನಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಭಾರದ್ವಾಜ್ ಅವರು, ಹೈಕೋರ್ಟ್‌ಗಳಲ್ಲಿರುವ ಖಾಲಿ ಸ್ಥಾನಗಳಿಗೆ ಒಂದು ತಿಂಗಳೊಳಗಾಗಿ ನ್ಯಾಯಾಧೀಶರನ್ನು ನೇಮಿಸುವುದಾಗಿ ಹೇಳಿ, ಖಾಲಿ ಸ್ಥಾನದ ಶೇ. 40ನ್ನು ಇತ್ತೀಚೆಗಷ್ಟೇ ಭರ್ತಿ ಮಾಡಲಾಯಿತೆಂದು ತಿಳಿಸಿದರು.

ಭಯೋತ್ಪಾದಕರ ಟ್ರಾನ್ಸ್‌ಮಿಟರ್ ಅವಾಂತರ

ಪಂಜಾಬ್ ಪೊಲೀಸ್ ಸಂಪರ್ಕ ಜಾಲ ಮತ್ತೊಮ್ಮೆ ಸ್ಥಗಿತ

ಅಮೃತಸರ, ಅ. 19- ಭಯೋತ್ಪಾದಕರು ಸ್ಥಾಪಿಸಿರುವ ಅಕ್ರಮ ಶಕ್ತಿಶಾಲಿ ಟ್ರಾನ್ಸ್‌ಮಿಟರ್‌ನಿಂದಾಗಿ ಕಳೆದ ಸಂಜೆ ಮೂರನೇ ಬಾರಿಗೆ ಪಂಜಾಬ್ ಪೊಲೀಸರ ಸಂಪರ್ಕ ಜಾಲವು ಸ್ಥಗಿತವಾಯಿತು ಎಂದು ಪೊಲೀಸ್ ಮೂಲಗಳು ಇಂದಿಲ್ಲಿ ಹೇಳಿವೆ.

ಈ ಮೊದಲು ಸೆಪ್ಟೆಂಬರ್ 30 ಹಾಗೂ ಅಕ್ಟೋಬರ್ 10ರಂದು ಸಂಪರ್ಕಜಾಲ ಸ್ಥಗಿತಗೊಂಡಿತ್ತು. ಈಬಾರಿ 20 ನಿಮಿಷಗಳ ಕಾಲ ಸಂಪರ್ಕ ಸ್ಥಗಿತವಾಯಿತು.

ಈ ಅಕ್ರಮ ಟ್ರಾನ್ಸ್‌ಮಿಟರನ್ನು ಪತ್ತೆಹಚ್ಚಲು ನಿಯೋಜಿತವಾಗಿರುವ ಕೇಂದ್ರೀಯ ತಂತ್ರಜ್ಞರ ತಂಡವು ಇದು ತನಕ ಈ ಕಾರ್ಯದಲ್ಲಿ ಸಫಲವಾಗಿಲ್ಲ.

ಈ ಮಧ್ಯೆ ಫರೀದ್‌ಕೋಟ್ ಜಿಲ್ಲೆಯಲ್ಲಿ ಭಯೋತ್ಪಾದಕರ ಹಿಂಸೆಗೆ ಓರ್ವ ವ್ಯಕ್ತಿ ಬಲಿಯಾಗಿದ್ದಾರೆ.

ಶಿವಸೇನಾ ನಾಯಕ ಬಿಶಂಬರ್‌ದಾಸ್ ಮತ್ತು ಅವರ ಮಗ ಜಗನ್ನಾಥ್ ಅವರ ಹತ್ಯೆಯನ್ನನುಸರಿಸಿ ಭುಗಿಲೆದ್ದ ಹಿಂಸೆಯ ಬೆನ್ನಲ್ಲೇ ಅಕ್ಟೋಬರ್ 13ರಂದು ಮಾಲೌಟ್‌ನಲ್ಲಿ ಹೇರಲಾಗಿದ್ದ ಕರ್ಫ್ಯೂವನ್ನು ಇಂದು ನಾಲ್ಕು ತಾಸು ಸಡಿಲಿಸಲಾಯಿತು.

ನಿನ್ನೆ ರಾತ್ರಿ ಅಮೃತಸರದಲ್ಲಿ ನಾಲ್ಕು ಮಂದಿ ಸಶಸ್ತ್ರ ಭಯೋತ್ಪಾದಕರು ಮನೆಯೊಂದಕ್ಕೆ ನುಗ್ಗಿ ನಗದು ಮತ್ತು ಚಿನ್ನಾಭರಣಗಳನ್ನು ದೋಚಿದ್ದಾರೆ.

ನಿನ್ನೆ ರಾತ್ರಿ ಫರೀದ್ ಕೋಟ್ ಜಿಲ್ಲೆಯ ಬಾಗಾಪುರಾನ್‌ದಲ್ಲಿ ಬಿಎಸ್ಎಫ್ ಗಳ ಅಂಗರಕ್ಷಕರೊಬ್ಬರನ್ನು ಮೂರು ಮಂದಿ ಸಂಶಯಿತ ಭಯೋತ್ಪಾದಕರು ಗುಂಡಿಟ್ಟು ಕೊಂದರು.

ಇದೇ ವೇಳೆ ಕಳೆದ ಎಂಟು ದಿನಗಳಿಂದ ಫಿಲ್ಲೌರ್‌ನಲ್ಲಿ ಪಂಜಾಬ್ ಹಿಂದು ಶಿವಸೇನೆ ನಡೆಸುತ್ತಿದ್ದ ಚಳವಳಿ ಮುಕ್ತಾಯಗೊಂಡಿದೆ. ಶಿವಸೇನಾ ನಾಯಕ ವಿಜಯ ಮೋಹನ್ ಅವರ ಕೊಲೆ ಪ್ರಕರಣದ ತನಿಖೆ ನಡೆಸುವ ಭರವಸೆಯನ್ನು ಪೊಲೀಸರು ನೀಡಿದುದೇ ಚಳವಳಿಯನ್ನು ಹಿಂತೆಗೆದುಕೊಳ್ಳಲು ಕಾರಣವಾಗಿದೆ.

ಕಾಂಗ್ರೆಸ್ ನಾಯಕ ಅಂಜಯ್ಯ ನಿಧನ

ಹೊಸದಿಲ್ಲಿ, ಅ. 19: ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಟಿ. ಅಂಜಯ್ಯ ಅವರು ನಿನ್ನೆ ರಾತ್ರಿ ಇಲ್ಲಿನ ಡಾ। ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ತೀವ್ರತರ ಹೃದಯಾಘಾತಕ್ಕೆ ಒಳಗಾಗಿ ಅಸುನೀಗಿದರು. ಅವರಿಗೆ 55ವರ್ಷ ವಯಸ್ಸಾಗಿತ್ತು.



ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿಯೂ ಹಾಲಿ ಸಂಸತ್ ಸದಸ್ಯರೂ ಆಗಿದ್ದ ಅಂಜಯ್ಯ ಅವರನ್ನು ಶನಿವಾರ ರಾತ್ರಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಎದೆ ಹೃತ್ಕುಕ್ಷಿಯ ಕಾರ್ಯ ವೈಫಲ್ಯದಿಂದಾಗಿ ಅವರು ಅಸ್ವಸ್ಥರಾಗಿದ್ದರು. ಅತ್ಯುತ್ತಮ ಚಿಕಿತ್ಸೆಯನ್ನು ನೀಡಿದರೂ ಅವರನ್ನು ಬದುಕಿಸುವುದು ಸಾಧ್ಯವಾಗಲಿಲ್ಲವೆಂದು ಆಸ್ಪತ್ರೆಯ ವೈದ್ಯರು ಹೇಳಿದ್ದಾರೆ. ನಿನ್ನೆ ಮಧ್ಯರಾತ್ರಿ ವೇಳೆ ಅವರು ಕೊನೆಯುಸಿರು ಎಳೆದರು. ಪತ್ನಿ, ಒಬ್ಬ ಮಗ ಹಾಗೂ ನಾಲ್ವರು ಹೆಣ್ಣು ಮಕ್ಕಳನ್ನು ಅವರು ಅಗಲಿದ್ದಾರೆ.

ಮೃತ ದೇಹವನ್ನು ಇಂದು ಅಪರಾಹ್ನ ವಿಶೇಷ ವಿಮಾನವೊಂದರಲ್ಲಿ ಹೈದರಾಬಾದಿಗೆ ಒಯ್ಯಲಾಗಿದ್ದು ನಾಳೆ ಸರಕಾರೀ ಗೌರವದೊಂದಿಗೆ ಅಂತ್ಯಕ್ರಿಯೆ ಜರಗಲಿದೆ.

ಸಾರ್ವಜನಿಕರ ವೀಕ್ಷಣೆಗಾಗಿ ಮೃತ ದೇಹವನ್ನು ಇಂದು ಬೆಳಿಗ್ಗೆ ಅಕ್ಬರ್ ರಸ್ತೆಯಲ್ಲಿನ ಎಐಸಿಸಿ (ಐ) ಪ್ರಧಾನ ಕಚೇರಿಗೆ ತರಲಾಗಿತ್ತು. ಹಿರಿಯ ಸಂಪುಟ ಸಚಿವರು ಮತ್ತು ಕಾಂಗ್ರೆಸ್ ನಾಯಕರು ಗೌರವಾರ್ಪಣೆ ಮಾಡಿದರು.

ರಾಷ್ಟ್ರಪತಿ ಜೈಲ್‌ಸಿಂಗ್, ಪ್ರಧಾನಿ ರಾಜೀವ್‌ಗಾಂಧಿ, ವಿರೋಧ ಪಕ್ಷಗಳು ಮತ್ತು ಕಾರ್ಮಿಕ ಸಂಘಟನೆಯ ನಾಯಕರು ಅಂಜಯ್ಯರ ನಿಧನಕ್ಕೆ ತೀವ್ರ ಸಂ

(ಕೊನೆಯ ಪುಟಕ್ಕೆ)

ಸೋಗಿನ ಅಬಕಾರಿ ಅಧಿಕಾರಿಗಳ ಸೆರೆ

ಭೋಪಾಲ್, ಅ. 19 - ಕೇಂದ್ರ ಅಬಕಾರಿಗಳೆಂಬ ಸೋಗಿನಲ್ಲಿ ಮನೆ ಪ್ರವೇಶಿಸಿ, ಗೃಹಿಣಿಯನ್ನು ವಂಚಿಸಿ, ಒಂದು ಲಕ್ಷ ರೂ. ಗಳಿಗೂ ಮಿಕ್ಕಿದ ಚಿನ್ನಾಭರಣಗಳನ್ನು ಅಪಹರಿಸಿ ಕೊಂಡೊಯ್ದ ನಾಲ್ವರಲ್ಲಿ ಮೂವರನ್ನು ಉಜ್ಜೈನಿ ಪೊಲೀಸರು ಬಂಧಿಸಿದ್ದಾರೆ.

ಆ, ಒಂದರಂದು ತಾವು ಅಧಿಕಾರಿಗಳೆಂದು ಹೇಳಿಕೊಂಡು ಮನೆ ಪ್ರವೇಶಿಸಿದ ನಾಲ್ವರು ಮನೆಯನ್ನೆಲ್ಲ ಹುಡುಕಾಡಿ ಚಿನ್ನಾಭರಣಗಳೂ ಸೇರಿದಂತೆ, ಅಮೂಲ್ಯ ವಸ್ತುಗಳನ್ನು ವಶಪಡಿಸಿ ಕೊಂಡಿದ್ದರು. ಗೃಹಿಣಿ ವಶಪಡಿಸಿಕೊಂಡ ವಸ್ತುಗಳಿಗೆ ರಸೀತಿ ಕೊಡುವಂತೆ ಕೇಳಿದಾಗ, ಏನೂ ಕೊಡದೆ ಆಭರಣಗಳೊಂದಿಗೆ ಹೊರಟುಹೋಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ನಂತರ ಉಜ್ಜೈನಿ ಜಿಲ್ಲೆಯ ತನೆರೋ ಎಂಬ ಗ್ರಾಮದಲ್ಲಿ ಮನೆಯೊಂದರಿಂದ ಅಪಹೃತ ಆಭರಣಗಳನ್ನು ಪೊಲೀಸರು ವಶಪಡಿಸಿ ಕೊಂಡಿದ್ದರು.

ಕ್ರಾಂತಿ ಎಬ್ಬಿಸಿದ ಕತ್ತಲಖಂಡ ಪಂಡಲ್ಘಾಟ್

ಪಂಡಲ್‌ಘಾಟ್, ಅ. 19- ವಿಶ್ವದ ಅತ್ಯಂತ ಉದ್ದ ಹಾಗೂ ಅತ್ಯಾಧುನಿಕವಾದ ಹಜೀರಾ-ಬಿಜಾಪುರ್-ಜಗದೀಶ್‌ಪುರ್ (ಎಚ್‌ಬಿಜೆ) ನೈಸರ್ಗಿಕ ಅನಿಲ ಕೊಳವೆ ಮಾರ್ಗದಿಂದಾಗಿ ಮಧ್ಯಪ್ರದೇಶದ ಪಶ್ಚಿಮ ಭಾಗದ ಕುರುಡು ಕಂದಾಚಾರದ ಭಿಲ್ ಬುಡಕಟ್ಟು ಜನರಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗುತ್ತಿವೆ.

ಶತಮಾನಗಳ ಕಾಲ ಹೊರಜಗತ್ತಿನಿಂದ ಪೂರ್ತಿಯಾಗಿ ದೂರವುಳಿದ ಈ ಜನರಲ್ಲಿ ಕಳೆದ ವರ್ಷ ಪ್ರಧಾನಿ ಸಹಿ ಮಾಡಿದ ಈ ಅತ್ಯಾಧುನಿಕ ಯೋಜನೆಗಿಂತ ಉತ್ತಮವಾದ ಕ್ರಿಪ್ರಹಾಗೂ ಸ್ವಾಗತಾರ್ಹ ಜಾಗೃತಿಯನ್ನು ನಿರೀಕ್ಷಿಸುವುದು ಕಷ್ಟವೆನಿಸುತ್ತದೆ.

ಕಗ್ಗಾಡುಗಳ ನಡುವಣ ತಮ್ಮ ಗುಡಿಸಲುಗಳಿಗೆ ಬಂದು ಕಷ್ಟ-ಸುಖ ವಿಚಾರಿಸಿ ತಮ್ಮೊಂದಿಗೆ ಊಟ ಮಾಡಿದ ಪ್ರಥಮ ನಾಯಕನೆಂದು ಇಲ್ಲಿನ ಬುಡಕಟ್ಟು ಜನ ರಾಜೀವ್ ಗಾಂಧಿ ಭೇಟಿಯನ್ನು ಈಗಲೂ ಸ್ಮರಿಸುತ್ತಾರೆ.

ಇತ್ತೀಚಿನ ವರೆಗೆ ಯಾವುದೇ ರಸ್ತೆ ಅಥವಾ ಸಂಪರ್ಕ ಸಾಧನವಿಲ್ಲದೆ ಕತ್ತಲ ಖಂಡವಾಗಿದ್ದ ಈ ಪ್ರದೇಶ ಈಗ ಒಮ್ಮೆಗೇ ವಿಶ್ವದ ಗಮನ ಸೆಳೆದಿದೆ. ಬಾಂಬೆ ಹೈನ ಅನಿಲವನ್ನು ದೇಶದ ಮಧ್ಯ ಭಾಗಕ್ಕೆ ಸಾಗಿಸಲು 1,700 ಕಿ. ಮೀ. ಉದ್ದದ ಕೊಳವೆ ಮಾರ್ಗ ಹಾಕಿಸಲು ಜಗತ್ತಿನ ಕೆಲವು ಅತ್ಯಂತ ಪರಿಣತರು ಇಲ್ಲಿ ಹಗಲುರಾತ್ರಿ ಶ್ರಮಿಸುತ್ತಿದ್ದಾರೆ.

ಕೆಲವು ತಿಂಗಳುಗಳ ಕಾಲ ಉತ್ತಮ ಸಂಬಳದ ಕೆಲಸವನ್ನು ಬಿಟ್ಟರೆ ಯೋಜನೆಯಿಂದ ಬುಡಕಟ್ಟು ಜನರಿಗೇ ಶಾಶ್ವತ ಪ್ರಯೋಜನವೇನೂ ಇಲ್ಲ. ಆದರೆ ಫ್ರೆಂಚ್ ಸಂಸ್ಥೆ ಸ್ಪೀಕಾಗನ್‌ನ ಇಂಜಿನಿಯರುಗಳ ಕಠಿಣ ದುಡಿಮೆ ಸಾಮಾನ್ಯವಾಗಿ ಅಲಸಿಗಳಾದ ಭಿಲ್ ಜನರಲ್ಲಿ ಭಾರೀ ಬದಲಾವಣೆಯನ್ನು ತಂದಿದೆ. ಸ್ಪೀಕಾಗನ್ ಹಾಗೂ ಅದರ ಭಾರತೀಯ ಉಪಸಂಸ್ಥೆ ದೊಡ್ಡಾಲ್‌ನವರು ಇಲ್ಲಿ ಹೂಡಿದ ತಾತ್ಕಾಲಿಕ ಕಚೇರಿಗಳ ಬಳಿ ಕೆಲಸಕ್ಕಾಗಿ ಅವರು ಜಮಾಯಿಸುತ್ತಿದ್ದಾರೆ.

ಎಚ್‌ಬಿಜೆ ಕೊಳವೆ ಮಾರ್ಗದ ಉದ್ಘಾಟನೆಗಾಗಿ ಇಲ್ಲಿಗೆ ಬಂದ ಸ್ಪೀಕಾಗನ್ ಅಧ್ಯಕ್ಷ ಕ್ಲಾಡ್ ಫೋರ್ಟ್‌ಮ್ಯಾನ್ ಅವರು ಭಿಲ್‌ರನ್ನು ಹೊಗಳುತ್ತಾ, "ಅವರಿಂದ ನಾನು ತುಂಬ ಪ್ರಭಾವಿತನಾಗಿದ್ದೇನೆ. ಅವರಿಗೆ ಸ್ವಲ್ಪ ಹೇಳಿದರೆ ಸಾಕು, ಅರ್ಥಮಾಡಿಕೊಳ್ಳುತ್ತಾರೆ" ಎಂದಿದ್ದರು.

ವಿದೇಶಿ ಹಾಗೂ ಭಾರತೀಯ ಇಂಜಿನಿಯರ್ ಫೋರ್‌ಮ್ಯಾನ್‌ಗಳೆಂಬ ಭೇದವಿಲ್ಲದೆ ಎಲ್ಲರೂ ಬುಡಕಟ್ಟು ಜನರೊಂದಿಗೆ ಉತ್ತಮ ಸಂಬಂಧ ಬೆಸೆದಿದ್ದಾರೆ. ಅದರಿಂದಾಗಿ ಕಾಲಬದ್ಧವಾದ ಈ ಯೋಜನೆ ಸುಸೂತ್ರವಾಗಿ ಸಾಗುತ್ತಿದೆ.

ನಾಳೆ ಕಾರವಾರ, ಅಂಕೋಲಾ ಬಂದ್

(ಮುಂಗಾರು ವರದಿ)

ಕಾರವಾರ, ಅ. 19- ನೌಕಾ ನೆಲೆಯಿಂದ ನಿರಾಶ್ರಿತರಾಗಲಿರುವವರ ವೇದಿಕೆ ಈ ತಿಂಗಳ 21ರಂದು ಕಾರವಾರ ಮತ್ತು ಅಂಕೋಲಾ ಬಂದ್ ಆಚರಿಸಲು ಕರೆ ಕೊಟ್ಟಿದೆ.

ತಮ್ಮ ನ್ಯಾಯಯುತವಾದ ಬೇಡಿಕೆಗಳ ಬಗ್ಗೆ ಸರಕಾರದ ಗಮನ ಸೆಳೆಯುವ ಸಲುವಾಗಿ ಈ ಮುಷ್ಕರ ಎಂದು ವೇದಿಕೆಯ ವಕ್ತಾರರು ತಿಳಿಸಿದ್ದಾರೆ.

90ರ ವೇಳೆಗೆ 30 ಹೊಟೇಲು ಸ್ಥಾಪನೆ

ವೆಲ್‌ಕಂ ಗ್ರೂಪ್ ಗುರಿ

ಮಂಗಳೂರು, ಅ. 19– ವೆಲ್‌ಕಂ ಗ್ರೂಪ್ ಮಂಜಾರುನ್ ಹೊಟೇಲ್ ಸಂಸ್ಥೆ 1990 ರ ವೇಳೆಗೆ ಭಾರತದಾದ್ಯಂತ ಸುಮಾರು 30 ಹೊಟೇಲುಗಳನ್ನು ಹೊಂದುವ ನಿರೀಕ್ಷೆ ಇದೆ ಎಂದು ಮಂಗಳೂರಿನ ಮಂಜಾರುನ್ ಹೊಟೇಲ್‌ನ ಸೇಲ್ಸ್ ಮೆನೇಜರ್ ಕೆ. ಜಾರ್ಜ್‌ಜೇಕಬ್ ಅವರು ಹೇಳಿದರು.

ಅವರು ನಿನ್ನೆ ನಗರದಲ್ಲಿರುವ ಮಂಜಾರುನ್ ಹೊಟೇಲ್‌ನಲ್ಲಿ ವೆಲ್‌ಕಂ ಗ್ರೂಪ್ ಸಂಸ್ಥೆಯ ಹೊಟೇಲುಗಳ ಹನ್ನೊಂದನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಮಾತನಾಡುತ್ತಿದ್ದರು.

ಪ್ರಸ್ತುತ ದೇಶದಲ್ಲಿ ವೆಲ್‌ಕಂಗ್ರೂಪ್ ಒಟ್ಟು 21 ಹೊಟೇಲುಗಳನ್ನು ಹೊಂದಿದ್ದು ನುರಿತ ಸೇವಾ ಸಿಬ್ಬಂದಿಗಳಿಂದಾಗಿ ಹೊಟೇಲ್ ಉದ್ಯಮದಲ್ಲಿ ದೇಶದಲ್ಲೇ ಉನ್ನತ ಮಟ್ಟವನ್ನು ಕಾಯ್ದುಕೊಂಡಿದೆ ಎಂದು ಜೇಕಬ್ ವಿವರಿಸಿದರು.

ತಮ್ಮ ಸಂಸ್ಥೆ 1975ರ ಅ.18ರಂದು ಮದ್ರಾಸಿನಲ್ಲಿ ಮೊದಲ ಹೊಟೇಲನ್ನು ತೆರೆಯಿತು ಎಂದು ಹೇಳಿದ ಜೇಕಬ್ ಅವರು, ಗ್ರಾಹಕರಿಗೆ ನಗುಮೊಗದ ಸೇವೆಯನ್ನು ಒದಗಿಸುವುದೇ ತಮ್ಮ ಮೂಲ ಉದ್ದೇಶ ಎಂದರು.

ಎಡನೀರಿಗೆ ಕೇರಳ ಮುಖ್ಯಮಂತ್ರಿ ಭೇಟಿ

ಕಾಸರಗೋಡು, ಅ. 19–ಕೊಲ್ಲೂರು ಕ್ಷೇತ್ರಕ್ಕೆ ಭೇಟಿ ನೀಡಿ ಹಿಂತಿರುಗುವ ದಾರಿಯಲ್ಲಿ ಮಧ್ಯಾಹ್ನ ಮುಖ್ಯಮಂತ್ರಿ ಕೆ. ಕರುಣಾಕರನ್ ಕುಟುಂಬ ಸಮೇತರಾಗಿ ಎಡನೀರು ಮಠಕ್ಕೆ ಭೇಟಿ ನೀಡಿ ಮಹಾಪೂಜೆಯನ್ನು ವೀಕ್ಷಿಸಿ ಕೇಶವಾನಂದ ಭಾರತಿ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿದರು.

ಎಡನೀರಿಗೆ ಆಗಮಿಸಿದ ಮುಖ್ಯಮಂತ್ರಿಗಳನ್ನು ಮಠದ ಮ್ಯಾನೇಜರ್ ನ್ಯಾಯವಾದಿ ಐ.ವಿ.ಭಟ್, ಖಂಡಿಗೆ ಶಾಮಭಟ್, ಅಡೂರು ಉಮೇಶ ನಾಯಕ್ ಅಲ್ಲದೆ ಲೋಕಸಭಾ ಸದಸ್ಯ ಐ. ರಾಮ ರೈ, ಕೆ. ರಾಮಕೃಷ್ಣ ರಾವ್, ಕೋಡೋತ್ ಗೋವಿಂದನ್ ನಾಯರ್, ಪಿ.ಗಂಗಾಧರನ್ ನಾಯರ್, ಎ. ಬಾಲಕೃಷ್ಣ ಮೊದಲಾದ ಕಾಂಗ್ರೆಸ್ ಗಣ್ಯರು ಹೂಹಾರ ಹಾಕಿ ಸ್ವಾಗತಿಸಿ ಪೂರ್ಣ ಕುಂಭದೊಂದಿಗೆ ಮಠಕ್ಕೆ ಕರೆದೊಯ್ದರು. ಮುಖ್ಯಮಂತ್ರಿ ಹಾಗೂ ಕುಟುಂಬದವರು ಮಧ್ಯಾಹ್ನದ ಊಟ ತೀರಿಸಿ ಸುಮಾರು ಎರಡು ಗಂಟೆಗಳನ್ನು ಮಠದಲ್ಲಿ ಕಳೆದರು.

ಶ್ರೀ ಮಠಕ್ಕೆ ಆಗಮಿಸಿದ್ದ ಶಾಸಕಿ ಮನೋರಮಾ ಮಧ್ವರಾಜ್, ಕಾಸರಗೋಡು ಶಾಸಕ ಸಿ. ಟಿ. ಅಹಮದಾಲಿ, ಜಿಲ್ಲಾಧಿಕಾರಿ ಪಿ. ಪ್ರಭಾಕರನ್ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರನ್ನು ಭೇಟಿ ಮಾಡಿದರು.

ಪ್ರಕಟಣೆ: ತಾ: 16-10-1986 ರಂದು ನನ್ನ ತಾಯಿಯ ಆಸ್ತಿಯ ವಿಭಾಗದ ದಸ್ತವೇಜು ಮಾಡುವಾಗ ನನ್ನ ಸಹಿಯನ್ನು ತೆಗೆದುಕೊಂಡು, ಸದ್ರಿ ಸಹಿಯನ್ನು ನನ್ನ ಸ್ವಂತ ಹಾಗೂ ಸ್ವಾಧೀನದ ಆಸ್ತಿಯ ದಸ್ತವೇಜು ಮಾಡಲು ಯಾ ಬೇರೆ ಯಾವುದೇ ಕಾರಣಕ್ಕೆ ದುರುಪಯೋಗ ಪಡಿಸಿದಲ್ಲಿ ಅಂತಹ ದಸ್ತವೇಜು ಸಿಂಧುವಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತೇನೆ. ಟಿ. ಕೆ. ಮೂಸ ಕುಂಞ. ಸೋಮೇಶ್ವರ ತಲಪಾಡಿ, ಮಂಗಳೂರು ತಾಲೂಕು.

ವೈವಾಹಿಕ: ಕೋಟ ಮಹಾ ಜಗತ್ತಿನ ಬಂಟ್ವಾಳ ಪ್ರಾಂತೀಯ ಸಮಿತಿಯು ನವೆಂಬರ್ ಎಂಟರಂದು ಮಂಗಳೂರಲ್ಲಿ ವಿವಾಹ ಸಂಪರ್ಕ ವ್ಯವಸ್ಥೆಯನ್ನು ಏರ್ಪಡಿಸಲಿದ್ದು, ಪಾಲ್ಗೊಳ್ಳಬಯಸುವ ಸಮಾಂಕ್ರೀಯ ಬ್ರಾಹ್ಮಣ ಅಭ್ಯರ್ಥಿಗಳು ಅಕ್ಟೋಬರ್ ಮೂವತ್ತರೊಳಗೆ ವಿವರಗಳನ್ನು ನೋಂದಾಯಿಸುವುದಕ್ಕೆ ಅಂಚೆಚೀಟಿ ಹಚ್ಚಿದ ಲಕೋಟೆಯೊಡನೆ ಬರೆಯಿರಿ: ಸಂಚಾಲಕ, ವಿವಾಹ ಸಂಪರ್ಕ ವೇದಿಕೆ, ಕೇರಾಫ್ ಗಜಾನನ ಜನರಲ್ ಸ್ಟೋರ್ಸ್, ಜೋಡುಮಾರ್ಗ_574 219 ದ.ಕ.

ಕಳೆದುಹೋಗಿದೆ: MEG 7860 ರ ಪಾರ್ಟ್ 'ಬಿ' ಪರ್ಮಿಟ್ ಕಳೆದುಹೋಗಿದೆ. ಸಿಕ್ಕಿದವರು ಕೆಳಗಿನ ವಿಳಾಸಕ್ಕೆ ತಿಳಿಸಬೇಕಾಗಿ ವಿನಂತಿ. ಬಿ. ಆಟೋಟಕರ್ ಭಾಷಾ ಟ್ರಾನ್ಸ್‌ಪೋರ್ಟ್, ಕುಂದಾಪುರ. — 576201

ಲಕ್ಕಿಡಿಪ್ : ಸುಪರ್ ಸ್ಟಾರ್ ಗೇಮ್ಸ್ ಟೀಮ್, ಹ್ಯೊಗೆಬಜಾರ್ ಮಂಗಳೂರು, ಇದರ ವತಿಯಿಂದ ತಾ: 13-10-86ರಂದು ಎತ್ತಿದ ಲಕ್ಕಿಡಿಪ್ ಫಲಿತಾಂಶ: I 1876, II 1459, III 0032.

ಆಕರ್ಷಕ ಬಹುಮಾನಗಳು: 1983, 0754, 1746, 1063, 1901.

ಲಕ್ಕಿಡಿಪ್: ಫ್ರೆಂಡ್ಸ್ ಎಸೋಸಿಯೇಶನ್, ಭೋಜಾ ಮಂಗಳೂರು ಉಳ್ಳಾಲ ಇದರ ವತಿಯಿಂದ ದಿನಾಂಕ 15-10-86ರಂದು ಜರಗಿದ ಲಕ್ಕಿಡಿಪ್ ಫಲಿತಾಂಶಗಳು:- I 02565 II 03318 III 01087.

ಆಕರ್ಷಕ ಬಹುಮಾನಗಳು:- 2567, 0836, 2060, 0316, 3424.

ವಿಜೇತರು 10 ದಿನಗಳೊಳಗಾಗಿ ಅಶೋಕ್‌ಬಾರ್ ಉಳ್ಳಾಲ ಇಲ್ಲಿಂದ ಬಹುಮಾನ ಪಡೆದುಕೊಳ್ಳತಕ್ಕದ್ದು.

ಟೆಲಿಕಾಂ ಜಿಲ್ಲಾ ಇಂಜಿನಿಯರ್ ಆಗಿ ಬಿ. ಎ. ಹೆಗ್ಡೆ

ಮಂಗಳೂರು, ಅ.19–ಮಂಗಳೂರಲ್ಲಿ ಡಿವಿಜನಲ್ ಇಂಜಿನಿಯರ್ ಟೆಲಿಫೋನ್ಸ್ ಆಗಿ ಸೇವೆ ಸಲ್ಲಿಸುತ್ತಿದ್ದ ಬಿ. ಎ. ಹೆಗ್ಡೆ ಅವರನ್ನು ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯಿಸುವಂತೆ "ಟೆಲಿಕಾಂ ಜಿಲ್ಲಾ ಇಂಜಿನಿಯರ್" ಆಗಿ ನೇಮಕ ಮಾಡಲಾಗಿದೆ.

ನ. 1ರಂದ ಅಧಿಕಾರ ವಹಿಸಿಕೊಳ್ಳಲಿರುವ ಬಿ. ಎ. ಹೆಗ್ಡೆ ಅವರು, ದ. ಕ. ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತಿರುವ 12 ಸಬ್‌ಡಿವಿಜನ್‌ಗಳ ಮೇಲೆ ನೇರ ನಿಯಂತ್ರಣ ಹೊಂದಿರುತ್ತಾರೆ.

1984ರ ಜೂನ್ ತಿಂಗಳಲ್ಲಿ ಮಂಗಳೂರಿಗೆ ಆಗಮಿಸಿ ಡಿವಿಜನಲ್ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸಿದ ಬಿ. ಎ. ಹೆಗ್ಡೆ ಅವರು 1985ರ ಅ. 17ರಂದು ಅಂತರ ರಾಷ್ಟ್ರೀಯ ಟ್ರಂಕ್ ಎಕ್ಸ್‌ಚೇಂಜ್ ಉದ್ಘಾಟನೆಗೆ ಕಾರಣರಾದರು.

ಪೋಪ್ ಜಾನ್ ಪಾಲ್ ಹಾಗೂ ಇತ್ತೀಚೆಗೆ ನಗರಕ್ಕೆ ಭೇಟಿ ನೀಡಿದ್ದ ರಾಷ್ಟ್ರಪತಿ ಅವರ ಪ್ರವಾಸದ ವೇಳೆ ದೂರವಾಣಿ ಕೇಂದ್ರ ನಿರ್ವಹಿಸಿದ ಮಹತ್ವದ ಪಾತ್ರದ ಹಿಂದೆ ಬಿ. ಎ. ಹೆಗ್ಡೆ ಅವರ ಶ್ರಮವನ್ನು ಅಲ್ಲಗಳೆಯುವಂತಿಲ್ಲ. 37 ವರ್ಷಗಳ ಸುದೀರ್ಘ ಸೇವೆ ಬಿ. ಎ. ಹೆಗ್ಡೆ ಅವರಿಂದ ದೂರವಾಣಿ ಇಲಾಖೆಗೆ ಸಂದಿದೆ.

ಪ್ರಧಾನಿ ಉಡುಪಿ ಭೇಟಿಯ ಕಾರ್ಯಕ್ರಮ ರೂಪರೇಷೆಗೆ ಇಂದು ಸಭೆ

ಉಡುಪಿ, ಅ. 19– ಪ್ರಧಾನಿ ರಾಜೀವ್ ಗಾಂಧಿಯವರು ಉಡುಪಿಗೆ ಭೇಟಿ ನೀಡುವ ಕಾರ್ಯಕ್ರಮದ ಅಂತಿಮ ರೂಪರೇಷೆಯನ್ನು ನಿರ್ಧರಿಸಲು ನಾಳೆ ಸಂಜೆ 4ಗಂಟೆಗೆ ಉಡುಪಿ ಪ್ರವಾಸಿ ಮಂದಿರದಲ್ಲಿ ಸಭೆ ಕರೆಯಲಾಗಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷೆ ಮನೋರಮಾ ಮಧ್ವರಾಜ್ ಅವರು ತಿಳಿಸಿದ್ದಾರೆ.

ಜಿಲ್ಲೆಯ ಶಾಸಕರುಗಳು, ಬ್ಲಾಕ್ ಅಧ್ಯಕ್ಷರು, ಸೇವಾದಳ ಹಾಗೂ ಪಕ್ಷದ ಮಹಿಳಾ ಘಟಕಗಳ ಅಧ್ಯಕ್ಷರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕಿನ್ನಿಗೋಳಿಯಲ್ಲಿ ನೂತನ ರೋಟರಿ ಕ್ಲಬ್ ಉದ್ಘಾಟನೆ

ಕಿನ್ನಿಗೋಳಿ, ಅ. 19– ಕಿನ್ನಿಗೋಳಿ ರೋಟರಿ ಕ್ಲಬ್ ಶಾಖೆಯನ್ನು ಇತ್ತೀಚೆಗೆ ಇಲ್ಲಿನ ಯುಗ ಪುರುಷ ಕಲ್ಯಾಣ ಮಂಟಪದಲ್ಲಿ ಉದ್ಘಾಟಿಸಲಾಯಿತು.

ರೋಟರಿ ಗವರ್ನರ್ ಡಾ॥ ಆರ್. ಡಿ. ಪ್ರಭು ಅವರು ಶಾಖೆಯನ್ನು ಉದ್ಘಾಟಿಸಿದರು. ಸಮಾರಂಭದಲ್ಲಿ ಮಂಗಳೂರು ಪೋರ್ಟ್‌ಟೌನ್ ರೋಟರಿ ಕ್ಲಬ್‌ನ ಪ್ರಮುಖರಾದ ನಾಗೇಶ್ ಮರೋಳ್, ಕೆ. ಸುಬ್ರಹ್ಮಣ್ಯ ಮತ್ತು ಬಿ. ಆರ್. ರಾವ್ ಉಪಸ್ಥಿತರಿದ್ದರು.

ಕಟೀಲು ದೇವಾಲಯದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಅಸ್ರಣ್ಣ ಹಾಗೂ ದಾಮಸ್ಕಟ್ಟೆಯ ಫಾ। ವಾಲ್ಟರ್ ಮೆಂಡೋನ್ಸಾ ಅವರು ಆಶೀರ್ವಚನಗೈದರು.

ನೂತನ ಶಾಖೆಯ ಅಧ್ಯಕ್ಷರಾಗಿ ಡಾ। ಐ. ಪಿ. ಅಶ್ವಣ್ಣ, ಉಪಾಧ್ಯಕ್ಷರಾಗಿ ಫಾ। ಜೋಸೆಫ್ ಕಾರ್ಡೋಜ, ಕಾರ್ಯದರ್ಶಿಯಾಗಿ ಜೆ. ಬಿ. ಸೀಕ್ವೇರಾ, ಕೋಶಾಧಿಕಾರಿಯಾಗಿ ಬಿ. ಆರ್. ಶೆಣೈ ಆಯ್ಕೆಯಾದರು.

ಡಾ॥ ಸತೀಶ್ ಹೊಳ್ಳ, ಗೋಪಾಲ ಶೆಟ್ಟಿ, ಚಾರ್ಲ್ಸ್‌ಮಿನೇಜಸ್, ಆಲ್ವಿನ್ ನೊರೋನ್ಹಾ ಅವರಿಗೆ ಕ್ರಮವಾಗಿ ಅಂತರಾಷ್ಟ್ರೀಯ ಸೇವೆ, ಔದ್ಯೋಗಿಕ ಸೇವೆ, ಸಾಮುದಾಯಿಕ ಸೇವೆ ಹಾಗೂ ಸಾರ್ಜೆಂಟ್ -ಎಟ್- ಆರ್ಮ್ಸ್ ಪದವಿ ನೀಡಲಾಯಿತು.

ರಾಜ್ಯ ಲೋಕ ಸೇವಾ ಆಯೋಗದ ಸೂಚನೆ ತಿದ್ದುಪಡಿ

ಬೆಂಗಳೂರು, ಅ. 19-ಕರ್ನಾಟಕ ಲೋಕಸೇವಾ ಆಯೋಗ 1985-86 ಕ್ಕಾಗಿ ಗಜೆಟೆಡ್ ಪ್ರೊಬೇಷನರ್ಸ್ ವರ್ಗ 'ಎ' ಮತ್ತು 'ಬಿ' ಹುದ್ದೆಗಳಿಗೆ ಪರೀಕ್ಷೆ ನಡೆಸಲು ಜು. 18ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ 'ಬಿ' ವರ್ಗ ಉದ್ಯೋಗಾರ್ಥಿಗಳ ವೇತನದ ಶ್ರೇಣಿಯನ್ನು ರೂ. 1050 – 50–1200–60 – 1500–75 – 1950ರ ಬದಲಾಗಿ ರೂ. 920–30 – 950 – 1200 – 60–1500–75–1725 ಎಂದು ತಿದ್ದುಪಡಿ ಮಾಡಿ ಓದಿಕೊಳ್ಳಬೇಕೆಂದು ಕರ್ನಾಟಕ ಲೋಕಸೇವಾ ಆಯೋಗದ ಸಹಾಯಕ ನಿರ್ದೇಶಕರು ವಿನಂತಿಸಿದ್ದಾರೆ.

ಸಂದರ್ಶನ ದಿನಾಂಕ

ಆಯೋಗ ಈ ಹುದ್ದೆಗಳಿಗಾಗಿ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳಿಗೆ ಸಂದರ್ಶನ ಪತ್ರ ಕಳುಹಿಸಿದೆ.

ಕೆಲವರಿಂದ ಸಂದರ್ಶನ ದಿನಾಂಕ ಬದಲಾವಣೆಗೆ ವಿನಂತಿ ಬಂದಿದ್ದರೂ ಕೂಡಾ ಯಾವುದೇ ಕಾರಣದಿಂದಲೂ ಯಾವ ಅಭ್ಯರ್ಥಿಗೂ ಸಂದರ್ಶನದ ಸ್ಥಳ ಅಥವಾ ದಿನಾಂಕವನ್ನು ಬದಲಾಯಿಸಲಾಗುವುದಿಲ್ಲವೆಂದು ಆಯೋಗದ ಕಾರ್ಯದರ್ಶಿ ತಿಳಿಸಿದ್ದಾರೆ.



ಕಲ್ಯಾಣಪುರ ವಲಯದ ಎಲ್ಲಾ ಕ್ಯಾಥೊಲಿಕ್ ಚರ್ಚ್‌ಗಳ ವ್ಯಾಪ್ತಿಯ ಕ್ಯಾಥೊಲಿಕ್ ಯೂತ್ ಕೌನ್ಸಿಲ್‌ನ 1986-87ನೆ ಸಾಲಿನ ಅಧ್ಯಕ್ಷರಾಗಿ ಸಿರಿಲ್ ಮೊಂತೇರೊ, ಕೊಳಲಗಿರಿ ಅವರು ಆಯ್ಕೆಯಾಗಿದ್ದಾರೆ. ಪ್ರಸ್ತುತ ಇವರು ಮಣಿಪಾಲ ಎಂ.ಐ.ಟಿ.ಯ ಉದ್ಯೋಗಿಯಾಗಿರುತ್ತಾರೆ.

ಕೊಲ್ಲೂರಲ್ಲಿ ಕೇರಳದ ಪ್ರವಾಸಿ ಮಂದಿರ

ಕಾಸರಗೋಡು, ಅ. 19– ಕೇರಳದಿಂದ ಕೊಲ್ಲೂರಿಗೆ ಆಗಮಿಸುತ್ತಿರುವ ಭಕ್ತ ಜನರ ಅನುಕೂಲಕ್ಕಾಗಿ ಕೊಲ್ಲೂರಿನಲ್ಲಿ ಕೇರಳ ಸರಕಾರದ ವತಿಯಿಂದ ಪ್ರವಾಸೀ ಮಂದಿರವೊಂದನ್ನು ನಿರ್ಮಿಸುವ ಯೋಜನೆಯಿದೆ ಎಂದು ಮುಖ್ಯಮಂತ್ರಿ ಕೆ. ಕರುಣಾಕರನ್ ಅವರು ವರದಿಗಾರರಿಗೆ ತಿಳಿಸಿದ್ದಾರೆ.

ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲ್ಪಡುವ ಈ ಮಂದಿರಕ್ಕೆ ಬೇಕಾದ ಸ್ಥಳವನ್ನು ಒದಗಿಸಲು ಕರ್ನಾಟಕ ಸರಕಾರವನ್ನು ವಿನಂತಿಸಿಕೊಳ್ಳಲಾಗುವುದೆಂದೂ ಅವರು ನುಡಿದರು.

ಅಲ್ಲದೆ ಕೊಲ್ಲೂರು– ಗುರುವಾಯೂರು ಮಧ್ಯೆ ಕೇರಳ ಸಾರಿಗೆ ನಿಗಮದ ಬಸ್ ಸರ್ವಿಸ್ ಆದಷ್ಟು ಬೇಗನೆ ಆರಂಭಿಸಲಾಗುವುದೆಂದೂ ಅವರು ತಿಳಿಸಿದರು.

ವಿಜಯದಶಮಿಯಂದು ತಮ್ಮ ಮೊಮ್ಮಗನಿಗೆ ವಿದ್ಯಾರಂಭಕ್ಕಾಗಿ ಕುಟುಂಬ ಸಮೇತವಾಗಿ ಕೊಲ್ಲೂರಿಗೆ ಆಗಮಿಸಿದ ಮುಖ್ಯಮಂತ್ರಿಗಳಿಗೆ ದೇವಾಲಯದ ಆಡಳಿತ ವರ್ಗ ಪೂರ್ಣಕುಂಭ ಸ್ವಾಗತ ನೀಡಿದೆ.

ಮೂಕಾಂಬಿಕೆ ದೇವಿಯ ದರ್ಶನಗೈದು ಒಂದು ದಿನ ಕ್ಷೇತ್ರದಲ್ಲಿ ತಂಗಿ ಅ. 12ರಂದು ಮುಖ್ಯಮಂತ್ರಿಗಳು ಕೇರಳಕ್ಕೆ ಹಿಂತಿರುಗಿದ್ದರು.

ಕಾರ್ಖಾನೆಗಳ ಲೈಸನ್ಸ್ ನವೀಕರಣಕ್ಕೆ ಸೂಚನೆ

ಮಂಗಳೂರು, ಅ. 19–ದಕ್ಷಿಣಕನ್ನಡ ಕೊಡಗು ಮತ್ತು ಹಾಸನ ಜಿಲ್ಲೆಗಳ ಕಾರ್ಖಾನೆಗಳ ವ್ಯವಸ್ಥಾಪಕರು ತಮ್ಮ ಕಾರ್ಖಾನೆ ಲೈಸನ್ಸ್‌ನ್ನು 1987ನೇ ಸಾಲಿಗೆ ನವೀಕರಿಸಲು ನವೀಕರಣ ಅರ್ಜಿ ಫಾರಂ ನಂ.2ರ ತ್ರಿ-ಪ್ರತಿ,ನವೀಕರಣ ಶುಲ್ಕ ಕಟ್ಟಿದ ಚಲನ್ ಮತ್ತು ಕಾರ್ಖಾನೆ ಲೈಸನ್ಸ್ ನೊಂದಿಗೆ ಕೊನೆಯ ದಿನಾಂಕ ಅಕ್ಟೋಬರ್ 31 ರೊಳಗೆ ಕಾರ್ಖಾನೆಗಳ ಪರಿವೀಕ್ಷಕರ ಕಚೇರಿ ವಿಭಾಗ–1/2, ಕರಂಗಲ್ಪಾಡಿ, ಮಂಗಳೂರು–3 ಇವರ ಕಚೇರಿಗೆ ತಲುಪುವಂತೆ ಸಲ್ಲಿಸಬೇಕೆಂದು ಅಧಿಕೃತ ಪತ್ರಿಕಾ ಪ್ರಕಟಣೆಯೊಂದು ತಿಳಿಸಿದೆ.

ಕೇಂದ್ರ ಹಣಕಾಸು ಖಾತೆಯ ಸಹಾಯಕ ಸಚಿವ ಜನಾರ್ದನ ಪೂಜಾರಿ ಅವರು ಬಂಟ್ವಾಳ ತಾಲೂಕಿನ ಕುಪ್ಪೆ ಪದವು ಗ್ರಾಮದಲ್ಲಿ ಬಡ ಮಹಿಳೆಯರಿಗೆ ಪಾತ್ರೆಗಳನ್ನು ವಿತರಣೆ ಮಾಡಿದಾಗ.

ನಮ್ಮದು ಮುಕ್ತ ವ್ಯವಸ್ಥೆಯ ಆಡಳಿತ

ಉಡುಪಿಯಲ್ಲಿ ನಜೀರ್‌ಸಾಬ್ ವಿಶ್ಲೇಷಣೆ

(ಮುಂಗಾರು ವರದಿ)

ಉಡುಪಿ, ಅ. 19–ಜನತಾ ಸರ್ಕಾರದ್ದು ಮುಕ್ತ ವ್ಯವಸ್ಥೆಯ ಆಡಳಿತ ವ್ಯವಸ್ಥೆ, ಗುಪ್ತ ವ್ಯವಸ್ಥೆಯಲ್ಲ. ಸರ್ಕಾರದ ಯಾವುದೇ ಇಲಾಖೆಯಾದರೂ ತಾನು ಗಳಿಸಿದ ಪ್ರಗತಿಯ ಸಮ್ಯಕ್ ದರ್ಶನವನ್ನು ಸಂಬಂಧಿತ ಶಾಸಕರು ಹಾಗೂ ಪತ್ರಕರ್ತರಿಗೆ ತೋರಿಸುವುದರ ಮೂಲಕ ತನ್ನನ್ನು ತಾನೇ ಪರೀಕ್ಷೆಗೊಡ್ಡಬೇಕೆಂದು ಗ್ರಾಮೀಣಾಭಿವೃದ್ಧಿ ಸಚಿವ ನಜೀರ್‌ಸಾಬ್ ಅವರು ಅ.17 ರಂದು ಇಲ್ಲಿ ಜರಗಿದ ತಾಲೂಕು ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ ಸಭೆಯಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ವಿಶೇಷವಾಗಿ ಅರಣ್ಯ ಇಲಾಖೆ, ಭೂಸಾರ ಸಂರಕ್ಷಣಾ ಇಲಾಖೆ ಮತ್ತು ಜನಾರೋಗ್ಯ ತಾಂತ್ರಿಕ ಇಲಾಖೆಯ ಅಧಿಕಾರಿಗಳು ಸಚಿವರ ಛೀಮಾರಿಗೆ ಗುರಿಯಾದರು. ಈ ಸಾಲಿನಲ್ಲಿ ಅರೆ–ಬರೆ ಖಾದಿ ಬಟ್ಟೆ ಧರಿಸಿದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧಿಕಾರಿಯೂ ಸಚಿವರ ಇದಿರು ತಪ್ಪು ಉತ್ತರ ಕೊಡುವಲ್ಲಿ ತಮ್ಮ ದೌರ್ಬಲ್ಯವನ್ನು ತೋರಿಸಿಕೊಂಡರು.

ಸರಬರಾಜು ಮತ್ತು ಕಿರು ನೀರು ಸರಬರಾಜು ಮಾಡುವಲ್ಲಿ ಸಚಿವರಿಗೆ ಉತ್ತರ ಕೊಡುವಾಗ ತಡವರಿಸಿದ ಜನಾರೋಗ್ಯ ತಾಂತ್ರಿಕ ಇಲಾಖಾಧಿಕಾರಿಗಳಿಗೆ, "ತೂಕಡಿಸುತ್ತಿದ್ದೀರಾ ?" ಎಂದು ಛೀಮಾರಿ ಹಾಕಿದ ಸಚಿವರು, ಗ್ರಾಮಗಳಿಗೆ ನೀರು ಸರಬರಾಜು ಮಾಡುವುದಕ್ಕೆ ಯಾವುದೇ ಹಣದ ತೊಂದರೆ ಇಲ್ಲ. 'ಬಹುದು' ಎಂದು ಸಬೂಬು ಹೇಳದೆ ನಿಮ್ಮ ಕೆಲಸ 'ಜೇಕು' ಆಗಬೇಕು. ನೀರು ಕೊಡುವ ಪವಿತ್ರ ಕೆಲಸದಲ್ಲಿ ಅಲ್ಲಸಲ್ಲದ ಸಬೂಬನ್ನು ತಾವೆಂದೂ ಸಹಿಸುವುದಿಲ್ಲವೆಂದು ಹೇಳಿದರು.

ಸಭೆಯಲ್ಲಿ ಭಾಗವಹಿಸಿದ ಉಡುಪಿ ಶಾಸಕಿ ಮನೋರಮಾ ಮಧ್ವರಾಜ್ ಮತ್ತು ಕಾಪು ಶಾಸಕ ವಸಂತ ಸಾಲಿಯಾನರು ಹುಡ್ಕೊ ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಬೇಕೆಂದು ಸಚಿವರನ್ನು ಒತ್ತಾಯಿಸಿದಾಗ, ಸಚಿವರು ಈ ಸಲಹೆಗೆ ಒಪ್ಪಿ, ಮುಂದಿನ ಸಲ ಅಂತೆಯೇ ಮಾಡಲು ಅಧಿಕಾರಿಗಳಿಗೆ ಆದೇಶ ನೀಡಿದರು.

ಕುಟುಂಬ ಯೋಜನಾ ಶಸ್ತ್ರಚಿಕಿತ್ಸೆಯಲ್ಲಿ ಅಲ್ಪ ಪ್ರಗತಿ ಸಾಧಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡ ಸಚಿವರು ನಿಮ್ಮ ಕಾರ್ಯಸಾಧನೆ ತಮಗೆ ವಿಷಾದವಾಗುತ್ತಿದೆಯೆಂದರು.

ಅಂತೆಯೇ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಎಚ್ಚರಿಸಿದ ಸಚಿವರು, "ಅಲ್ರೀ, ಈ ಅರೆಬರೆ ಖಾದಿ ಉಡುಗೆ ಏಕೆ? ಪ್ಯಾಂಟ್ ಖಾದಿ ಅಲ್ಲ. ಶರ್ಟ್ ಖಾದಿ. ಇದ್ಯಾವ ವೇಷ?" ಎಂದು ಲೇವಡಿ ಮಾಡಿ, ಬರೀ ಹೊಸ ಘಟಕಗಳನ್ನು ತೆರೆಯುವುದು ಮಂಡಳಿಯ ಗುರಿಯಾಗಬಾರದು. ಅದರ ಪ್ರಗತಿಯ ಕಡೆಗೂ ತೀವ್ರ ಗಮನ ಕೊಡಬೇಕೆಂದರು. ಬ್ರಹ್ಮಾವರ ಶಾಸಕ ಬಸವರಾಜ್ ಕೂಡಾ ಸಭೆಯಲ್ಲಿ ಭಾಗವಹಿಸಿದ್ದರು.

ಗ್ರಾಮಗಳಲ್ಲಿ ಕೇಂದ್ರ ವಲಯ ... ಹಂತ

ಆಯ್ಕೆ

ಮಂಗಳೂರು, ಅ. 19–ಇಲ್ಲಿನಬಂದರು ಕ್ರೆಸೆಂಟ್ ಕೋ ಆಪರೇಟಿವ್ ಸ್ಟೋರ್ಸ್ (ನಿ)ನ ಅಧ್ಯಕ್ಷರಾಗಿ ಅಮೀರ್ ಹುಸೇನ್ ಅವರು ಆಯ್ಕೆಯಾಗಿದ್ದಾರೆ.

ಕೋ ಆಪರೇಟಿವ್ ಸ್ಟೋರ್ಸ್‌ನ ನೂತನ ಕಟ್ಟಡದಲ್ಲಿ ಇತ್ತೀಚೆಗೆ ಜರಗಿದ ಸ್ಟೋರ್ಸ್‌ನ ವಾರ್ಷಿಕ ಮಹಾ ಸಭೆಯಲ್ಲಿ ನೂತನ ಆಡಳಿತ ಮಂಡಳಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಆಡಳಿತ ಮಂಡಳಿಯ ಸದಸ್ಯರಾಗಿ ಹಾಜಿ ಎಂ. ಮಹಮ್ಮದ್, ಹಾಜಿ. ಐ. ಅಬೂಬಕರ್, ಹಾಜಿ. ಕೆ. ಮಹಮ್ಮದ್, ಹಾಜಿ ಕೆ. ಮಿಕ್ದಾದ್, ಕೆ.ಎಂ. ಹೈದರ್, ಎಂ. ಬಿ. ಹಸನ್, ಎ. ಆರ್. ಬಶೀರ್ ಮತ್ತು ಹಾಜಿ ಅಬ್ದುಲ್ ಅಜೀಜ್ ಆಯ್ಕೆಯಾದರು.

7ನೇ ಯೋಜನೆಯಲ್ಲಿ ಗ್ರಾಮೀಣ ನೀರು ಪೂರೈಕೆಗೆ 260 ಕೋ.

(ಮುಂಗಾರು ವರದಿ)

ಬೆಂಗಳೂರು, ಅ. 19– ಗ್ರಾಮೀಣ ಜನರಿಗೆ ಕುಡಿಯುವ ನೀರು ಪೂರೈಕೆಗಾಗಿ ಕರ್ನಾಟಕ ಸರಕಾರ ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ 260ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತಿದೆ ಎಂದು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಅಬ್ದುಲ್ ನಜೀರ್‌ಸಾಬ್ ತಿಳಿಸಿದರು.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಕಂಬಿಬಾಣ ಗ್ರಾಮದಲ್ಲಿ ಕಟ್ಟೆಗೆ 3.35 ಲಕ್ಷ ರೂ.ಗಳಲ್ಲಿ ನಿರ್ಮಿಸಿರುವ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಉದ್ಘಾಟಿಸಿ ಸಚಿವರು ಮಾತನಾಡುತ್ತಿದ್ದರು.

ಇದೇ ಸಂದರ್ಭದಲ್ಲಿ ಸಚಿವರು, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ 22,000ರೂ. ಗಳ ಸಹಾಯ ಧನ ಸೇರಿದಂತೆ ಒಟ್ಟು 67,150 ರೂ. ಗಳ ಸಾಲದ ನೆರವನ್ನು 17ಮಂದಿ ಫಲಾನುಭವಿಗಳಿಗೆ ವಿತರಣೆ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಬಿ. ಎ. ಜೀವಿಜಯ ಮಾತನಾಡಿ ಕುಡಿಯುವ ನೀರು ಪೂರೈಕೆಗಾಗಿ ಕೊಡಗು ಜಿಲ್ಲೆಯಲ್ಲಿ ಕೊಳವೆ ಮೂಲಕ ನೀರು ಒದಗಿಸಲು ಸರಕಾರ ಒಂದು ಕೋಟಿ ರೂ. ನೀಡಿದೆ ಎಂದರು.

ಈ ಸಂದರ್ಭದಲ್ಲಿ ಜೀವಿಜಯ ಜನರಿಗೆ ಹಕ್ಕುಪತ್ರಗಳನ್ನು ವಿತರಿಸಿದರು.

ಶಾಸಕ ಗೋವಿಂದೇಗೌಡ ಅವರ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಬಸರೂರಿನಲ್ಲಿ ಡಿ.ವೈ.ಎಫ್.ಐ. ಬೇಡಿಕೆ ದಿನಾಚರಣೆ

ಬಸರೂರು, ಅ. 19–ಇಲ್ಲಿನ ಡಿ. ವೈ. ಎಫ್.ಐ. ಶಾಖೆಯು ಬಸರೂರು ಸಮಾಜ ಮಂದಿರದಲ್ಲಿ 'ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ' ಬೇಡಿಕೆ ದಿನಾಚರಣೆ ಅಂಗವಾಗಿ ಇತ್ತೀಚೆಗೆ ಸಭೆಯೊಂದನ್ನು ಏರ್ಪಡಿಸಿತ್ತು.

ಸಭೆಯ ಅಧ್ಯಕ್ಷತೆಯನ್ನು ಎಂ. ಗೋವಿಂದ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮುಖಾಲಿ ಪಡೇರಹೋಬಳಿ ಭಾಗವಹಿಸಿದ್ದರು.

ಬಸರೂರು ಗ್ರಾಮದ ಕಾಲಿನ ಪ್ರದೇಶದ ಬಡಜನರಿಗೆ ಭಾಗ್ಯಜ್ಯೋತಿ ಯೋಜನೆ ಮೂಲಕ ವಿದ್ಯುತ್ ದೀಪದ ವ್ಯವಸ್ಥೆ, ನ್ಯಾಯ ಬೆಲೆಯಲ್ಲಿ ಆಹಾರಧಾನ್ಯ ವಿತರಣೆ, ಜಾನುವಾರು ದೊಡ್ಡಿ ದುರಸ್ತಿ, ಸಾರ್ವಜನಿಕ ಮುಖ್ಯ ದೊಡ್ಡಿ ದುರಸ್ತಿ, ದಾರಿದೀಪ ಮುಂತಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಆರಂಭದಲ್ಲಿ ಕೆ. ಜುಬ್ಬೆ ಕರ್ವಾಲೊ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ಎನ್. ಎಸ್. ಎಸ್. ವಿದ್ಯಾರ್ಥಿಗಳ ಶ್ರಮದಾನ

ಪಡುಬೆಳ್ಳೆ, ಅ. 19–ಪಡುಬೆಳ್ಳೆಯ ಗೆಳೆಯರ ಬಳಗ ಹಾಗೂ ಶಿರ್ವ ಎಂ. ಎಸ್. ಆರ್. ಎಸ್. ಕಾಲೇಜಿನ ಎನ್. ಎಸ್. ಎಸ್. ವಿದ್ಯಾರ್ಥಿಗಳಿಂದ ಇತ್ತೀಚೆಗೆ ಶ್ರಮದಾನದ ಮೂಲಕ ರಸ್ತೆ ದುರಸ್ತಿಗೊಳಿಸಲಾಯಿತು.

ಕಾಲೇಜಿನ ಎನ್. ಎಸ್. ಎಸ್. ನಿರ್ದೇಶಕ ಸುಬ್ರಹ್ಮಣ್ಯ ಭಟ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಈ ಸಂಬಂಧ ನಡೆದ ಸಮಾರಂಭದಲ್ಲಿ ಆರ್. ಎಸ್. ಬೆಳ್ಳೆ, ಲೂಯಿಸ್ ಆಳ್ವ, ಬಿ. ವಾಸು ಅಚಾರ್, ಬಿ. ಮಾಧವ ಆಚಾರ್ಯ ಮುಂತಾದವರು ಭಾಗವಹಿಸಿದ್ದರು.

ಉಂಚಳ್ಳಿಯಲ್ಲಿ ವೃದ್ಧೆ ಮತ್ತು ಮೊಮ್ಮಗನ ಕೊಲೆ

ಸಿರ್ಸಿ, ಅ. 19– ಸಿದ್ದಾಪುರ ತಾಲೂಕಿನ ಉಂಚಳ್ಳಿಯ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ಓರ್ವ ವೃದ್ಧೆ ಮತ್ತು ಆಕೆಯ ಮೊಮ್ಮಗನನ್ನು ಬುಧವಾರ ಹೇಯವಾಗಿ ಕೊಲೆಗೈಯ್ಯಲಾಯಿತು.

ಮೊಮ್ಮಗನ ಮೇಲೆ ದಾಳಿ ನಡೆದಾಗ ಕೊಲೆಗಾರನು ಆತನನ್ನು ಕೊಲ್ಲುತ್ತಿದ್ದಾಗ ಮಧ್ಯಪ್ರವೇಶಿಸಿದ ಮುದುಕಿಯನ್ನೂ ಕೊಲ್ಲಲಾಯಿತು ಎಂದು ಪೊಲೀಸರು ತಿಳಿಸಿದರು.

ಆತನನ್ನು ನಂತರ ಬಂಧಿಸಲಾಯಿತಾದರೂ ಈ ಹೇಯ ಕೊಲೆಗೆ ಕಾರಣ ಗೊತ್ತಾಗಿಲ್ಲ.

ಅ. 24ರಂದು ತಾರೀಕ್ ಅನ್ವರ್ ಉಡುಪಿಗೆ

ಉಡುಪಿ, ಅ. 19- ಅಖಿಲ ಭಾರತ ಕಾಂಗ್ರೆಸ್ ಸೇವಾ ದಳದ ಅಧ್ಯಕ್ಷ ತಾರೀಕ್ ಅನ್ವರ್ ಅವರು ಅ. 24ರಂದು ನಡೆಯುವ ಸೇವಾ ದಳದ ಉದ್ಘಾಟನೆ ಸಮಾರಂಭಕ್ಕೆ ಪ್ರಧಾನಿ ಪ್ರವಾಸಿ ಜತೆ ಆಗಮಿಸಲಿದ್ದಾರೆ ಎಂದು ರಾಜ್ಯ ಸೇವಾದಳದ ಅಧ್ಯಕ್ಷ ಬಿ. ಕೆ. ಹರಿಪ್ರಸಾದ್ ಅವರು ತಿಳಿಸಿದ್ದಾರೆ.

ಬಡವರಿಗೆ ಕುಡಿಯುವ ನೀರಿನ ವ್ಯವಸ್ಥೆ

ಆರೋಗ್ಯ ಇಲಾಖೆಗೆ ನಜೀರ್ ನಿರ್ದೇಶನ

ಮಂಗಳೂರು, ಅ. 19–ಗ್ರಾಮೀಣ ಬಡ ಜನತೆಗೆ ಅದರಲ್ಲೂ ವಿಶೇಷವಾಗಿ ದೀನದಲಿತರಿಗೆ ಕುಡಿಯುವ ನೀರಿನ ಪೂರೈಕೆಯನ್ನು ಆದಷ್ಟು ಶೀಘ್ರವಾಗಿ ನೀಡಬೇಕೆಂದೂ ಈ ಉದ್ದೇಶಕ್ಕೆ ಸಾರ್ವಜನಿಕ ಜನಾರೋಗ್ಯ ಇಲಾಖೆಯ ಅಧಿಕಾರ ವರ್ಗದವರು ಇಲಾಖೆಯ ವಿಧಿವಿಧಾನಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡದೇ ಕುಡಿಯುವ ನೀರನ್ನು ಒದಗಿಸಬೇಕೆಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಅಬ್ದುಲ್ ನಜೀರ್ ಸಾಬ್ ಶುಕ್ರವಾರ ತಿಳಿಸಿದರು. ಉಡುಪಿಯಲ್ಲಿ ತಾಲೂಕು ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ ಸಭೆಯ ಅಧ್ಯಕ್ಷತೆ ವಹಿಸಿ, ಕಳೆದ ಆರು ತಿಂಗಳವಧಿಯಲ್ಲಿ ತಾಲೂಕಿನಲ್ಲಿ ಸಾಧಿಸಲಾದ ಪ್ರಗತಿಯ ವಿಶ್ಲೇಷಣೆ ಮಾಡಿದ ಸಚಿವರು ಕಡು ಬಡವರಿಗೆ ಕುಡಿಯುವ ನೀರನ್ನು ಒದಗಿಸುವುದೇ ರಾಜ್ಯ ಸರಕಾರದ ಗುರಿಯಾಗಿದ್ದು, ಈ ಕಾರ್ಯಗಳಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹೆಚ್ಚು ಮುತುವರ್ಜಿ ವಹಿಸಿ ತಪ್ಪದೆ ಪ್ರತಿ ತಿಂಗಳು ನಿಗದಿತ ಸಾಧನೆ ಸಾಧಿಸಬೇಕೆಂದು ಸೂಚನೆ ನೀಡಿದರು.

ಕೃಷಿ ಇಲಾಖೆಯು ಪ್ರಸಕ್ತ ಆರು ತಿಂಗಳ ಅವಧಿಯಲ್ಲಿ ಸುಮಾರು 9,196 ಹೆಕ್ಟೇರ್ ಪ್ರದೇಶದಲ್ಲಿ ಅಧಿಕ ಇಳುವರಿ ಕೊಡುವ ಭತ್ತದ ಬೆಳೆ ಬೆಳೆಸಿದ್ದು ಹಾಗೂ ತಾಲೂಕಿನ 5 ಗ್ರಾಮಗಳನ್ನು ದತ್ತು ಸ್ವೀಕರಿಸಿ ಅವುಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಶೇ. 100 ರಷ್ಟು ಸಾಧನೆ ಮಾಡಿದ ಬಗೆಗೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಮಾಜಿಕ ಅರಣ್ಯ ಕಾರ್ಯಕ್ರಮದನ್ವಯ ಅರಣ್ಯ ಇಲಾಖೆಯು ಕಳೆದ ಆರು ತಿಂಗಳ ಅವಧಿಯಲ್ಲಿ ಸುಮಾರು 6.5 ಲಕ್ಷ ಗಾಳಿಮರ ಹಾಗೂ ಇತರ ಜಾತಿ ಗಿಡಗಳ ಅಭಿವೃದ್ಧಿಪಡಿಸಿ ಗುರಿ ಮೀರಿದ ಸಾಧನೆ ಮಾಡಿರುವುದಕ್ಕೆ ಮತ್ತು ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯನ್ವಯ ಶೇ. 90 ರಷ್ಟು ಕಾರ್ಯ ಸಾಧನೆ ಮಾಡಿದ ಬಗೆಗೆ ಸಚಿವರು ಸಂತೋಷ ವ್ಯಕ್ತಪಡಿಸಿದರು.

ಗಾಮಾಂತರ ಪ್ರದೇಶದ ಬಡ ಜನತೆಗೆ ನಿವೇಶನಗಳನ್ನು ಉಚಿತವಾಗಿ ಹಂಚುವ ಕಾರ್ಯವನ್ನು ತ್ವರಿತಗೊಳಿಸಲು ಮತ್ತು ಗ್ರಾಮಾಂತರದ ವಸತಿರಹಿತರೆಲ್ಲರಿಗೂ ಈ ವರ್ಷದ ಒಳಗೆ ನಿವೇಶನಗಳನ್ನು ಹಂಚಬೇಕೆಂದೂ, ಈ ಯೋಜನೆಯನ್ನು ಯಾವುದೇ ಕಾರಣಕ್ಕೂ ಕುಂಠಿತಗೊಳಿಸಬಾರದೆಂದೂ ಸಚಿವರು ಕಂದಾಯ ಅಧಿಕಾರಿಗಳಿಗೆ ಆದೇಶ ನೀಡಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಕಳೆದ ಆರು ತಿಂಗಳ ಅವಧಿಯಲ್ಲಿ 74 ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಿ ಅವುಗಳಲ್ಲಿ 419 ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿ ಕೊಟ್ಟ ಬಗ್ಗೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ತೆರಿಗೆ ಬಾಕಿ ವಿವಿಧೆಡೆ ವಾಹನ ತಪಾಸಣೆ

ಮಂಗಳೂರು, ಅ. 19 – ಬೆಂಗಳೂರಿನ ಸಾರಿಗೆ ಆಯುಕ್ತರ ಆದೇಶದ ಮೇರೆಗೆ ಅಕ್ಟೋಬರ್ 15ರಿಂದ 30ರ ವರೆಗೆ ನಗರದ ವಿವಿಧ ಭಾಗಗಳಲ್ಲಿ ವಾಹನಗಳ ತೆರಿಗೆ ಬಾಕಿಯ ಬಗ್ಗೆ ತಪಾಸಣೆ ನಡೆಸಲಾಗುವುದು ಹಾಗೂ ತೆರಿಗೆ ಬಾಕಿ ಇರುವ ವಾಹನಗಳನ್ನು ಅವುಗಳ ಮಾಲೀಕರು ಬಾಕಿ ಪಾವತಿ ಮಾಡುವವರೆಗೆ ತಡೆ ಹಿಡಿಯಲಾಗುವುದು.

ಎಲ್ಲಾ ವಾಹನಗಳ ಮಾಲೀಕರು ತಪಾಸಣೆ ಸಮಯದಲ್ಲಿ ತೆರಿಗೆ ಪತ್ರಗಳನ್ನು ತಪಾಸಣಾಧಿಕಾರಿಗಳ ಕೇಳಿದಲ್ಲಿ ಹಾಜರುಪಡಿಸಿ ಸಹಕರಿಸಬೇಕೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ವಿನಂತಿಸಿಕೊಂಡಿರುವರು.

ಲೋಕಸೇವಾ ಪರೀಕ್ಷೆ ಸಂದರ್ಶನ ಪತ್ರ ರವಾನೆ

ಮಂಗಳೂರು, ಅ. 19 – ಕರ್ನಾಟಕ ಲೋಕ ಸೇವಾ ಆಯೋಗವು 1984-85ರ ಗ್ರೂಪ್ ಎ ಮತ್ತು ಬಿ- ಹುದ್ದೆಗಳಿಗೆ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಸಂದರ್ಶನ ಪತ್ರ ಕಳುಹಿಸಲಾಗಿದ್ದು, ಸೂಚಿಸಿದ ಸಂದರ್ಶನ ದಿನಾಂಕ ಅಥವಾ ಸ್ಥಳವನ್ನು ಯಾವುದೇ ಕಾರಣದಿಂದ ಬದಲಾವಣೆ ಮಾಡಲಾಗುವುದಿಲ್ಲ ಎಂದು ತಿಳಿಸಲಾಗಿದೆ.

ಅಭ್ಯರ್ಥಿಗಳು ಸಂದರ್ಶನದ ದಿನಾಂಕ ಮತ್ತು ಸ್ಥಳ ಬದಲಾವಣೆಗೆ ಕೋರದಿರಲು ಲೋಕ ಸೇವಾ ಆಯೋಗದ ಕಾರ್ಯದರ್ಶಿಗಳು ವಿನಂತಿಸಿಕೊಂಡಿದ್ದಾರೆ.

ಪುಸ್ತಕ ಬಿಡುಗಡೆ

ಕೋಟ, ಅ. 19–ಇಲ್ಲಿಗೆ ಸಮೀಪದ ಮಣೂರು ಸರ್ಕಾರಿ ಪ್ರೌಢಶಾಲೆಯ ಅಧ್ಯಾಪಕ ಎ. ವಿಠಲಾನಂದರ ಅವರು ಬರೆದ "ತತ್ವಮ ತತ್ವವಸ್ಥಿತಿ" ಎಂಬ ಪುಸ್ತಕವನ್ನು ಶಾಲಾ ಮುಖ್ಯೋಪಾಧ್ಯಾಯ ಜಿ. ಡಿ. ದಾಸ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಲಾಯಿತು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಶಂಕರನಾರಾಯಣ ಅಡಿಗ ಅವರು ಆಗಮಿಸಿದ್ದರು.

ಆಕಾಶವಾಣಿ

ಮಂಗಳೂರು

20-10-86 (ಸೋಮವಾರ)

ಬೆಳಗ್ಗೆ 6-35 – ವಂದನಾ, ನಂತರ ವಿಚಾರ ದೀಪಿಕೆ, 7–15 ಭಕ್ತಿಗೀತೆ ಸುಧೆ. 7–20 ಸಂಗೀತ ಪಾಠ, 7–45 ಕನ್ನಡ ಚಿತ್ರಗೀತೆಗಳು, 8–21 ಭಾವವಿಪುಲ– ಕನ್ನಡ ಹಾಡುಗಳು, 8–30 ರಾಷ್ಟ್ರೀಯ ಸಂಗೀತ.

ಮಧ್ಯಾಹ್ನ 1–20 ಚಿತ್ರಗೀತೆ, 2-10 ಹಿಂದಿ ಚಿತ್ರಗೀತೆ, 3–00 ಶೈಕ್ಷಣಿಕ ಪ್ರಸಾರ – ಪರಿಮಳ – ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ, 3–25 ನಲಿಯುನಲಿ – ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ.

ಸಂಜೆ 5–30 ಪ್ರಾದೇಶಿಕ ಸಂಗೀತ, 5–50 ರೇಡಿಯೋ ವರದಿ – ಸಂಗೀತ, [illegible] ಕೃಷಿ ರಂಗ 7.45 ಯುವವಾಣಿ, 8–30 ಚಿತ್ರಗೀತೆ 9–16 - ಕಾವ್ಯಧಾರೆ, 9–30 ನಾಟಕ ರೂಪಕ, 10–00 ರಾಷ್ಟ್ರೀಯ ಸಂಗೀತ.

ಭದ್ರಾವತಿ

ಬೆಳಗ್ಗೆ 6–10 ಗೀತಾರಾಧನ, 6–41 ದೇಶಭಕ್ತಿ ಗೀತೆ, 6–45 ಗೀತ ಮಾಧುರ್ಯ – ಭಾವಗೀತೆ, 7-15 ದಿಲ್ಲಿ, 7–20 ಚಿತ್ರಮಯ – ಕವಿಕಾವ್ಯ ಪರಿಚಯ.

ಮಧ್ಯಾಹ್ನ 12–30 ಚಿತ್ರಗೀತೆಗಳು, 1–00 ಭಾವಗೀತೆಗಳು, 1–20 ಚಿತ್ರಗೀತೆ, 2–10 ಚಿತ್ರಗೀತೆ.

ಸಂಜೆ 5–30 ಚಿತ್ರರಂಜನಿ. 10–30 ಹಿಂದೂಸ್ತಾನಿ ರಾಷ್ಟ್ರೀಯ ಸಂಗೀತ.

ದೂರದರ್ಶನ

20-10-86 (ಸೋಮವಾರ)

ಸಂಜೆ 3-10 ಶ್ರೀನಗರದಲ್ಲಿ ನಡೆಯುವ ಅಖಿಲ ಭಾರತ ಇಂದಿರಾ ಗೋಲ್ಡ್ ಕಪ್ ಫೈನಲ್ ಪಂದ್ಯದ ನೇರ ಪ್ರಸಾರ. 6.00 ಆರಂಭಿಕ ಪ್ರಕಟಣೆಗಳು, ನಂತರ ಮಹಿಳೆಯರಿಗಾಗಿ ಕಾರ್ಯಕ್ರಮ – "ಅವ್ ಕೆ. ಬಚ್ಚೋಂ ಕಾ ಸ್ವಾಸ್ಥ್ಯ." 6-15 ಮಕ್ಕಳ ಕಾರ್ಯಕ್ರಮ 'ಸ್ಪ್ರೆಡ್ ಯುವರ್ ವಿಂಗ್ಸ್' – ಇಂಗ್ಲಿಷ್ ಸರಣಿ ಚಿತ್ರ, 6–35 'ಜಾನ್ ಪೈ ಜವಾನ್ ಪೈ' – ಆರೋಗ್ಯ ಕಾರ್ಯಕ್ರಮ, 7-00 ಕೃಷಿ ದರ್ಶನ್, 7–30 ಪಂಡಿತ ರಾಮಚಂದ್ರ ಮಲ್ಲಿಕ್ ಅವರ ಹಾಡುಗಾರಿಕೆ, 7-40 "ಕವಿ ಕಹಾನಿ" – ಹಿಂದಿ ನಾಟಕ, 9-00 ರಾಜ್ ಸೆ ಸ್ವರಾಜ್ – ಹಿಂದಿ ಸರಣಿ. 9–50 ದಿ ಆರ್ಟ್ ಸ್ ಪರ್ಸ್ಪೆಕ್ಟಿವ್, 10–20 ಪೋಲೀಸ್ ಫೈಲ್ ಸೆ – ಹಿಂದಿ ಸರಣಿ, 10–45 ನೃತ್ಯದ ರಾಷ್ಟ್ರೀಯ ಕಾರ್ಯಕ್ರಮ. – ಕಥಕ್ – ರೇಖಾ ಮೆಹ್ತಾ ಅವರಿಂದ.

ಇಂದಿನ ಕಾರ್ಯಕ್ರಮ

ಬೆಂಗಳೂರು

"ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇದರ ಆಶ್ರಯದಲ್ಲಿ ವಿಚಾರ ಕಮ್ಮಟ. ಡಾ॥ ಡಿ. ಆರ್. ಬಳೂರಗಿ ಅವರಿಂದ "ವಿಜ್ಞಾನ ಮತ್ತು ಶ್ರೀ ಸಾಮಾನ್ಯ" ವಿಷಯದ ಬಗ್ಗೆ ಉಪನ್ಯಾಸ. ಸಮಯ: 5ರಿಂದ 6.

ಬಳಂಜ

ದ. ಕ. ಜಿಲ್ಲಾ ಮಟ್ಟದ ಯುವಜನ ಶ್ರಮ ಮತ್ತು ತರಬೇತಿ ಶಿಬಿರ. ಉಜಿರೆ ಸ್ವೋದ್ಯೋಗ ತರಬೇತಿ ಕೇಂದ್ರದ ಎನ್. ಮಂಜುನಾಥ ಭಟ್ ಅವರಿಂದ ತರಬೇತಿ. ವಿಷಯ: ನಿರುದ್ಯೋಗಿಗಳಿಗೊಂದು ಆಶಾಕಿರಣ "ಸ್ವ ಉದ್ಯೋಗ" ಸಮಯ: ಸಂಜೆ 3 ರಿಂದ 4.



ಬ್ರಹ್ಮಶ್ರೀ ನಾರಾಯಣ ಗುರು ಜಯಂತಿಯಂದು ಮೂಲ್ಕಿಯ ನಾರಾಯಣ ಗುರು ಹೊಲಿಗೆ ತರಬೇತಿ ಕೇಂದ್ರದ 35 ಮಂದಿ ವಿದ್ಯಾರ್ಥಿನಿಯರಿಗೆ ಮೂಲ್ಕಿ ಕೆನರಾ ಬ್ಯಾಂಕಿನ ವತಿಯಿಂದ ಕಡಿಮೆ ದರದ ಬಡ್ಡಿಯಲ್ಲಿ ಹೊಲಿಗೆ ಯಂತ್ರಗಳನ್ನು ಇತ್ತೀಚೆಗೆ ವಿತರಿಸಿದಾಗ. ಚಿತ್ರದಲ್ಲಿ ಕವಿತ ಎಂಟರ್ ಪ್ರೈಸಸ್‌ನ ಸದಾಶಿವ ರೈ, ಕೆನರಾ ಬ್ಯಾಂಕ್ ಮ್ಯಾನೇಜರ್ ಬಾಳಿಗಾ ಹಾಗೂ ವಿದ್ಯಾರ್ಥಿನಿಯರನ್ನು ಕಾಣಬಹುದು.

ಚಿಕ್ಕಮಗಳೂರು ಜಿಲ್ಲೆ ಬಾಳೆ ಹೊನ್ನೂರು ದೂರವಾಣಿ ಕೇಂದ್ರದ ಮೇಲೆ ನಡೆದ ಗೂಂಡಾ ಹಲ್ಲೆಯನ್ನು ಖಂಡಿಸಿ ದೂರ
ಣಿ ನೌಕರರ ಸಂಘದವರು ಬಾಳೆಹೊನ್ನೂರಿನಲ್ಲಿ ಇತ್ತೀಚೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದಾಗ

ಕಾರದ ನೂತನ ಯೋಜನೆ

ರ್ನಾಟಕದ ಎಳನೀರು

ರು ಸಾಗಾಣಿಕೆ ಮಾಡುವ ಹಾಗೂ ಂದ ಅಲೂಗಡ್ಡೆ ಮುಂತಾದ ತರಕಾರಿ ಜವನ್ನು ತರುವ ಸಲುವಾಗಿ ವಿಶೇಷ ೀಗಿಗಳನ್ನು ಅಳವಡಿಸಲು ಕ್ರಮ ಕೈ ಳ್ಳಲಾಗುವುದು.

ತೋಟಗಾರಿಕೆ ಇಲಾಖೆಯು ನಮದೆಹ ರು ಪ್ರಮುಖ ಸ್ಥಳಗಳಲ್ಲಿ ಎಳನೀರು ಾರಾಟ ಕೇಂದ್ರಗಳನ್ನು ಆರಂಭಿಸಲಿದೆ.

ಈ ವಿಷಯವನ್ನು ತೋಟಗಾರಿಕೆ ಾಯಕ ಸಚಿವ ಬಿ.ಸೋಮಶೇಖರ್ ವರು ಹಾಸನದಲ್ಲಿ ಸುದ್ದಿಗಾರರಿಗೆ ತಿಳಿಸಿ ರು.

ಉದ್ದೇಶಿತ ಜಿಲ್ಲಾ ಮಟ್ಟದ ತೋಟ ರಿಕಾ ಉತ್ಪಾದನ ಮಾರುಕಟ್ಟೆ ಮತ್ತು ಸ್ಕರಣ ಸಹಕಾರ ಸಂಘಗಳ ಮೂಲಕ ಳನೀರನ್ನು ಬೆಳೆಗಾರರಿಂದ ಕೊಳ್ಳಲಾಗು ವುದು ಎಂದು ಸಚಿವರು ಹೇಳಿದರು.

ರಾಜ್ಯದ ಪ್ರಮುಖ ನಗರಗಳಲ್ಲಿನ ಸ್ಪತ್ರೆಗಳು ಹಾಗೂ ಆಯ್ದ ಬಸ್ ನಿಲ್ದಾ ಣಗಳಲ್ಲಿ ಸಹ ಎಳನೀರು ಮಾರಾಟ ಕೇಂ ದ್ರವನ್ನು ತೆರೆಯಲಾಗುವುದು ಎಂದು ಹೇಳಿದ ಸಚಿವರು ವಿಶೇಷವಾಗಿ ಬೆಂಗ ಳೂರು–ಮೈಸೂರು ರಸ್ತೆಯಲ್ಲಿ ಚೆನ್ನ ಪಟ್ಟಣದ ಬಳಿ ಇಂತಹ ಕೇಂದ್ರ ಂದ ಒಳ್ಳೆಯ ಫಲಿತಾಂಶ ಸಿಗಬಲ್ಲದು ಎಂದು ತಿಳಿಸಿದರು.

ಉದ್ದೇಶಿಸಿರುವ ತೋಟಗಾರಿಕಾ ಸಹ ಕಾರ ಸಂಘಗಳು ಬೆಳೆಗಾರರಿಗೆ ಹಾಗೂ ಬಳಕೆದಾರರಿಗೆ ಪ್ರಯೋಜನಕಾರಿಯಾಗ ಬಲ್ಲಂತ ದ್ವಿಮುಖ ಸಂಸ್ಥೆಯಾಗಲಿದೆ ಎಂದು ಅವರು ಹೇಳಿದರು.

ಅಜ್ಜಂಪುರ ಶಾಲೆ ವಾರ್ಷಿಕೋತ್ಸವ

ಅಜ್ಜಂಪುರ, ಏ. 11– ಸ್ಥಳೀಯ ಹಿಂದೂ ಪ್ರಾಥಮಿಕ ಶಾಲೆಯ ವಾರ್ಷಿ ಕೋತ್ಸವ ತರೀಕೆರೆ ವಿದ್ಯಾಧಿಕಾರಿ ಬಾಲಾ ಕೃಷ್ಣನವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ನರಸಿಂಹ ಮೂರ್ತಿ, ಸಿದ್ದಪ್ಪ, ಕೃಷ್ಣಾಜಿ ರಾವ್ ಕಾಲೇಜ್ ಪ್ರಿನ್ಸಿಪಾಲ್ ಲಕ್ಷ್ಮೀ ನಾರಾಯಣರು ಶಾಲೆಯ ಬಗ್ಗೆ ಮಾತನಾ ಡಿದರು. ಸರ್ಕಾರಿ ವೈದ್ಯಾಧಿಕಾರಿ ಚಂದ್ರ ಶೇಖರಯ್ಯ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಶಾಲಾ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳು ನಡೆದವು.

ಬೀದರ್ ಜಿಲ್ಲೆ: ಉದ್ದಿಮೆ ಅಭಿವೃದ್ಧಿಗೆ 18 ಕೋ. ರೂ.

ಹೆಗಡೆ ವಿರುದ್ಧ ಟಿಎನ್ನೆನ್ ಹೇಳಿಕೆಗೆ ಬಂದಗದ್ದೆ ಟೀಕೆ

(ಮುಂಗಾರು ವರದಿ)

ಶಿವಮೊಗ್ಗ, ಏ. 11– ರಾಜ್ಯದ ಬರ ಪರಿಸ್ಥಿತಿಯನ್ನು ಎದುರಿಸಲಾಗದೆ ಹೆದರಿ, ಅನಾರೋಗ್ಯವೆಂದು ನಾಟಕವಾಡುತ್ತಾ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಕಾಲ ಕಳೆಯುತ್ತಿದ್ದಾರೆ ಎಂದು ಆರೋ ಪಿಸಿರುವ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಟಿ. ಎನ್. ನರಸಿಂಹ ಮೂರ್ತಿ ಅವರನ್ನು ರಾಜ್ಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ರಮೇಶ್ ಬಂದಗದ್ದೆ ಅವರು ಕಟುವಾಗಿ ಟೀಕಿ ಸಿದ್ದಾರೆ.

ಮುಖ್ಯ ಮಂತ್ರಿಗಳು ಅನಾರೋಗ್ಯ ನಿಮಿತ್ತ ದೆಹಲಿಯಲ್ಲಿ ವಿಶ್ರಾಂತಿ ಪಡೆಯುತ್ತಿ ರುವ "ಸತ್ಯ" ನರಸಿಂಹ ಮೂರ್ತಿ ಅವ ರಿಗೆ ಅರಿವಿದ್ದರೂ, ಕೇವಲ ರಾಜಕೀಯ ಉದ್ದೇಶಕ್ಕಾಗಿ ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡುತ್ತಿರುವುದು ಅವರಲ್ಲಿ ಮೂಲಭೂತವಾದ ಮಾನ ವೀಯ ಮೌಲ್ಯಗಳೇ ಇಲ್ಲದಿರುವುದು ಬಹಿರಂಗವಾಗಿದೆ ಎಂದು ಅವರು ಸುದ್ದಿ ಗಾರರಿಗೆ ತಿಳಿಸಿದರು.

ಇಂತಹ ಕ್ಷುಲ್ಲಕ ಹೇಳಿಕೆಗಳನ್ನು ನೀಡಿದ ನರಸಿಂಹಮೂರ್ತಿ ಅವರು ವಿರೋಧ ಪಕ್ಷದ ನಾಯಕ ಸ್ಥಾನದ ಘನತೆಯನ್ನು ಕಾಪಾಡುವರೆಂಬ ಆಶಯ ವನ್ನು ಅವರು ವ್ಯಕ್ತಪಡಿಸಿದ್ದಾರೆ.

ದೈವಸ್ಥಾನಕ್ಕೆ ಸಾಮಗ್ರಿ ಒದಗಿಸಿದ ದಾನಿಗೆ ಸನ್ಮಾನ

ಕಾರ್ಕಳ, ಏ. 11– ಇಲ್ಲಿಗೆ ಸಮೀಪದ ಎರ್ಲಪಾಡಿ ಹೊಸ್ಮಾರು ಮಾಗೇರ ದೈವಸ್ಥಾ ನಕ್ಕೆ ಬೇಕಾದ ದೈವದ, ಭಂಡಾರ ಸಾಮ ಗ್ರಿಗಳನ್ನು ಸುಮಾರು 25,000 ವೆಚ್ಚದಲ್ಲಿ ನೀಡಿ, ಈ ದೈವಸ್ಥಾನಕ್ಕೆ ದೈವಗಳ ಭಂ

ಮುಂಗಾರು
ಶನಿವಾರ, ಏಪ್ರಿಲ್ 12, 1986

ಗ್ರಾಮಾಂತರಕ್ಕೆ ತಂತ್ರಜ್ಞಾನ

ಈ ದೇಶದ ದಾರಿದ್ರ್ಯ ನಿವಾರಣೆಗಾಗಿ ವಿಜ್ಞಾನವನ್ನೂ ತಂತ್ರಜ್ಞಾನವನ್ನೂ ಗ್ರಾಮಾಂತರ ಪ್ರದೇಶಕ್ಕೆ ಕೊಂಡೊಯ್ಯಬೇಕೆಂದು ಪ್ರಧಾನಿ ರಾಜೀವ ಗಾಂಧಿಯವರು ಪ್ರತಿಪಾದಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಹೂಡಿ ಯಾಂತ್ರೀಕರಣ ನಡೆಸುವುದಕ್ಕೆ ಅವು ಸ್ಥಾಪಿತ ಹಿತಾಸಕ್ತರಿಂದ ವಿರೋಧವುಂಟೆಂದು ಅವರು ಹೇಳಿದ್ದಾರೆ. ಜನರು ಸದಾ ಅನಕ್ಷರಸ್ಥರೂ ಅಜ್ಞಾನಿಗಳೂ ಆಗಿ ಉಳಿದು ಮೌಢ್ಯದ ಮುಸುಕನ್ನು ತೆರೆಯದೆ ಇರುವುದರಿಂದ ಇಂತಹ ಹಿತಾಸಕ್ತರಿಗೆ ಲಾಭವಿರುವುದರಿಂದಲೇ ಯಾಂತ್ರೀಕರಣವನ್ನು ವಿರೋಧಿಸಲಾಗುತ್ತಿದೆಯೆಂದು ಪ್ರಧಾನಿ ಹೇಳುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳಿಗೆ ತಂತ್ರಜ್ಞಾನವನ್ನು ಕೊಂಡೊಯ್ದು ಯಾಂತ್ರೀಕರಣ ನಡೆಸುವ ಸರಕಾರದ ಈ ಹೊಸ ಉಪಕ್ರಮವು ಸ್ವಾಗತಾರ್ಹವಾದದ್ದು. ಸರಕಾರ ಕೊನೆಗೂ ಗ್ರಾಮಾಭಿವೃದ್ಧಿಯ ಬಗ್ಗೆ ಹೊಂದಿರುವ ಆಲೋಚನೆಗಳನ್ನು ಕಾರ್ಯರೂಪಗೊಳಿಸುವ ಮನಸ್ಸು ಮಾಡುತ್ತಿರುವುದು ಸಂತೋಷದಾಯಕವಾದ ವಿಚಾರ. ಈ ತನಕವೂ ಸರಕಾರದ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನವಾದದ್ದು ಕಡಿಮೆ. ಅವುಗಳ ಬಗ್ಗೆ ಬಾಯಿ ಬಡಾಯಿಯೇ ಹೆಚ್ಚು. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಈ ತನಕ ಒಳಗೊಂಡ ಗ್ರಾಮೀಣ ಬಡ ಕುಟುಂಬಗಳ ಸಂಖ್ಯೆಯು ಒಟ್ಟು ಬಡವರಿಗೆ ಹೋಲಿಸಿದರೆ ಅತ್ಯಲ್ಪವೆನಿಸುತ್ತದೆ. ಈ ವೇಗದಲ್ಲಿ ಗ್ರಾಮೀಣ ಬಡವರ ಉದ್ಧಾರದ ಕಾರ್ಯಕ್ರಮಗಳು ನಡೆದರೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಆಗಲು ಒಂದು ಶತಮಾನವೇ ಬೇಕಾದೀತು.

ಆದ್ದರಿಂದ ತ್ವರಿತ ಗತಿಯಲ್ಲಿ ಗ್ರಾಮಾಭಿವೃದ್ಧಿ ಆಗಬೇಕಿದ್ದರೆ ಗ್ರಾಮಾಂತರ ಪ್ರದೇಶದಲ್ಲಿ ಯಂತ್ರ ಕ್ರಾಂತಿ ಆಗಬೇಕು. ದೊಡ್ಡ ಮಟ್ಟದಲ್ಲಿ ತಂತ್ರಜ್ಞಾನ ಅಲ್ಲಿಗೆ ಹರಿಯಬೇಕು ಎನ್ನುವುದು ನಿಜ. ಪ್ರಧಾನಿ ಕಲ್ಪಿಸಿರುವಂತಹ "ಬೇರೆಯವರಿಗೆ ಸರಿ ಮಿಗಿಲೆನಿಸಲು ಒಮ್ಮೆಲೇ ಪ್ರಗತಿಯತ್ತ ನೆಗೆತ" ಆಗಬೇಕು ಎಂಬುದೂ ನಿಜ.

ಹೀಗೆ ಒಮ್ಮೆಲೇ, ಸಾಮೂಹಿಕವಾಗಿ ದೊಡ್ಡ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ತಂತ್ರಜ್ಞಾನ ಕೊಂಡೊಯ್ಯದಿದ್ದರೆ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಆಗದು ಎಂಬಂತಹ ಪರಿಸ್ಥಿತಿಯನ್ನು ಉಂಟು ಮಾಡಿರುವುದು ನಮ್ಮ ಸರಕಾರ ಮತ್ತು ಯೋಜನಾಗಾರರು ಹೊರತು ಬೇರಾರೂ ಅಲ್ಲ. ಗ್ರಾಮಾಭಿವೃದ್ಧಿಯ ತಂತ್ರದ ಬಗ್ಗೆ ನಮ್ಮ ಯೋಜನೆ ನಿರ್ಮಾತೃಗಳಿಗೆ ಸ್ಪಷ್ಟ ಕಲ್ಪನೆಯೇ ಇರಲಿಲ್ಲ. ಔದ್ಯಮೀಕರಣದಿಂದ ಅಭಿವೃದ್ಧಿ ಎಂಬ ತಾರಕಮಂತ್ರವನ್ನು ಅಂಗೀಕರಿಸಿದ್ದರೂ ಉದ್ಯಮಗಳು ನಗರದ ಎಲ್ಲೆಗಳನ್ನು ಬಿಟ್ಟು ಅಲುಗಾಡಲಿಲ್ಲ. ಹಳ್ಳಿಗಳಿಗೆ ಹೋಗುವವರು ಯಾರೂ ಇರಲಿಲ್ಲ. ಗಾಂಧೀಜಿ ಪ್ರತಿಪಾದಿಸಿದ ಕೈಗಾರಿಕಾ ನೀತಿಯನ್ನು ನಮ್ಮ ಆಧುನಿಕ ಅರ್ಥಶಾಸ್ತ್ರಜ್ಞರು ಒಪ್ಪಲಿಲ್ಲ. ಭಾರತದಂತಹ ಹಳ್ಳಿಗಳ ನಾಡಿಗೆ ಗೃಹ ಕೈಗಾರಿಕೆಯ ಹೊರತು ಅಭಿವೃದ್ಧಿಗೆ ಬೇರೆ ದಾರಿ ಇಲ್ಲ ಎಂದು ಗಾಂಧೀಜಿ ಪದೇ ಪದೇ ಪ್ರತಿಪಾದಿಸಿದ್ದರು. ಅದನ್ನು ನಮ್ಮ ಸರಕಾರಗಳು ಕಿವಿಯ ಮೇಲೆ ಹಾಕಿಕೊಂಡಿದ್ದರೆ ನಮ್ಮ ಹಳ್ಳಿಗಳು ಇಂದು ಇರುವಂತಹ ಅಧಃಪತನದ ನಿಕೃಷ್ಟ ಸ್ಥಿತಿಗೆ ಇಳಿಯುತ್ತಿರಲಿಲ್ಲ. ಸಾಂಪತ್ತಿಕ ಅಸಮತೋಲನವು ಇಂದು ಇರುವಂತಹ ಘೋರ ಸ್ಥಿತಿಯನ್ನು ತಲುಪುತ್ತಿರಲಿಲ್ಲ. ಗಾಂಧೀಜಿ ಯಾಂತ್ರೀಕರಣವನ್ನು ವಿರೋಧಿಸಿರಲಿಲ್ಲ. ಗುಡಿ ಕೈಗಾರಿಕೆಗಳಿಗೆ ಏನು ಬೇಕೋ ಎಷ್ಟು ಬೇಕೋ ಅಷ್ಟು ಯಂತ್ರ ಬಳಸಿಕೊಳ್ಳಿ. ಆದರೆ ಮನುಷ್ಯರು ಮಾಡಬಹುದಾದ ಕೆಲಸವನ್ನು ಯಂತ್ರಕ್ಕೆ ಕೊಟ್ಟು ಮನುಷ್ಯರ ಉದ್ಯೋಗ ಕಿತ್ತುಕೊಳ್ಳಬೇಡಿ ಎಂದಷ್ಟೇ ಅವರು ಹೇಳಿದರು. ಅವರ ಮಾತನ್ನು ಕೇಳಿದ್ದರೆ ಇಂದು ನಮ್ಮ ಹಳ್ಳಿ-ಹಳ್ಳಿಗಳ ಜನರು ಉಂಡುಟ್ಟು ಸುಖವಾಗಿರುತ್ತಿದ್ದರು. ನಗರಗಳಲ್ಲಿ ಸಂಪತ್ತಿನ ಪೆಠಾರಿಗಳು ನಿರ್ಮಾಣಗೊಳ್ಳುತ್ತಿರಲಿಲ್ಲ.

ಈಗಲಾದರೂ ಹಳ್ಳಿಗಳಿಗೆ ತಂತ್ರಜ್ಞಾನವನ್ನು ಹರಿಸಲು "ಒಮ್ಮೆಲೇ ಮುನ್ನೆಗೆತ" ಸಾಧಿಸಲು ಯುವ ಪ್ರಧಾನಿ ರಾಜೀವಗಾಂಧಿ ತಯಾರಿ ನಡೆಸಿದ್ದಾರೆ. ಗ್ರಾಮಾಂತರಕ್ಕೆ ವಿಜ್ಞಾನ ಬರಲಿ, ತಂತ್ರಜ್ಞಾನ ಬರಲಿ, ಯಂತ್ರಗಳೂ ಬರಲಿ. ಗ್ರಾಮಾಂತರದ ಬಗ್ಗೆ ಸರಕಾರದ ಈ ಹೊಸ ಆಸಕ್ತಿಯಿಂದ ಅಲ್ಲಿನ ಜನರ ಬದುಕು ಹಸನಾಗುವುದಿದ್ದರೆ ಸಂತೋಷ. ಈ ತನಕ ಹಳ್ಳಿಯ ಯಾರೂ ಹೀಗೆ ಸಹಾಯ ಮಾಡುತ್ತೇನೆನ್ನುವ ಯಾರನ್ನೂ ದೂರ ಮಾಡಿರಲಿಲ್ಲ. ಅವನ ಬಳಿಗೆ ಯಾರೂ ಬಂದಿರಲಿಲ್ಲ. ಅಷ್ಟೇ. ಅವರ ಯೋಗಕ್ಷೇಮ ಕೇಳುವವರೇ ಇರಲಿಲ್ಲ.

ಹಳ್ಳಿ ಹಳ್ಳಿಗೆ ತಂತ್ರಜ್ಞಾನ ತಲುಪಿಸುತ್ತೇವೆ ಎನ್ನುವ ಪ್ರಧಾನ ಮಂತ್ರಿಗೆ ಬಹುಶಃ ಈ ದೇಶದ ಹಳ್ಳಿಗಳ ಸ್ವರೂಪ ಹಾಗೂ ಇಂದಿನ ಅವುಗಳ ಸ್ಥಿತಿಗತಿಯ ಸ್ಪಷ್ಟ ಕಲ್ಪನೆ ಇದ್ದಂತಿಲ್ಲ. ಈ ದೇಶದಲ್ಲಿ ಸುಮಾರು ಎಂಬತ್ತು ಸಾವಿರ ಹಳ್ಳಿಗಳಿವೆ. ಅವುಗಳಲ್ಲಿ ಅನೇಕ ಹಳ್ಳಿಗಳಿಗೆ ರಸ್ತೆ ಇಲ್ಲ. ವಿದ್ಯುತ್ ಕಾಣದ ಹಳ್ಳಿಗಳೇ ಸಾವಿರ ಗಟ್ಟಲೆ ಇವೆ. ಅಭಿವೃದ್ಧಿ ಮಾಡುತ್ತೇವೆಂದರೆ ಇದನ್ನೆಲ್ಲ ಒದಗಿಸಬೇಕಾಗುತ್ತದೆ. ಅದೆಲ್ಲ ಸುಲಭದಲ್ಲಿ ಆಗುವ ಕೆಲಸವಲ್ಲ. ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಅಪಾರ ಸಂಪನ್ಮೂಲ ಬೇಕಾಗುತ್ತದೆ. ಯಾಂತ್ರೀಕರಣವೆಂದರೆ ದೊಡ್ಡ ಮೊತ್ತದ ಹಣವನ್ನು ಹೂಡಬೇಕಾಗುತ್ತದೆ. ಇವಕ್ಕೆಲ್ಲ ಸಂಪನ್ಮೂಲದ ವ್ಯವಸ್ಥೆ ಮಾಡಬೇಕಾಗುತ್ತದೆ. ಸರಕಾರ ಇದಕ್ಕೆ ಸೂಕ್ತ ಯೋಜನೆ ರೂಪಿಸಿ ಮುಂಗಡ ಪತ್ರದಲ್ಲಿ ನಮೂದಿಸಬೇಕಾಗುತ್ತದೆ. ಇಷ್ಟು ಹಣದ ವ್ಯವಸ್ಥೆಯನ್ನು ಸರಕಾರ ಮಾಡಿಕೊಳ್ಳಬೇಕು. ಅದು ಸರಕಾರದಿಂದ ಸಾಧ್ಯವೇ? ಮುಂಗಡಪತ್ರದ ಅರ್ಧಾಂಶವನ್ನು ಗ್ರಾಮಾಭಿವೃದ್ಧಿಗಾಗಿಯೇ ಮೀಸಲಿರಿಸುವ ರಾಜಕೀಯ ಇಚ್ಛಾಶಕ್ತಿ ಈ ಸರಕಾರಕ್ಕೆ ಉಂಟೇ?

ಮುಂಗಾರು

ಶನಿವಾರ, ಮೇ 31, 1986

ಐತೀರ್ಪು ಒಪ್ಪಿಕೊಳ್ಳಿ-ಇಲ್ಲವೆ ತೆಪ್ಪಗಿರಿ

ಬೆಳಗಾವಿ ಗಡಿ ವಿವಾದದ ಪರಿಹಾರಕ್ಕೆ ನ್ಯಾಯಾಂಗ ಆಯೋಗದ ನೇಮಕ ಆಗಬೇಕೆಂದು ಒತ್ತಾಯಿಸಿದ್ದು ಮಹಾರಾಷ್ಟ್ರವೇ, ಕರ್ನಾಟಕವಲ್ಲ. ಇದು ಇತಿಹಾಸದಲ್ಲಿ ದಾಖಲಾಗಿರುವ ಸತ್ಯ. ಗಡಿಪ್ರಶ್ನೆಯನ್ನು ಯಾವುದೇ ರೂಪದಲ್ಲಿ ಮರಳಿ ತೆರೆಯುವುದಕ್ಕೆ ಕರ್ನಾಟಕದ ವಿರೋಧ ಇತ್ತು. ನ್ಯಾಯಾಂಗ ಆಯೋಗ ರಚನೆಯನ್ನೂ ಅದು ವಿರೋಧಿಸಿತ್ತು. ಹೀಗಿದ್ದರೂ 1967ರ ಆಗಸ್ಟ್ ತಿಂಗಳಲ್ಲಿ ಸುಪ್ರೀಂ ಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶ ಮೆಹರ್ ಚಂದ್ ಮಹಾಜನ್ ಅವರು ಸಲ್ಲಿಸಿದ ವರದಿಯಲ್ಲಿನ ಶಿಫಾರಸುಗಳನ್ನು ಕರ್ನಾಟಕ ಒಪ್ಪಿಕೊಂಡಿತು.

ಈ ವರದಿ ಬೆಳಗಾವಿ ನಗರ ಕರ್ನಾಟಕ ರಾಜ್ಯಕ್ಕೇ ಸೇರತಕ್ಕದೆಂದು ತೀರ್ಪು ಕೊಟ್ಟಿದೆ. ಗಡಿ ಬಗ್ಗೆ ತೀರ್ಮಾನಿಸಲು ಅದಕ್ಕೂ ಹಿಂದೆ ನೇಮಿಸಲಾಗಿದ್ದ ಕೆಲವಾರು ಸಮಿತಿಗಳು ಬೆಳಗಾವಿ ನಗರವು ಕರ್ನಾಟಕದಲ್ಲಿಯೇ ಇರತಕ್ಕಂತಹದು ನ್ಯಾಯಸಮ್ಮತವೆಂದೇ ತೀರ್ಪು ಕೊಟ್ಟಿದ್ದವು. ಮಹಾಜನ ವರದಿಯು ಉಳಿದಂತೆ ಬೆಳಗಾವಿ ಜಿಲ್ಲೆಯ ಕೆಲವಾರು ಪ್ರದೇಶಗಳು ಮಹಾರಾಷ್ಟ್ರಕ್ಕೆ ಹಸ್ತಾಂತರವಾಗಬೇಕೆಂದು ಶಿಫಾರಸು ಮಾಡಿದೆ. ಒಟ್ಟಂದದಲ್ಲಿ ತನಗೆ ನಷ್ಟವೇ ಆಗುವುದಾದರೂ ಕರ್ನಾಟಕವು ಈ ಶಿಫಾರಸನ್ನು ಅಂಗೀಕರಿಸಿದೆ. ಗಡಿ ವಿವಾದವೆಂಬುದು ಕೊನೆಗೂ ಒಮ್ಮೆ ಬಗೆಹರಿದು ಜನರು ನೆಮ್ಮದಿಯಿಂದ ಬದುಕಲು ಸಾಧ್ಯವಾಗಬೇಕು ಎಂಬುದೇ ಈ ನಿರ್ಧಾರಕ್ಕೆ ನೆಲೆ.

ಬೆಳಗಾವಿ ಕರ್ನಾಟಕದ್ದೆಂದು ವಿಚಾರವಂತರೆಲ್ಲರೂ ಹೇಳಿರುವಂತಹ ವಾಸ್ತವಿಕತೆಯನ್ನು ಒಪ್ಪಿಕೊಳ್ಳಲು ಮಹಾರಾಷ್ಟ್ರೀಯರು ತಯಾರಿಲ್ಲ. ಅವರು ಬೆಳಗಾವಿ ಸಂಬಂಧವಾದ ಹೋರಾಟವನ್ನು ಒಂದಲ್ಲ ಒಂದು ಕಾರಣ ಹುಡುಕಿ ಜೀವಂತವಾಗಿ ಇರಿಸಿಕೊಂಡು ಬರಲು ಪ್ರಯತ್ನ ನಡೆಸಿದ್ದಾರೆ.

ನಮ್ಮದು ಭಾಷಾವಾರು ಪ್ರಾಂತ ವ್ಯವಸ್ಥೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಭಾಷೆಯನ್ನು ವ್ಯವಹಾರಕ್ಕೆ ಜನ ಸ್ವೀಕರಿಸಿ ಅಳವಡಿಸಿಕೊಂಡಿದ್ದಾರೆ. ಒಂದೊಂದು ಕಡೆ ಒಂದೊಂದು ಭಾಷೆ ನಾಡಿನ ವ್ಯವಹಾರದ ಜೀವತಂತು. ಅದನ್ನು ಬಲಪಡಿಸುವುದಕ್ಕೆ, ಬೆಳೆಸುವುದಕ್ಕೆ ಹಾಗೂ ವಿಸ್ತರಿಸುವುದಕ್ಕೆ ಆಯಾ ರಾಜ್ಯದ ಎಲ್ಲಾ ಸಂಸ್ಥೆಗಳೂ ವ್ಯವಸ್ಥೆಗಳೂ ಪ್ರಯತ್ನಿಸುತ್ತವೆ. ಕರ್ನಾಟಕದಲ್ಲಿ ವಾಸಿಸುವ ಮಂದಿಗೆ ಕನ್ನಡದ ಜ್ಞಾನ ಇರಬೇಕು ಎಂಬ ನಿಯಮ ಇದೆ. ಅದಕ್ಕಾಗಿ ಸೂತ್ರವೊಂದನ್ನು ರೂಪಿಸಲಾಗಿದೆ. ರಾಜ್ಯದ ಎಲ್ಲಾ ಶಾಲೆಗಳಲ್ಲಿ ಕನ್ನಡದ ಕಲಿಕೆ ಕಡ್ಡಾಯವಾಗಿ ಆಗಬೇಕು ಎಂದು ವಿಧಿಸಲಾಗಿದೆ. ಈ ಕಾರ್ಯಕ್ರಮದ ಹೊಳಹು ಬಂದದ್ದು ಗುಂಡೂರಾಯರು ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿ; ಗೋಕಾಕ್ ಚಳವಳಿಯ ಹಿನ್ನೆಲೆಯಲ್ಲಿ. ರಾಜ್ಯಭಾಷೆ ಬೆಳೆಯಬೇಕಾದ್ದು, ಬಲಿಯಬೇಕಾದ್ದು, ಈ ರಾಜ್ಯದ ಎಲ್ಲ ಪ್ರಜೆಗಳು ಅದನ್ನು ಕಲಿಯಬೇಕಾದ್ದು ಅಗತ್ಯ; ಸಹಜ. ಅದರರ್ಥ ಮರಾಠಿಗರಿಗೋ, ತಮಿಳರಿಗೋ ಅವರವರ ಮಾತೃಭಾಷೆ ಕಲಿಯಲು ಹಕ್ಕಿಲ್ಲವೆಂದಲ್ಲ. ಅವರ ಹಕ್ಕಿಗೆ ಯಾರೂ ಕಲ್ಲು ಹೊಡೆದಿಲ್ಲ. ಮುಂಬಯಿಯಲ್ಲಿ ಕನ್ನಡಿಗರಿದ್ದಾರೆ. ಅಲ್ಲಿವಾಸಿಸುವ ಎಲ್ಲಾ ಮಂದಿಗೆ ಮರಾಠಿ ತಿಳಿದಿರಬೇಕುಎಂದು ಮಹಾರಾಷ್ಟ್ರದ ಜನ ಭಾವಿಸಿದರೆ ಅವರ ಭಾವನೆಯನ್ನು ತಪ್ಪೆಂದು ಯಾರೂ ಹೇಳುವಂತಿಲ್ಲ.

ಆದರೆ ಬೆಳಗಾವಿಯಲ್ಲಿ ಅದುವೇ ದೊಡ್ಡ ರಾದ್ಧಾಂತವಾಯಿತು. ಕನ್ನಡ ಕಲಿಯಬೇಕು ಎಂಬ ರಾಜ್ಯ ಸರಕಾರದ ನಿರ್ದೇಶವನ್ನು ಅಲ್ಲಿನ ಮರಾಠಿಗರು ಉಲ್ಲಂಘಿಸುತ್ತಿದ್ದಾರೆ. ಮಹಾರಾಷ್ಟ್ರದ ನಾಯಕರು, ಎಂ.ಇ.ಎಸ್.ನ ಮುಖಂಡರು ಪ್ರಚೋದನೆ ಕೊಡುತ್ತಿದ್ದಾರೆ. ಮಹಾರಾಷ್ಟ್ರವಾದಿಗಳ ಬಹುಮತವಿರುವ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಬೇಕೆಂಬ ಠರಾವು ಇತ್ತೀಚೆಗೆ ಆಯಿತು. ಕನ್ನಡ ಕಲಿಯಬೇಕೆಂಬ ಸರಕಾರಿ ನಿರ್ದೇಶವನ್ನು ವಿರೋಧಿಸಲಾಯಿತು. ಕನ್ನಡ ಆಡಳಿತ ಭಾಷೆ ಅನುಷ್ಠಾನದ ಪ್ರಗತಿ ನೋಡಲು ಬಂದ ಕನ್ನಡ ಕಾವಲು ಸಮಿತಿ ಅಧ್ಯಕ್ಷರಾದ ಪಾಟೀಲ ಪುಟ್ಟಪ್ಪನವರನ್ನು ಕೂಗಾಡಿ ಅವಮಾನ ಮಾಡಲಾಯಿತು. ಇಷ್ಟಾದರೂ ಮಹಾನಗರ ಪಾಲಿಕೆ ಒಂದು ಜನಪರ ಸಂಸ್ಥೆ ಎಂಬ ಕಾರಣಕ್ಕಾಗಿ ಈ ರಾಜ್ಯದ ಜನ ಅದರ ಉದ್ಧಟತನವನ್ನು ಸಹಿಸಿಕೊಂಡಿದ್ದಾರೆ.

ಈ ವಿದ್ಯಮಾನಗಳನ್ನು, ಕನ್ನಡ ಕಲಿಕೆ ವಿರೋಧಿಗಳ ಸತ್ಯಾಗ್ರಹ ಬೆದರಿಕೆಯನ್ನು ಕಂಡ ಪ್ರಧಾನಿ ರಾಜೀವ ಗಾಂಧಿ ಈ ಪ್ರಶ್ನೆಯನ್ನು ಮತ್ತೆ ತೆರೆಯಲು ನಿರಾಕರಿಸಿದ್ದಾರೆ. ಮಹಾರಾಷ್ಟ್ರ-ಕರ್ನಾಟಕ ಗಡಿವಿವಾದ ಬಗೆಹರಿಸಲು ಇನ್ನೊಂದು ಆಯೋಗ ನೇಮಿಸಬೇಕೆಂಬ ಮಹಾರಾಷ್ಟ್ರ ನಾಯಕರ ಬೇಡಿಕೆಗೂ ಅವರು ಕಿವಿಗೊಟ್ಟಿಲ್ಲ. ಇದೀಗ "ಮಹಾಜನ ಆಯೋಗದ ಶಿಫಾರಸನ್ನು ಒಪ್ಪಿಕೊಳ್ಳಿ- ಇಲ್ಲವೇ ತಗಾದೆ ಮಾಡದೆ ತೆಪ್ಪಗಿರಿ" ಎಂಬರ್ಥದ ಮಾತನ್ನು ಮಹಾರಾಷ್ಟ್ರವಾದಿಗಳಿಗೆ ರಾಜೀವಗಾಂಧಿ ಹೇಳಿದ್ದಾರೆ. ಎರಡೂ ಕಡೆಯ ಸಂಕುಚಿತ ಪ್ರವೃತ್ತಿಗಳಿಗೆ ಸೊಪ್ಪು ಹಾಕುತ್ತಾ ಸಮಜಾಯಿಶಿ ಮಾಡುವ ಸಮಯ ಸಾಧಕ ನಡವಳಿಕೆಗಿಂತ ಅವರು ಈಗ ತುಳಿದಿರುವ ಹಾದಿ ಹೆಚ್ಚು ನೀತಿವಂತವಾದದ್ದು; ಸೈದ್ಧಾಂತಿಕ ತಳಪಾಯವನ್ನು ಹೊಂದಿದ್ದು. ನಾಡಿನಆಳ್ವಿಕೆಯಲ್ಲಿ ಎಲ್ಲೆಡೆ ಒಂದೇ ನೀತಿ ಇರಬೇಕು ಎಂಬನೇರ ನಡೆ ಇದಾಗಿದೆ.

"ನೀವೇ ಬಯಸಿದ ನ್ಯಾಯಾಂಗ ಆಯೋಗದ ಶಿಫಾರಸು ಒಪ್ಪಿಕೊಳ್ಳಿ" ಎಂದು ರಾಷ್ಟ್ರ ರಾಜಕಾರಣದಲ್ಲಿ ಪ್ರಬಲರಾದ ಮಹಾರಾಷ್ಟ್ರದ ಮುಖಂಡರಿಗೆ ಹೇಳುವ ಎದೆಗಾರಿಕೆ ಈ ತನಕ ಕೇಂದ್ರ ನಾಯಕರಿಗೆ ಇರಲಿಲ್ಲ. ಈಗ ರಾಜೀವ್ ಗಾಂಧಿ ಅದನ್ನು ಪ್ರದರ್ಶಿಸಿದ್ದಾರೆ.

ಆಯೋಗದ ವರದಿ ಒಪ್ಪಿಕೊಳ್ಳಬೇಕು; ಇಲ್ಲವೆ ಎಲ್ಲ ಮರೆತು ತೆಪ್ಪಗಿರಬೇಕು. ಸಮಸ್ಯೆಯನ್ನು ಮತ್ತೆ ಮತ್ತೆ ಕೆದಕಿ ಗೋಜಲು ಮಾಡಬಾರದು. ಕರ್ನಾಟಕದ್ದು ಅದೇ ನಿಲುವು. ಎಲ್ಲರದ್ದೂ ಅದೇ ಆಗಿರಬೇಕು. ಅದನ್ನೆ ಪ್ರಧಾನ ಮಂತ್ರಿಯೂ ಹೇಳಿದ್ದಾರೆ.

ಓರೆಕೋರೆ

ಇತ್ತಕಣ್ಣು ಹಾಯಿಸುವರೇ

ಪ್ರಿಯರೆ,

ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯ ಆಡಳಿತದಡಿಯಲ್ಲಿರುವ ಗಂಜೀಮಠ, ಮುಚ್ಚೂರು, ನಿಡ್ಡೋಡಿ ರಸ್ತೆಯು ಅವ್ಯವಸ್ಥೆಯ ಆಗರವಾಗಿದ್ದು, ಆಡಳಿತ ಮಂದಿಯ ತೀವ್ರ ನಿರ್ಲಕ್ಷ್ಯತೊಳಗಾಗಿ, ಪ್ರಯಾಣಿಕ ಮಂದಿಯ ಸಂಕಷ್ಟಕ್ಕೆ ಕಾರಣವಾಗಿದೆ.

ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚು ವರ್ಷಗಳಿಂದ ಬಸ್ಸು ಸಂಚಾರ ಹೊಂದಿರುವ ಈ ರಸ್ತೆ ಇನ್ನೂ ಪೂರ್ತಿ ಡಾಮರನ್ನು ಕಾಣದಿರುವುದು ಎಂತಹಾ ವಿಪರ್ಯಾಸ! ಪೇಟೆಗಳಲ್ಲಿ, ಗಲ್ಲಿ, ಗಲ್ಲಿಗಳೂ ಡಾಮರಿನ ದಾರಿಯನ್ನು ಹೊಂದಿರುವಾಗ ಮೂರು ಬಸ್ಸುಗಳ ಓಡಾಟವಿರುವ ಈರಸ್ತೆ ಆಳವಾದ ಹೊಂಡ, ನೀರು ರಸ್ತೆಯಲ್ಲಿ ನಿಲ್ಲುವಂತೆ ಸಹಕಾರಿಯಾಗುವಂತೆ, ಚರಂಡಿ ಇಲ್ಲದಿರುವ ಕೊರಕಲು–ಕೊರಕಲಾದ ರಸ್ತೆ ಇದು ಹಳ್ಳಿ ಉದ್ಧಾರಕ್ಕೆ ಆಡಳಿತ ವರ್ಗ ಪಡುತ್ತಿರುವ ದೀರ್ಘ ಶ್ರಮಕ್ಕೆ ಸಿಕ್ಕುವ ಉತ್ತಮ ಉದಾಹರಣೆ.

ಇದು ಭೀಕರ ಬೇಸಗೆ ಕಾಲ. ಧೂಳಿಬ್ಬಿಸುತ್ತಾ ಚಲಿಸುವ ವಾಹನದ ಕೃಪೆಯಿಂದ, ಪ್ರಯಾಣಿಕ ಮಂದಿಗೆ ಸಾಕೆನಿಸುವಷ್ಟರವರೆಗಿನ ಧೂಳಿನಪ್ರಸಾದ. ವಸ್ತ್ರಗಳೆಲ್ಲವೂ ಮಲಿನ, ಇನ್ನು ಮಳೆಗಾಲದಲ್ಲೋ. ಮಣ್ಣು ಮಿಶ್ರಿತ ನೀರು ಬಸ್ಸಿನ ಕಿಟಕಿಯೆಡೆಯಿಂದ ನುಗ್ಗಿ ಬಂದು ಪ್ರಯಾಣಿಕರನ್ನು ಕಲ್ಮಶಜಲದ ಪ್ರೋಕ್ಷಣೆಯಾಗುತ್ತದೆ. ಆದರೆ ಈ ಬವಣೆ ಚುನಾಯಿತ ಪ್ರತಿನಿಧಿಗಾಗಲೀ, ಆಡಳಿತ ಅಧಿಕಾರಿಗಾಗಲೀ ತಿಳಿಯದಿರುವುದು ತುಂಬಾ ವಿಷಾದನೀಯ.

ಈ ರಸ್ತೆಯ ದುರಸ್ತಿ ಮಾಡಿಲ್ಲ ಎಂಬ ಅಪವಾದವನ್ನು ಬಗೆಹರಿಸಲೆಂದೋ, ನಡು–ನಡುವೆ ಸುಮಾರು 4 ಕಿ.ಮೀ.ಗೆ ಡಾಮರು ಹಾಕಲ್ಪಟ್ಟಿದೆ. 9 ಕಿ. ಮೀ ಇನ್ನು ಡಾಮರಿಗಾಗಿ, ಬಾಯ್ಬಿಡುತ್ತಿದೆ. ಇನ್ನಾದರೂ ಶಾಸಕವರ್ಯರು, ಸರ್ಕಾರದ ಆಡಳಿತಮಂದಿ ಇತ್ತಕಣ್ಣು ಹಾಯಿಸುವರೇ.

—ಎಂ. ಬಿ. ಜನಾರ್ದನ

ಮುಚ್ಚೂರು

ತಾರು ಹಾಕಿ ದೀಪ ಉರಿಸಿ

ಪ್ರಿಯರೆ,

ತೊಕ್ಕೊಟನಿಂದರೈಲುಆಫೀಸಿನಮಾರ್ಗವಾಗಿ ಪರವುಗೆ ಹೋಗುವದಾರಿಯಲ್ಲಿ ಡಾಮರು ಇಲ್ಲದೆ ಪ್ರಯಾಣಿಕರಿಗೂ ವಾಹನಗಳಿಗೂ, ಶಾಲಾ ಮಕ್ಕಳಿಗೂ ತುಂಬಾ ತೊಂದರೆಯಾಗಿದೆ. ಈ ಮಾರ್ಗ ಜಲ್ಲಿಗಳಿಂದ ಕೂಡಿದ್ದು ಜಲ್ಲಿಗಳು ಎದ್ದು ಹಳ್ಳಹೊಂಡಗಳಾಗಿವೆ. ಅದಲ್ಲದೆ ಈ ಮಾರ್ಗದ ಸಾಲಿನಲ್ಲಿ ಲೈಟು ಕಂಬಗಳಿದ್ದರೂ ದೀಪ ಉರಿಯುವುದಿಲ್ಲ.

—ನಾಗರಿಕ

ಪರವು

ಕತ್ತಲಿನಿಂದ ಬೆಳಕಿನೆಡೆಗೆ ನಡೆದು ಬಂದೀತೆ?

ಪ್ರಿಯರೆ,

ಉಪ್ಪಳ ಹೈವೇಯಿಂದ ಒಳಮಾರ್ಗವಾಗಿ ಎರಡೂವರೆ ಕಿ. ಮೀ. ದಾವುಗಾಲಿನಿಂದ ನಡೆದು ಹೋಗುವಾಗ ಸುತ್ತುಮುತ್ತಲ ಊರುಗಳಾದ ಬೇಕೂರು, ಸೋಂಕಾಲ, ಪ್ರತಾಪನಗರ, ಕುರ್ಚನೂರು, ಮತ್ತು ಕೋಡಿಬೈಲುಗಳಿಗೆ 20ನೆಯ ಶತಮಾನ ಕೊನೆ ಮುಟ್ಟಿದ್ದರೂ, ವಿದ್ಯುತ್ ದೀಪ ಬಂದಿಲ್ಲ ಅನ್ನುವುದು ಇಲ್ಲಿಯ ಗ್ರಾಮಸ್ಥರಿಂದ ಬರುವ ವಾಸ್ತವದ ಸಂಗತಿ.

ಕೆಲವು ವರ್ಷಗಳ ಹಿಂದೆಯೇ ಬೇಕೂರಿಗೆ ವಿದ್ಯುತ್ ಸರಬರಾಜು ಕೇಂದ್ರವಿದ್ದರೂ ಈ ವರೆಗೂ ಈ ಗ್ರಾಮಗಳಿಗೆ ವಿದ್ಯುತ್ ದೀಪಗಳು ಪೂರೈಕೆಯಾಗದೆ ಇರುವುದು ವಿಷಾದಕರ. ವರ್ಷಂಪ್ರತಿ ಈ ಗ್ರಾಮಗಳ ನಾಗರಿಕ ದೂರುಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಹೋಗಿವೆಯಾದರೂ ಈ ತನಕ ಯಾವ ಒಂದು ಪ್ರತಿಕ್ರಿಯೆಯೂ ದೊರಕಿಲ್ಲ ಎನ್ನುವುದು ಇಲ್ಲಿಯವರ ಹೇಳಿಕೆ.

ಹೆಚ್ಚಿನ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ದೀಪಗಳು ಲಭ್ಯವಾಗಿರುವಾಗ ಈ ಹಳ್ಳಿ ಪ್ರದೇಶಗಳಿಗೆ ಯಾವ ಪಿತ್ರಾರ್ಜ್ಯದಿಂದ ಕೇರಳ ಸರಕಾರ ಇಂತಹ ತಾರತಮ್ಯ ಹಾಕಿದೆ ಅನ್ನುವುದು ತಿಳಿಯದ ಸಂಗತಿಯಾಗಿದೆ. ಹೀಗೆಯೇ ಸರಕಾರ ಎಷ್ಟು ವರ್ಷಗಳನ್ನು ಕಳೆಯಬಹುದೋ ಏನೋ? ಸಾರ್ವಜನಿಕರಿಗೆ ಆಗಬೇಕಾದ ಸೌಕರ್ಯಗಳಿಗೆ ಸರಕಾರವೇ ಜಾಡ್ಯ ಒಡ್ಡಿದರೆ, ಇದ್ದ, ಸಂಘ ಸಂಸ್ಥೆಗಳಾದರೂ ಏನು ಮಾಡಿಯಾವು. ರಾತ್ರಿ ಹೊತ್ತು ತೊಂದರೆಗೆ ಒಳಪಟ್ಟಿರುವ ನೂರಾರು ಮನೆಗಳಿಗೆ ವಿದ್ಯುತ್‌ದೀಪ ಆದಷ್ಟು ಬೇಗ ಒದಗಿ ಇಲ್ಲಿನವರ ಅಂಧಕಾರವನ್ನು ತೊಲಗಿಸುವುದು ಸೂಕ್ತವಲ್ಲವೇ?

—ಚಂದ್ರಹಾಸ ಕೊಟೆಕಾರ

ಉಪ್ಪಳ



5 ಕೆ. ಜಿ 480 ಗ್ರಾಂ ತೂಕದ ಸ್ವಿಸ್ ಕಾರ್ಪೋರೇಷನ್ನಿನ ಮುದ್ರೆ ಇರುವ ಒಟ್ಟು 47 ಚಿನ್ನದ ಬಿಸ್ಕೆಟ್‌ಗಳನ್ನು ಇತ್ತೀಚೆಗೆ ...ಸ್ಥಳದಲ್ಲಿ ಸ್ಕೂಟರೊಂದರಿಂದ ಭಟ್ಕಳ ಪೊಲೀಸರು ವಶಪಡಿಸಿಕೊಂಡುದನ್ನು ಚಿತ್ರದಲ್ಲಿ ಕಾಣಬಹುದು.

...ಪುತ್ತೂರಿಗೆ 1 ಲಕ್ಷ ...ಲಾಟರಿ

...ಪುತ್ತೂರು, ಮೇ 30– ಈ ಬಾರಿಯ ...ರ್ನಾಟಕ ಲಾಟರಿ ಫಲಿತಾಂಶದಲ್ಲಿ ಪುತ್ತೂ... ...ಲ್ಲಿ ಮಾರಾಟವಾದ ಡಿ.ಒ.ಎಸ್. ...4253 ನಂಬರಿನ ಟಿಕೆಟಿಗೆ ಒಂದು ಲಕ್ಷ ...ಪಾಯಿ ಬಂದಿರುತ್ತದೆ. ಇದು ಪುತ್ತೂರು ...ಸ್ ನಿಲ್ದಾಣದಲ್ಲಿ ಲಾಟರಿ ಟಿಕೆಟಿನ ...ಗು ವ್ಯಾಪಾರ ಮಾಡುವ ಕೆ.ಗೋಪಾ... ...ಕೃಷ್ಣ ಬಲ್ಯಾಯರು ಮಾರಿದ ಟಿಕೆಟಿಗೆ ...ದಿರುವುದೆಂದು ತಿಳಿದು ಬಂದಿದೆ.

...ಹೆಚ್ಚಳಕ್ಕೆ ...ನಿರ್ಮಾಣ'

...ದ ಜೆ. ಬಸವಣ್ಣಪ್ಪ ಅವರು ವಹಿಸಿ... ...ರು.

ಮಗುವಿಗೆ ಭಾಷಾ ಬರವಣಿಗೆ ಬೇಕು

ಪುತ್ತೂರು, ಮೇ 30– ಭಾಷೆಯಲ್ಲಿ ಶುದ್ಧ, ಅಶುದ್ಧಗಳೆಂಬುದು ತೋರಿಕೆಯ ವ್ಯತ್ಯಾಸ. ಮಗು ಭಾಷೆಯ ಬರವಣಿಗೆಯಲ್ಲಿ ಹೆಚ್ಚು ತೊಡಗುವಂತೆ ಮಾಡಬೇಕು ಎಂದು ಭಾಷಾ ಬೋಧಕ ಶಿಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ವೃತ್ತಿನಿರತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೊಸ ಶಿಕ್ಷಣ ನೀತಿಗೆ ಅನುಗುಣವಾಗಿ ತರಬೇತಿ ನೀಡುವ ರಾಷ್ಟ್ರೀಯ ಯೋಜನೆಯನ್ವಯ ಇತ್ತೀಚೆಗೆ ನಡೆದ ಭಾಷಾ ಬೋಧನಾ ಶಿಬಿರದಲ್ಲಿ ಈ ಕುರಿತು ಶಿಕ್ಷಕರು ವ್ಯಾಪಕವಾಗಿ ಚರ್ಚಿಸಿದರು.

ಸುಮಾರು 50 ಮಂದಿ ಶಿಕ್ಷಕರು ಭಾಗವಹಿಸಿದ್ದ ಈ ಶಿಬಿರದಲ್ಲಿ "ಭಾಷಾ ಬರವಣಿಗೆಯ ಎಲ್ಲಾ ಪ್ರಕಾರಗಳು ಪ್ರಾಥಮಿಕ ಹಂತದಲ್ಲೇ ಪರಿಚಯವಾಗಬೇಕು. ಕರ್ನಾಟಕದಲ್ಲಿ ಕನ್ನಡೇತರ ಮಾತೃಭಾಷೆಯ ಜ್ಞಾನವನ್ನೂ ಉಪಯೋಗಿಸಿಕೊಂಡು ಭಾಷಾಬೋಧನೆ ಹೆಚ್ಚು ಫಲಕಾರಿಯಾಗುವಂತೆ ಮಾಡಬೇಕು" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚರ್ಚೆಯ ಸಮನ್ವಯಗಾರರಾಗಿ ಸಂತ ಫಿಲೋಮಿನಾ ಪ್ರೌಢ ಶಾಲೆಯ ಶಿಕ್ಷಕ ಕುದ್ಮಾಡಿ ವಿಶ್ವನಾಥ ರೈ ಕಾರ್ಯನಿರ್ವಹಿಸಿದರು. ವಿಷಯ ತಜ್ಞ ದುಗ್ಗಪ್ಪ ಅಜ್ಜರು ಪರಿಚಯ ಮಾಡಿದರು.

ಸುದ್ಧಿ ಓದುವವರ ಕಣ್ಣರೆಪ್ಪೆಗಳ ನೋಟ ಸ್ಪಷ್ಟವಾಗಿವೆ ಎಂದರೆ

ಅದು ಸಾಲಿಡೇರ್‌ನಿಂದ ಮಾತ್ರ ಸಾಧ್ಯ



Solidaire
-that seldom fails!

Model courtesy: Gitanjali Aiyar
News reader: Delhi Doordarshan

COMPUTER COURSES
BUREAU OF DATA PROCESSING SYSTEM

1. Basic Programming
2. Cobol Programming
3. Fortran Programming
4. Data Entry
5. Word Processing
6. Advance Computer Programming
7. Post Graduate in Computer Science

TECHNICAL COURSES
INDIAN TECHNICAL INSTITUTE

1. Refrigeration and Aircondition
2. Electrician/Electrical Motor Winding
3. Television Technology
4. Radio and Transistor Technology
5. Telex Operating
6. Telephone Operating
7. Secretarial Practice
8. Colour Television/Vedio Technology

BATCH COMMENCES FROM 2nd JUNE 86

For Further Details Contact:

1. I. T. I./B. D. P. S.
Bharath Building, Room No. 40
3rd floor, K. S. Rao Cross Road
MANGALORE-1.
PHONE: 21658 Telex: 0842-213

2. Shivakripa Building
1st. Floor, Opp: Telegraph Office
Maruthi Vithika, UDUPI-1
All the above courses are available Through Correspondence also.

ಚಿತ್ರಾಯಣ

ರವಿಚಂದ್ರನ್, ಅಂಬಿಕಾ — ಅಸಂಭವ

ಜಟ್ಟಿಯನ್ನು ಉರುಳಿಸಿದ ಕಥಾನಾಯಕ

ಅದೊಂದು ಗ್ರಾಮ. ಬೇರೆ ಊರಿನಿಂದ ಜಟ್ಟಿಯೊಬ್ಬ ಬಂದ. ಆ ಹಳ್ಳಿಯ ಹಲವಾರು ಜಟ್ಟಿಗಳನ್ನು ಹೊಡೆದುರುಳಿಸಿದ. ನನ್ನನ್ನು ಎದುರಿಸುವರು ಯಾರಾದರೂ ಇದ್ದರೆ ಬನ್ನಿ ಅಂತ ಆಹ್ವಾನಿಸಿದ. ಎಲ್ಲರೂ ಹಿಂದೆ ಸರಿದರು. ಅಲ್ಲಿದ್ದ ಮೂವರು ಕಥಾನಾಯಕ (ವಿಷ್ಣುವರ್ಧನ) ನನ್ನು ಕರೆದು ಈ ವಿಷಯ ಹೇಳಿದರು. ಆದರೆ ಕಥಾನಾಯಕ ಮನೆಗೆ ಹೋಗಬೇಕೆಂದೂ ಹೊತ್ತಾದರೆ ನಮ್ಮ ಮಾವ ಹೊಡೀತಾರೆಂದು ಹೊರಟ. ಅವನನ್ನು ತಡೆದು. ಆ ಜಟ್ಟಿ ನಿಮ್ಮ ಮಾವನನ್ನೇ ಬೈದಿದ್ದಾ "ಮೀಸೆ ಇರೋ ಗಂಡಸೂ ಅಂದ್ರೆ ಈ ಹಳ್ಳೀಲಿ ನಿಮ್ಮಾವ ಒಬ್ರೇ ಅಲ್ವಾ? ಅವರ್ನ ಬೈದ್ರೆ ಸುಮ್ಮನೆ ಇರ್ತೀಯಾ? ಅಂತ ಹುರಿದುಂಬಿಸಿದರು. ಈ ಜಟ್ಟಿ ನಮ್ಮ ಮಾವನ್ನ ಬೈದ್ನಾ-ಏ ಕತ್ತೆ ನನ್ ಮಗನೇ ಅಂತ ಕಥಾನಾಯಕ ಆ ಜಟ್ಟಿಯ ಮೇಲೆ ಎರಗಿದ. ಅವನ್ನ ಚಿತ್ರಾನ್ನ ಮಾಡಿ ಹಣ್ಣುಗಾಯಿ ನೀರುಗಾಯಿ ಮಾಡಿದ. ಜಟ್ಟಿ ಸುಸ್ತಾಗಿ ಕುಸಿದು ಬಿದ್ದ. ಅಲ್ಲಿದ್ದ ಜನರೆಲ್ಲಾ ಸಾಹಸ ಸಿಂಹ ಕಥಾನಾಯಕನಿಗೆ ಜೈಕಾರ ಹಾಕಿದರು. ಅವನನ್ನು ಭುಜದ ಮೇಲೆ ಹೊತ್ತುಕೊಂಡು ಅವನ ಮನೆ ತಲುಪಿಸಿದರು.

ಈ ದೃಶ್ಯಗಳನ್ನು ಶ್ರೀ ಗಜಲಕ್ಷ್ಮಿ ಕಂಬೈನ್ಸ್ ಲಾಂಛನದಲ್ಲಿ ಪೀತಾಂಬರಂ ಅರ್ಪಿಸಿ ಪಿ. ವಿಮಲ್ ಕುಮಾರ್ ಮತ್ತು ಆರ್. ವಿಜಯ ಕುಮಾರಿ ಅವರುಗಳು ನಿರ್ಮಿಸುತ್ತಿರುವ 'ಕಥಾನಾಯಕ' ವರ್ಣ ಚಿತ್ರಕ್ಕಾಗಿ ಮದರಾಸಿನ ಅರುಣಾಚಲಂ ಸ್ಟುಡಿಯೊದಲ್ಲಿ ಚಿತ್ರೀಕರಿಸಿಕೊಳ್ಳಲಾಯಿತು. ಕಥಾನಾಯಕನ ಮೂವರು ಮಿತ್ರರಾಗಿ ದಿನೇಶ್, ಉಮೇಶ್ ಸತೀಶ್ ಅವರುಗಳು ಭಾಗವಹಿಸಿದ್ದರು.

ತಮಿಳಿನ ಖ್ಯಾತ ನಿರ್ದೇಶಕ ಶ್ರೀಧರ ಅವರ ಗರಡಿಯಲ್ಲಿ ಪಳಗಿದ ಪಿ. ವಾಸುದೇವ ಅವರು ಕಥೆ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರದ ಛಾಯಾಗ್ರಾಹಕರು: ಎಂ. ಸಿ. ಶೇಖರ. ಸಂಭಾಷಣೆ ಮತ್ತು ಹಾಡುಗಳನ್ನು ಚಿ. ಉದಯ ಶಂಕರ ಬರೆದಿದ್ದಾರೆ. ಸಹ ನಿರ್ದೇಶಕರು: ಶಿವರಾಂ. ಸಂಗೀತ ಸಂಯೋಜಕರು: ಎಂ. ರಂಗರಾವ್. ಚಿತ್ರೀಕೃತವಾದ ಭಾಗಗಳಿಗೆ ಮದರಾಸಿನಲ್ಲಿ ಧ್ವನಿ ಮುದ್ರಣ ಕಾರ್ಯ ನಡೆದಿದೆ.

ತಾರಾಬಳಗದಲ್ಲಿ ವಿಷ್ಣುವರ್ಧನ, ಸುಮಲತಾ, ವಜ್ರಮುನಿ, ಸುಂದರ ರಾಜ್, ದಿನೇಶ ಲೀಲಾವತಿ, ಸೀಮಾ, ಶ್ರೀನಿವಾಸ ಮೂರ್ತಿ, ಸತೀಶ, ಉಮೇಶ, ಟೊಪೊಟೊ ಸೋಮು ಮುಂತಾದವರಿದ್ದಾರೆ.

'ಕೂಗು'ಗೆ ಸಂಗೀತ

ಕನ್ನಡ ಚಿತ್ರರಂಗದಲ್ಲಿ ಅಲ್ಲದೆ ಮದರಾಸ್ ವಲಯದಲ್ಲೂ ಸಾಕಷ್ಟು ಕುತೂಹಲ ಕೆರಳಿಸಿರುವ 'ದುರ್ಗಾದಾಸ್ ಎಂಟರ್ ಪ್ರೈಸಸ್' ಲಾಂಛನದಲ್ಲಿ ನಾಯಕ ನಟ ಅನಂತನಾಗ್ ಅವರು ನಿರ್ಮಿಸುತ್ತಿರುವ "ಕೂಗು" ವಿಭಿನ್ನ ಶೈಲಿಯ ವರ್ಣಚಿತ್ರಕ್ಕೆ "ಸಂಕೇತ ಎಲೆಕ್ಟ್ರಾನಿಕ್ಸ್" ಧ್ವನಿಗ್ರಹಣ ಕೇಂದ್ರದಲ್ಲಿ ಜಿ. ಕೆ. ವೆಂಕಟೇಶ್ ಸಂಗೀತ ಸಂಯೋಜನೆಯಲ್ಲಿ ರೀರಿಕಾರ್ಡಿಂಗ್ ಕಾರ್ಯ ನಡೆದಿದೆ.

ಉತ್ಸಾಹೀ ಯುವ ನಿರ್ದೇಶಕ ಕೆ. ವಿ. ರಾಜು ಅವರ ಚೊಚ್ಚಲ ನಿರ್ದೇಶನದ ಈ ಚಿತ್ರಕ್ಕೆ ಅವರದೇ ಕಥೆ. ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಬರೆದಿದ್ದಾರೆ. ಛಾಯಾಗ್ರಾಹಕರು. ಬಿ. ಎನ್. ಬಸವರಾಜ್.

ತಾರಾಬಳಗದಲ್ಲಿ ಅನಂತನಾಗ್, ಜರೀನಾ ವಹಾಬ್, ಸಿ. ಆರ್ ಸಿಂಹ, ಜಗದೀಶ ಮಲ್ನಾಡ್, ದೇವರಾಜ್, ಕಾಶೀನಾಥ ಚಂದವರಗಿ, ಅಶೋಕ ಬಾದರದಿನ್ನಿ, ಉಮಾಶಿವಕುಮಾರ್, ಮುಂತಾದವರಿದ್ದಾರೆ.

ಮುಂದುವರಿದ ಮೃಗಾಲಯ

ನಟ ನಿರ್ಮಾಪಕ ಎಂ. ಪಿ. ಶಂಕರ ಅವರು "ಬರಣಿ ಚಿತ್ರ" ಲಾಂಛನದಲ್ಲಿ ನಿರ್ಮಿಸುತ್ತಿರುವ "ಮೃಗಾಲಯ" ವರ್ಣ ಚಿತ್ರಕ್ಕೆ ಮೈಸೂರಿನಲ್ಲಿ ಕಳೆದ 28 ರಿಂದ ಅಂತಿಮ ಹಂತದ ಚಿತ್ರಣ ಭರದಿಂದ ಸಾಗಿದೆ ಚಿತ್ರೀಕೃತವಾದ ಭಾಗಗಳಿಗೆ ಡಬ್ಬಿಂಗ್ ಕಾರ್ಯ ಸಂಕೇತ ಧ್ವನಿಗ್ರಹಣ ಕೇಂದ್ರದಲ್ಲಿ ಮುಗಿದಿದೆ.

ವಿ. ಸೋಮಶೇಖರ ಚಿತ್ರಿಸುತ್ತಿರುವ ಈ ಚಿತ್ರದ ಛಾಯಾಗ್ರಾಹಕರು : ಡಿ. ವಿ. ರಾಜಾರಾಂ. ಎಂ. ಪಿ. ಶಂಕರ್ ಹೆಣೆದಿರುವ ಕಥೆಗೆ ಚಿ. ಉದಯ ಶಂಕರ್ ಸಾಹಿತ್ಯ ಒದಗಿಸಿದ್ದಾರೆ. ಸಾಹುಲ್ ಅವರ ಸಾಹಸ, ರಾಜನ್ ನಾಗೇಂದ್ರ ಅವರ ಸಂಗೀತ, ಉಡುಪಿ ಜಯರಾಂ ಅವರ ನೃತ್ಯ ಸಂಯೋಜನೆಯಿರುವ ಈ ಚಿತ್ರದ ತಾರಾಬಳಗದಲ್ಲಿ ಅಂಬರೀಷ್, ಗೀತಾ, ಶಿವರಾಂ ಎಂ. ಪಿ. ಶಂಕರ, ಸುಧೀರ್, ಲೀಲಾವತಿ, ರಾಜ ಶೇಖರ್, ಸೌಮ್ಯ, ಸುಂದರ ಕೃಷ್ಣ ಅರಸ್, ರತ್ನಾಕರ್, ಪ್ರಕಾಶ್ ಹಾಗೂ ಚೇತನ್ ರಾಮರಾವ್ ಮುಂತಾದವರಿದ್ದಾರೆ.

ಬೆಂಗಳೂರಲ್ಲಿ ದ್ವಾರಕೀಶ್ ತಮಿಳು ಚಿತ್ರ

ನಗೆನಟ, ನಿರ್ಮಾಪಕ ದ್ವಾರಕೀಶ್ ಅವರು ಕನ್ನಡದಲ್ಲಿ ನಿರ್ಮಿಸಿ ನಿರ್ದೇಶಿಸಿದ್ದ 'ನೀ ಬರೆದ ಕಾದಂಬರಿ' ಯಶಸ್ವೀ ಚಿತ್ರವನ್ನು 'ನಾನ್ ಅಡಿಮೈ ಇಲ್ಲೈ' ಎಂಬ ಹೆಸರಿನಲ್ಲಿ ಅವರೇ ನಿರ್ಮಿಸಿ ನಿರ್ದೇಶಿಸುತ್ತಿದ್ದು. ಆ ಚಿತ್ರಕ್ಕಾಗಿ ಇತ್ತೀಚೆಗೆ ಕೆಲವು ಕ್ಲೈಮ್ಯಾಕ್ಸ್ ದೃಶ್ಯಗಳನ್ನು ಬೆಂಗಳೂರು ಅರಮನೆಯ ಹೊರ ಆವರಣದಲ್ಲಿ ಚಿತ್ರೀಕರಿಸಿಕೊಂಡರು.

ಚಿತ್ರೀಕರಣದಲ್ಲಿ ರಜನೀಕಾಂತ್, ಶ್ರೀದೇವಿ, ಗಿರೀಶ್ ಕಾರ್ನಾಡ್, ಕೆ. ವಿಜಯ, ಮಾ॥ ಅರ್ಜುನ್ ಪಾಲ್ಗೊಂಡಿದ್ದರು. ತಾರಾಬಳಗದಲ್ಲಿ ರಜನೀಕಾಂತ್, ಶ್ರೀದೇವಿ, ಗಿರೀಶ್ ಕಾರ್ನಾಡ್, ಕೆ. ವಿಜಯ, ಮಾ॥ ಅರ್ಜುನ್, ವಿ.ಕೆ. ರಾಮಸ್ವಾಮಿ, ಕೇಂಗಾಯ ಶ್ರೀನಿವಾಸನ್, ವಿಜಯಕುಮಾರ್ ವಿಜಯರಂಜನಿ, ಮನೋರಮ, ವೈಜೀ ಮಹೇಂದ್ರ, ವನಿತಾ, ಸಿಂದಾಮೂರ್ತಿ ಮುಂತಾದವರಿದ್ದಾರೆ.

ಹೋಟೇಲ್ ಗೋವರ್ಧನ್, ಮೈನ್‌ರೋಡ್, [illegible] 591301 · ದೂರವಾಣಿ 796

ಮುಂಗಾರು
ಶುಕ್ರವಾರ, ಫೆಬ್ರವರಿ 14, 1986

ಸುಲಭದ ಸೂತ್ರ ಸಲ್ಲದು

ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲದಿರುವುದರಿಂದ ಸರಕಾರ ಕಠಿಣತಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆಯೆಂದು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಹೇಳಿದ್ದಾರೆ.

ಈ ನಿಟ್ಟಿನಲ್ಲಿ ಮೂರು ದಾರಿಗಳನ್ನು ಅವರು ಸೂಚಿಸಿದ್ದಾರೆ. ಒಂದನೆಯದ್ದು ಹೆಚ್ಚು ತೆರಿಗೆಯನ್ನು ಹೇರುವುದು. ಎರಡನೆಯದ್ದು ಸಾಮರ್ಥ್ಯ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವುದು ಹಾಗೂ ಮೂರನೆಯದ್ದು ಹೆಚ್ಚು ಸಾಲ ಪಡೆಯುವುದು. ಇವುಗಳ ಪೈಕಿ ಮೂರನೆಯ ದಾರಿಯನ್ನು ಅವರೇ ತಳ್ಳಿ ಹಾಕಿದ್ದಾರೆ. ಸಾಲದ ಮರುಪಾವತಿ ಮತ್ತು ಅದರ ಬಡ್ಡಿಯ ಹೊರೆ ಈಗಾಗಲೇ ಖಜಾನೆಯ ಮೇಲೆ ತುಂಬಾ ಪರಿಣಾಮ ಬೀರಿರುವುದೇ ಅದಕ್ಕೆ ಕಾರಣವೆಂದು ಅವರು ಹೇಳಿದ್ದಾರೆ.

ಪರಿಣಾಮವಾಗಿ ಅವರಿಗೆ ಉಳಿದಿರುವುದು ಎರಡು ದಾರಿಗಳು. ತೆರಿಗೆ ಹೇರುವುದು ಹಾಗೂ ಆಡಳಿತೆಯ ಮತ್ತು ಸಾರ್ವಜನಿಕ ಕ್ಷೇತ್ರ ಉದ್ಯಮಗಳ ಸಾಮರ್ಥ್ಯ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವುದು. ಮೊದಲನೆಯದ್ದು ಸರಕಾರಕ್ಕೆ ಸುಲಭದ ದಾರಿ. ಸರಕಾರದ ನಿಯಂತ್ರಣದಲ್ಲಿರುವ ಸರಕು ಮತ್ತು ಸೇವೆಗಳಿಗೆ ಬೆಲೆ ಏರಿಸಿಬಿಟ್ಟರೆ ಮುಗಿಯಿತು. ಅಭಿವೃದ್ಧಿಗೆ ಕೊಡಬೇಕಾದ ಬೆಲೆ ಇದೆಂದು ಹರಕೆಯ ಕುರಿಯಂತೆ ದೇಶದ ಪ್ರಜೆಗಳು ಆ ಹೊರೆಯನ್ನು ಹೊತ್ತುಕೊಳ್ಳುತ್ತಾರೆ. ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಸರಕಾರಕ್ಕೆ ದಂಡ ತೆತ್ತು ಖಜಾನೆ ತುಂಬಿಸುತ್ತಾರೆ. ಬಹುಕಾಲದಿಂದ ನಡೆದು ಬಂದಿರುವ ರೀತಿ ನೀತಿಯೇ ಇದಾಗಿದೆ. ಮೊನ್ನೆ ಮೊನ್ನೆ ಕೇಂದ್ರ ಸರಕಾರ ತೈಲೋತ್ಪನ್ನಗಳ ಬೆಲೆ ಏರಿಸಿತು. ಅದಕ್ಕೂ ಮೊದಲು ಕಲ್ಲಿದ್ದಲಿನ ಬೆಲೆಯನ್ನು ಹೆಚ್ಚಿಸಲಾಗಿತ್ತು. ಪಡಿತರ ಸಾಮಗ್ರಿಗಳ ಬಿಡುಗಡೆ ಬೆಲೆ ಏರಿಸಲಾಗಿತ್ತು. ಸೀಮೆಗೊಬ್ಬರದ ಬೆಲೆಯನ್ನೂ ಹೆಚ್ಚಿಸಿತ್ತು.

ಮೊನ್ನೆ ಪ್ರಧಾನ ಮಂತ್ರಿಯವರು ಅಂಚೆ-ತಂತಿ ಇಲಾಖೆ ನೋಡಿಕೊಳ್ಳುವ ಸಚಿವರನ್ನು ಕರೆದು ಅಂಚೆ ಸೇವೆಯ ಶುಲ್ಕ ಹೆಚ್ಚಳ ಮಾಡುವ ಬಗ್ಗೆ ಚರ್ಚೆ ನಡೆಸಿದರೆಂಬ ವರದಿ ಬಂದಿದೆ. ಸದ್ಯಕ್ಕೆ ಆ ಪ್ರಸ್ತಾಪ ಬೇಡವೆಂಬ ನಿರ್ಧಾರವೂ ಚರ್ಚೆಯ ವೇಳೆ ಆಯಿತೆಂದು ಸುದ್ದಿ. ಇತ್ತೀಚೆಗಿನ ಬೆಲೆ ಏರಿಕೆಗಳ ಪರಿಣಾಮವಾಗಿ ಜನರ ಮುನಿಸು ದೆಹಲಿ ಬಂದ್‌ನ ರೂಪದಲ್ಲಿ ಪ್ರಕಟಗೊಂಡು ಜನತೆಯ ಅಸಮಾಧಾನದ ಚುರುಕು ಸರಕಾರಕ್ಕೆ ಮುಟ್ಟಿರಬೇಕು. ಸರಕಾರ ಹೆಜ್ಜೆ ಹಿಂದಿಡಲು ಅದುವೇ ಕಾರಣವಾಗಿರಬೇಕು.

ಈ ಹಿನ್ನೆಲೆಯಲ್ಲಿ ಸರಕಾರ ಕಷ್ಟದ ದಾರಿ ಹಿಡಿಯುವ ಮನಸ್ಸು ಮಾಡದೆ ಸುಲಭದ ದಾರಿಯನ್ನೇ ತುಳಿಯುತ್ತಿರುವುದು ಕಾಣಿಸುತ್ತಿದೆ. ಸದ್ಯದಲ್ಲೇ ರೈಲ್ವೆ ಆಯವ್ಯಯ ಮುಂಗಡಪತ್ರ ಬರಲಿದೆ. ಕಳೆದ ವರ್ಷ ಸರಕು ಸಾಗಣೆ ಮೇಲೆ ಶೇಕಡ ಹತ್ತು ಸರ್ಚಾರ್ಜ್ ಹೇರಲಾಯಿತು. ಪ್ರಯಾಣ ಶುಲ್ಕದಲ್ಲಿ ಶೇಕಡಾ 12.5ರ ಏರಿಕೆಯಾಗಿತ್ತು. ಈ ಬಾರಿಯೂ ಏರಿಕೆಯ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ರಾಜೀವ ಗಾಂಧಿಯವರು ಸೂಚಿಸಿರುವ ತೆರಿಗೆ ಹೆಚ್ಚಿಸುವಂತಹ ಒಂದನೇ ದಾರಿಯಿಂದ ಜನರಿಗೆ ಸಂಕಟ ಬರುತ್ತದೆ. ಹಣದ ಪೂರೈಕೆಯು ಸಾಮಗ್ರಿಗಳನ್ನು ಬೆನ್ನಟ್ಟುವ ವಿಚಿತ್ರ ವಿದ್ಯಮಾನ ಉಂಟಾಗುತ್ತದೆ. ಈ ಓಟದಲ್ಲಿ ಹಣದ ಬಲ ಉಳ್ಳವರು ಬದುಕಿಕೊಳ್ಳುತ್ತಾರೆ. ದುರ್ಬಲರು ಸೋತು ಸೊರಗಿ ಹೋಗುತ್ತಾರೆ. ಪ್ರಧಾನಿ ಸೂಚಿಸಿರುವ ಎರಡನೇ ದಾರಿ ನಾಡಿಗೆ ಒಳಿತು ಮಾಡುವಂತಹದ್ದು. ಇಂದು ಅನೇಕ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳು ನಷ್ಟದಲ್ಲಿ ನಡೆಯುತ್ತಿವೆ. ಹಾಗಾಗುವುದಕ್ಕೆ ಅವುಗಳ ಸರಕು ಹಾಗೂ ಸೇವೆಯ ಶುಲ್ಕ ಕಡಿಮೆ ಇರುವುದು ಕಾರಣವಲ್ಲ. ಬದಲಾಗಿ ಅವುಗಳ ಆಡಳಿತ ಅಸಾಮರ್ಥ್ಯ ಕಾರಣ. ಇದರ ಪರಿಣಾಮವಾಗಿಯೇ ಅನೇಕ ಸಂಸ್ಥೆಗಳು ಸ್ಥಾಪಿತ ಸಾಮರ್ಥ್ಯದ ಅರ್ಧದಷ್ಟೂ ಉತ್ಪಾದನೆ ನಡೆಸುತ್ತಿಲ್ಲ. ಇನ್ನು ಹಲವು ಸಂಸ್ಥೆಗಳಲ್ಲಿ ಭ್ರಷ್ಟಾಚಾರ ತಾಂಡವ ನಡೆಸುತ್ತಿದೆ. ರಾಜ್ಯಗಳ ಸಾರ್ವಜನಿಕ ರಸ್ತೆ ಸಾರಿಗೆ ನಿಗಮಗಳೇ ಇದಕ್ಕೊಂದು ಉದಾಹರಣೆ. ಇವುಗಳಲ್ಲಿ ಸೋರಿ ಹೋಗುವ ಸಂಪನ್ಮೂಲವನ್ನು ತಡೆದು ನಿಲ್ಲಿಸಿದರೆ ವರ್ಷಕ್ಕೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಸಿಕ್ಕೀತು. ರಾಜ್ಯಗಳ ವಿದ್ಯುನ್ಮಂಡಳಿಗಳು ಕೂಡ ಅಂತಹದೇ ಕತೆಗಳನ್ನು ಹೇಳುತ್ತವೆ. ಇವುಗಳಲ್ಲಿನ ತಂತ್ರಜ್ಞಾನವೂ ಹಳೆಯದಾಗಿದ್ದು ಉತ್ಪಾದಕತೆ ಕುಸಿತಕ್ಕೆ ಅದೂ ಕಾರಣವಾಗಿದೆ. ಉತ್ಪಾದಿಸುವ ವಿದ್ಯುತ್ತಿನ ಅರ್ಧಾಂಶವೂ ಲೈನುಗಳಲ್ಲಿ ಸೋರಿ ಹೋಗುತ್ತದೆ. ಅದನ್ನು ತಡೆದು ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ. ಭಾರತೀಯ ರೈಲ್ವೆಯೂ ಅಸಾಮರ್ಥ್ಯ ಹಾಗೂ ಭ್ರಷ್ಟಾಚಾರಗಳ ಕೊಂಪೆಯೆನಿಸಿದೆ.

21ನೇ ಶತಮಾನಕ್ಕೆ ನೆಗೆಯುವ ಮುನ್ನ ನಮ್ಮ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಈ ಶೋಚನೀಯ ಪರಿಸ್ಥಿತಿಯನ್ನು ಸುಧಾರಿಸಬೇಕು. ಸರಕಾರದ ಆಡಳಿತ ಸಾಮ್ರಾಜ್ಯದೊಳಗೇ ಎಷ್ಟು ಸಂಪನ್ಮೂಲ ಪೋಲಾಗಿ ಹೋಗುತ್ತಿದೆ ಎಂಬುದನ್ನೂ ಪರಿಶೀಲಿಸಬೇಕು. ಅನಗತ್ಯದ ಎಷ್ಟೋ ವೆಚ್ಚಗಳಿವೆ. ಅವುಗಳನ್ನು ಕಡಿತ ಮಾಡಬಹುದು. ಸಿಬ್ಬಂದಿಗಳ ಸೈನ್ಯ ಕಟ್ಟುವ ಬದಲು ಆ ಹಣವನ್ನು ಕೃಷಿ ಹಾಗೂ ಕೈಗಾರಿಕಾ ರಂಗದಲ್ಲಿ ಹೂಡಿದರೆ ಉದ್ಯೋಗವೂ ದೊರೆಯುತ್ತದೆ. ನಾಡಿನ ಸಂಪತ್ತೂ ಹೆಚ್ಚುತ್ತದೆ.

ದೇಶದ ಆಗು ಹೋಗುಗಳನ್ನು ಸಮರ್ಥವಾಗಿ ನಿಭಾಯಿಸಿ ಜನರ ಬದುಕು ಹಸನಾಗುವಂತೆ ನೋಡಿಕೊಳ್ಳಬೇಕಾದ ಕರ್ತವ್ಯವಿರುವ ಸರಕಾರ ಹಣಕಾಸನ್ನು ನಿಭಾಯಿಸಲು ಸುಲಭದ ಸೂತ್ರಕ್ಕೆ ಶರಣು ಹೋಗುವುದು ಸಲ್ಲದು.

ನ್ಯಾಯವಿಲ್ಲ-ಉತ್ತರವಿಲ್ಲ

ಪ್ರಿಯರೆ,

1972ರ ಮೇ ತಿಂಗಳಲ್ಲಿ ಎಂ. ಶಾರದ ಕೋಟ ಪ್ರಾಥಮಿಕ ಅಧ್ಯಾಪಿಕೆಯು ಎಂ.ಏ ಪದವಿಯನ್ನು ಪಡೆದರು. ಹಾಗಾಗಿ 10-10-1972ರಂದು ಅವರು ಪುತ್ತೂರಿನ ಬೋಳುವಾರಿನ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಪದವೀಧರೆ ಮುಖ್ಯಾಧ್ಯಾಪಿಕೆಯ ಹುದ್ದೆಗೆ ಬಡತಿ ಹೊಂದಿದರು.

ಸೇವಾ ಅವಧಿಯಲ್ಲಿ ವಿಶ್ವವಿದ್ಯಾಲಯಗಳಿಂದ ಪದವಿಗಳನ್ನು ಪಡೆದ ಸರಕಾರಿ ನೌಕರರು ಎರಡು 'ಎಡ್ವಾನ್ಸ್ ಇಂಕ್ರಿಮೆಂಟ್'ಗಳಿಗೆ ಅರ್ಹರು ಎನ್ನುವ 1968ರ ಸರಕಾರಿ ಆಜ್ಞೆಯೊಂದಿತ್ತು. ಈ ಮುಂಬಡತಿಗಳ ಸೌಲಭ್ಯವು ಮತ್ತೊಂದು ಸರಕಾರಿ ಆಜ್ಞೆಯ ಮೂಲಕ ರದ್ದುಗೊಂಡದ್ದು 1973ರಲ್ಲಿ.

ಹಾಗಾಗಿ 1968ರ ಅನುಕೂಲ ಸರಕಾರಿ ಆಜ್ಞೆಯು ಊರ್ಜಿತವಾಗಿರುವಾಗಲೇ ಪ್ರತಿಕೂಲ ಸರಕಾರಿ ಆಜ್ಞೆಯು ಬರುವ ಮುನ್ನವೇ, ಎಂ. ಎ. ಪದವಿಯನ್ನು ಪಡೆದು ಮುಖ್ಯಾಧ್ಯಾಪಿಕೆಯೂ ಆಗಿದ್ದ ಶ್ರೀಮತಿ ಶಾರದ ಅವರು 'ಎಡ್ವಾನ್ಸ್ ಇಂಕ್ರಿಮೆಂಟ್'ಗಳಿಗಾಗಿ ಅರ್ಜಿ ಸಲ್ಲಿಸಿದರು.

ಆದರೆ ಸಾ.ಶಿ.ಇ.ಯ 13-1-1982ರ ಉತ್ತರದ ಸಾರಾಂಶವು ಇಂತಿತ್ತು:- "ನೀವು ಪದವೀಧರೆ ಮುಖ್ಯಾಧ್ಯಾಪಿಕೆಯಾಗಿ ಬಡತಿ ಹೊಂದಿದ್ದು 1974ರಲ್ಲಿ. ಆದುದರಿಂದ ನಿಮಗೆ ಅನ್ವಯವಾಗುವುದು 1968ರ ಅನುಕೂಲ ಆದೇಶವಲ್ಲ; 1973ರ ಪ್ರತಿಕೂಲ ಆದೇಶ.

ಶಾರದ ಅವರು 1972ರಲ್ಲೇ ಮುಖ್ಯಾಧ್ಯಾಪಿಕೆಯಾಗಿ ಬಡತಿ ಹೊಂದಿದ್ದರೆಂಬುದು ನಿಶ್ಚಿತಾಂಶವಾಗಿದ್ದರೂ, ಅವರು ಬಡತಿ ಹೊಂದಿದುದು 1974ರಲ್ಲಿ ಎಂಬ ತಪ್ಪು ನಿಶ್ಚಿತಾಂಶವನ್ನೇ ತಿಳಿಸಿ, ಅವರಿಗೆ 'ಎಡ್ವಾನ್ಸ್ ಇಂಕ್ರಿಮೆಂಟ್'ಗಳನ್ನು ನಿರಾಕರಿಸಲಾಯಿತು. 1974ರಲ್ಲಿ ಆದುದೇನೆಂದರೆ 1972ರಲ್ಲೆ ಆಗಿದ್ದ ಬಡತಿಯ 'ರೆಗ್ಯುಲರೈಸೇಷನ್' (ಕ್ರಮಾನುಗುಣಗೊಳಿಸುವಿಕೆ) ಮಾತ್ರ.

ಈ ಕುರಿತು ಅವರು ಸಾ. ಶಿ. ಇ. ಗೆ 1982ರಿಂದ ಪುನಃ ಮೊರೆಯಿಡುತ್ತ ಬಂದಿರುವುದು ವ್ಯರ್ಥವೆನ್ನಿಸಿದೆ. ನಾಲ್ಕು ವರ್ಷ ಸಂದರೂ ಅವರಿಗೆ ನ್ಯಾಯ ಸಿಕ್ಕಿಲ್ಲ. ನ್ಯಾಯದ ಮಾತೇಕೆ? ಉತ್ತರವೇ ಸಿಕ್ಕಿಲ್ಲ. ಡಾ। ಪಾವ್ಲ್ ಎಪ್ಲೆಬೀ ಅವರು ಭಾರತೀಯ ಸಾರ್ವಜನಿಕ ಆಡಳಿತದ ಕುರಿತು ಹೇಳಿದ ಈ ಮಾತು ಸ್ಮರಣಾರ್ಹ:- "ಸರಕಾರದಿಂದ ಉತ್ತರ ಬಾರದಿರುವುದು ಭಾರತೀಯರಿಗೆ ಒಗ್ಗಿ ಹೋಗಿರುವಂತಿದೆ.

—ಡಾ। ಪಿ. ನಾರಾಯಣ ರಾವ್.
ಸಂಚಾಲಕ
ಬಳಕೆದಾರರ ವೇದಿಕೆ

ಉಡುಪಿ

ಬೆತ್ತಲೆ ಸೇವೆ

ಪ್ರಿಯರೆ,

ಸೊರಬ ತಾಲೂಕು ಚಂದ್ರಗುತ್ತಿ ಎಲ್ಲಮ್ಮ ದೇವಿಯವರ ಜಾತ್ರೆಯಲ್ಲಿ ಬೆತ್ತಲೆ ಸೇವೆ ಮಾಡುವ ಪದ್ಧತಿ ಹಿಂದೂ ಸಂಪ್ರದಾಯಕ್ಕೆ ಒಂದು ಮಾರಕವಾಗಿರುತ್ತದೆ. ಇಂತಹ ಪದ್ಧತಿಯನ್ನು ನಿರ್ಮೂಲ ಮಾಡಲು ಸಂಘ, ಸಂಸ್ಥೆಗಳು ಸಾರ್ವಜನಿಕರು ರಾಜಕೀಯ ಮುಖಂಡರು ಅದರಲ್ಲೂ ಇಂದಿನ ನವಯುವಕ, ಯುವತಿಯರು ಗಮನ ಕೊಡಬೇಕಾದ ಅಗತ್ಯವಿದೆ.

ಆರ್ಥಿಕವಾಗಿ ದೈಹಿಕವಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗದವರ ಜನಗಳ ಈ ಪದ್ಧತಿ ಈಗಲೂ ಅನುಸರಿಸುತ್ತಿದ್ದಾರೆ.

ಶಿರಕೋರೆ

ಇದಕ್ಕೆಲ್ಲಾ ಮೂಢನಂಬಿಕೆಗಳೇ ಕಾರಣ. ಇಂತಹ ಮೂಢನಂಬಿಕೆಗಳು ತೊಲಗಬೇಕು.

ಸರ್ಕಾರ ಈ ನಿಟ್ಟಿನಲ್ಲಿ ಈ ಪದ್ಧತಿಯನ್ನು ಅಂತ್ಯಗೊಳಿಸಲು ಜನ ಜಾಗೃತಿ ಮೂಡಿಸುವಲ್ಲಿ ವಿಫಲವಾಗಿದೆ.

ಆರ್ಥಿಕವಾಗಿ ಮುಂದುವರಿದ ಆದರಲ್ಲೂ ಮೇಲುಜಾತಿಯ ಜನರು ಈ ಪದ್ಧತಿಯಿಂದ ದೂರ ಇದ್ದಾರೆ. ಕ್ರೈಸ್ತರು ಮುಸ್ಲಿಮರು ಈ ಪದ್ಧತಿಯನ್ನು ವಿರೋಧಿಸುತ್ತಿದ್ದಾರೆ. ದೇಶ ಪ್ರಗತಿಯ ಪಥದಲ್ಲಿ ಚಂದ್ರನ ಕಡೆಗೆ ನೋಡುತ್ತಿರುವ ಸಮಯದಲ್ಲಿ ಇಂತಹ ಮೂಢನಂಬಿಕೆಗಳಿಗೆ ಬಲಿಯಾಗಿ ಹಿಂದು ಸಂಪ್ರದಾಯಕ್ಕೆ ಕಳಂಕ ತರುತ್ತಿದ್ದೇವೆ. ಬರುವ ಜಾತ್ರೆಯಲ್ಲಿ ಈ ಪದ್ಧತಿಯನ್ನು ಕೈಬಿಡಬೇಕು.

—ಈಸೂರು ಬಸವರಾಜಪ್ಪ

ಸೊರಬ

ಸಿನೆಮಾದಿಂದ ಪ್ರಚೋದನೆ?

ಪ್ರಿಯರೆ,

ಚಲನ ಚಿತ್ರದಿಂದ ಸಮಾಜ ಕಲುಷಿತವಾಗುತ್ತದೆ, ಯುವ ಜನಾಂಗ ದಾರಿ ತಪ್ಪುತ್ತಿದೆ ಎಂಬ ಆರೋಪ ತುಂಬ ಹಿಂದಿನದು ಪಾಪ! ಸಿನೆಮಾಮಂದಿಯಾದರೂ ಏನು ಮಾಡಿಯಾರು? ಹಣ ಗಳಿಸುವುದೇ ಅವರ ಜೀವನ ಧ್ಯೇಯವಾಗಿರುವಾಗ!

ಇತ್ತೀಚೆಗೆ ಅಂದರೆ ಕೆಲವು ತಿಂಗಳುಗಳ ಹಿಂದೆ, ಭದ್ರಾವತಿಯಲ್ಲಿ ನಡೆದ ಒಂದು ಕೊಲೆ ಪ್ರಕರಣ ಹಾಗೂ ದಾವಣಗೆರೆಯಲ್ಲಿ ನಡೆದ ಬೈಕ್ ಅಪ್ಪುಗ್ಯು ನಡೆಸಿದ ದರೋಡೆ ಪ್ರಕರಣಗಳು "ಪ್ರಳಯಾಂತಕ" ಮಾದರಿಯಲ್ಲಿ ಎಂದು ವರದಿಯಾಗಿದ್ದು ಇಲ್ಲಿ ಸ್ಮರಿಸಬಹುದು. "ಪ್ರಳಯಾಂತಕ" ಚಿತ್ರದಿಂದ ಪ್ರೇರಿತರಾಗಿ ನಾವು ಹೀಗೆ ಮಾಡಿದ್ದೇವೆ ಎಂದು ಆರೋಪಿಗಳೇ ಹೇಳಿದ್ದ ವರದಿಯಾಗಿದೆ.

'ಪ್ರಳಯಾಂತಕ' ಚಿತ್ರದ ಮೇಲೆಯೇ ನನ್ನ ನೇರ ಆರೋಪವಲ್ಲ. ಸಮಗ್ರ ಚಿತ್ರ ಜಗತ್ತಿನ ಎಲ್ಲ ಕಳಪೆ ಚಿತ್ರಗಳ ಮೇಲೆ.

ದಕ್ಷಿಣ ಕನ್ನಡದಲ್ಲಿ ನಡೆದ ಈ ದರೋಡೆ, ಕೊಲೆ, ಹಲ್ಲೆ ಪ್ರಕರಣಗಳು ಆರಂಭವಾಗುವುದಕ್ಕೆ ಒಂದು ತಿಂಗಳ ಮೊದಲು ಮಂಗಳೂರು, ಹಾಗೂ ಉಡುಪಿಗಳಲ್ಲಿ ಒಂದು ಮಲಯಾಳೀ ಚಿತ್ರ ಭರ್ಜರಿ ಪ್ರದರ್ಶನಗೊಂಡಿತ್ತು. 'ಮಾವಂ ಕ್ರೂರನ್' ಎನ್ನುವ ಈ ಚಿತ್ರ ಹೆಸರೇ ಸೂಚಿಸುವಂತೆ ಭೀಕರವಾದ ಕೊಲೆ, ದರೋಡೆ, ಅತ್ಯಾಚಾರಗಳ ಹಿಂಸಾತಾಂಡವವನ್ನು ಬಿಂಬಿಸಿತ್ತು.

ಜನ

ಈಗ ನಡೆಯುತ್ತಿರುವ ದುಷ್ಕೃತ್ಯಗಳಿಗೂ, ಮತ್ತು ಇದೇ ಅಥವಾ ಇಂತಹುದೇ ಚಿತ್ರಗಳಿಗೂ ಸಂಬಂಧವಿದೆ ಎನ್ನುವುದನ್ನು ಪೂರ್ತಿಯಾಗಿ ಒಪ್ಪಲಾಗದಿದ್ದರೂ, ಉಪೇಕ್ಷಿಸುವ ವಿಷಯವಂತೂ ಖಂಡಿತ ಅಲ್ಲ.

ಗಣೇಶ್ ಬನ್ನಾಡಿ

ಸಾಲಿಗ್ರಾಮ

ಮುಂಗಾರು

ಭಾನುವಾರ, ಜೂನ್ 1, 1986

ಗೃಹ ಮಂಡಳಿಯ ಸುಧಾರಣೆ

ಗೃಹ ಮಂಡಳಿಗಳ ಅಧ್ಯಕ್ಷರುಗಳ ಹಾಗೂ ಉನ್ನತ ಅಧಿಕಾರಿಗಳ ಸಮ್ಮೇಳನವೊಂದನ್ನು ಕರ್ನಾಟಕದ ಗೃಹ ಮಂಡಳಿಯು ಮೊನ್ನೆ ಬೆಂಗಳೂರಿನಲ್ಲಿ ಏರ್ಪಡಿಸಿತ್ತು. ದಕ್ಷಿಣ ವಲಯಕ್ಕೆ ಸೀಮಿತವಾದ ಈ ಸಮ್ಮೇಳನದಲ್ಲಿ ತಮಿಳ್ನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ಪುದುಚೇರಿ ಹಾಗೂ ಗೋವೆಗಳ ಗೃಹ ಮಂಡಳಿಗಳವರೂ ಭಾಗವಹಿಸಿದ್ದರು. ಇಂಥ ಒಂದು ಸಭೆ ಎಷ್ಟು ಉಪಯುಕ್ತ ಎಂಬುದನ್ನು ಸಭೆಯಲ್ಲಿ ಆಗಿರುವ ನಿರ್ಣಯಗಳೇ ಸೂಚಿಸುತ್ತವೆ.

ವಸತಿ ನಿರ್ಮಾಣ ಚಟುವಟಿಕೆಯನ್ನು ವಿಸ್ತರಿಸುವುದಕ್ಕಾಗಿ ಹೆಚ್ಚು ಸಂಪನ್ಮೂಲ ಸಂಗ್ರಹಿಸಲು ಗೃಹ ಮಂಡಳಿಗಳಿಗೆ ಸ್ವಾಯತ್ತತೆ ಕೊಡಬೇಕು ಎಂಬುದು ಒಂದು ಮಹತ್ವವಾದ ನಿರ್ಣಯವಾಗಿದೆ. ವಸತಿಗಾಗಿ ಮಾತ್ರವೇ ಹಣಕಾಸು ಒದಗಿಸುವ ಕಾರ್ಯಕ್ರಮವುಳ್ಳ ನಗರಾಭಿವೃದ್ಧಿ ಬ್ಯಾಂಕ್ ಒಂದನ್ನು ಸ್ಥಾಪಿಸಬೇಕು. ವಸತಿ ಸಂಕೀರ್ಣಗಳ ನಿರ್ಮಾಣಕ್ಕೆ ಜಮೀನನ್ನು ವಶಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಈಗ ಇರುವ ಕಂದಾಯ ಇಲಾಖೆಯಿಂದ ತೆಗೆದು ನೇರವಾಗಿ ಗೃಹಮಂಡಳಿ ಕೈಯಲ್ಲಿ ಕೊಡಬೇಕು ಎಂಬುದು ಇನ್ನು ಕೆಲವು ಮಹತ್ವದ ಶಿಫಾರಸುಗಳಾಗಿವೆ.

ಗೃಹಮಂಡಳಿಗಳ ಆಡಳಿತೆಯನ್ನು ಸುಧಾರಿಸಬೇಕು, ವಸತಿ ನಿರ್ಮಾಣ ತಂತ್ರಜ್ಞಾನವನ್ನು ಸುಧಾರಿಸಿ ಬಳಕೆದಾರರಿಗೆ ನ್ಯಾಯಸಮ್ಮತ ಬೆಲೆಯಲ್ಲಿ ಮನೆಗಳು ದೊರೆಯುವಂತಹ ವ್ಯವಸ್ಥೆಯಾಗಬೇಕು– ಈ ಮೊದಲಾದ ಅಭಿಪ್ರಾಯಗಳೂ ಸಭೆಯಲ್ಲಿ ಬಂದಿವೆ.

ಗೃಹ ಮಂಡಳಿಗಳ ಈಗಿನ ಕಾರ್ಯನಿರ್ವಹಣೆ ಮನೆಗಳ ಬಳಕೆದಾರರಿಗೆ ಏನೇನೂ ತೃಪ್ತಿಕರವಾಗಿಲ್ಲ ವೆನ್ನುವುದು ಅವರಿಂದ ಸಾರ್ವಜನಿಕ ವೇದಿಕೆಗಳಲ್ಲಿ ಬರುತ್ತಿರುವ ದೂರುಗಳಿಂದಲೇ ವೇದ್ಯವಾಗುತ್ತಿದೆ. ಈ ನಾಡಿನಲ್ಲಿ ವಸತಿ ಸೌಲಭ್ಯ ಬಲು ತುಟ್ಟಿಯೂ ಅಪರೂಪವೂ ಆಗಿರುವುದರಿಂದ ಗೃಹ ಮಂಡಳಿಯಂತಹ ಸರಕಾರಿ ವ್ಯವಸ್ಥೆಯ ವಸತಿ ಸೌಲಭ್ಯವನ್ನು ಕೊಳ್ಳಲು ಜನರು ಸರತಿಯ ಸಾಲಿನಲ್ಲಿ ನಿಂತಿದ್ದಾರೆ. ವಸತಿ ಹಾಗೂ ಜಮೀನಿನ ಬೆಲೆ ಜ್ವರದಂತೆ ಏರುತ್ತಿರುವುದರಿಂದ ಗೃಹಮಂಡಳಿಯ ಮನೆಗಳನ್ನು ಕಂತಿನಲ್ಲಿ ಕೊಳ್ಳಲು ಬಯಸುವವರ ಸಂಖ್ಯೆ ಏರುತ್ತಿದೆ. ಹೊರತು ಗೃಹಮಂಡಳಿಯ ಮನೆಗಳು ಅತ್ಯುತ್ಕೃಷ್ಟವಾಗಿಯೆಂದೇನೂ ಅಲ್ಲ. ಈ ಸಂಸ್ಥೆ ನಿರ್ಮಿಸಿಕೊಡುವ ಮನೆಗಳು ಕಳಪೆ ಗುಣಮಟ್ಟದವೆಂಬುದು ಜನಜನಿತ. ಮಳೆಗಾಲದಲ್ಲಿ ಈ ಮನೆಗಳಲ್ಲಿ ಸೋರದ ತಾಣವೇ ಇಲ್ಲ. ಕಳಪೆ ಗುಣಮಟ್ಟದ ಮರಗಳನ್ನು ಉಪಯೋಗಿಸುವುದರಿಂದ ನಾಲ್ಕಾರು ವರ್ಷಗಳಲ್ಲಿ ಗೆದ್ದಲಿಗೆ ಆಹಾರವಾಗುತ್ತವೆ. ಸಿಮೆಂಟಿನ ಜಾಗದಲ್ಲಿ ಮರಳು ತುಂಬಲಾಗುತ್ತದೆ. ಇದೆಲ್ಲವೂ ಎಲ್ಲರಿಗೂ ಗೊತ್ತಿರುವ ವಿಚಾರ. ಯಾವ ಕಾರಣಕ್ಕೋ, ಕಂಟ್ರಾಕ್ಟುದಾರರಿಗೆ ಹಿತ ಮಾಡುವುದಕ್ಕೋ ಮನೆಕಟ್ಟಲು ವೈಯಕ್ತಿಕ ನೆಲೆಯಲ್ಲಿ ಸಾಲ ನೀಡುವ ಕಾರ್ಯಕ್ರಮವನ್ನು ಕರ್ನಾಟಕದ ಗೃಹಮಂಡಳಿ ಹತ್ತಾರು ವರ್ಷಗಳ ಹಿಂದೆ ನಿಲ್ಲಿಸಿ ಬಿಟ್ಟಿತ್ತು. ಇದರಿಂದ ಬಳಕೆದಾರರಿಗೆ ಅನ್ಯಾಯವಾಯಿತು. ಹಿತವಾದದ್ದು ಗೃಹಮಂಡಳಿಯ ಹಿಂದು ಮನೆಗಳ ನಿರ್ಮಾಣವನ್ನು ಗುತ್ತಿಗೆ ಹಿಡಿಯುವವರಿಗೆ ಮಾತ್ರ.

ಇದೀಗ ಮತ್ತೆ ಮನೆಕಟ್ಟಲು ವೈಯಕ್ತಿಕ ಸಾಲ ಒದಗಿಸುವ ಯೋಜನೆಗೆ ಗೃಹಮಂಡಳಿ ಮರುಜೀವ ನೀಡುತ್ತಿದೆ. ಇದೊಂದು ಸ್ವಾಗತಾರ್ಹ ಹೆಜ್ಜೆ. ಸಾರ್ವಜನಿಕರು, ತಮಗೆ ಬೇಕಾದಂತಹ ವಿನ್ಯಾಸದ ಮನೆಗಳನ್ನು ಸ್ವಂತ ಉಸ್ತುವಾರಿಯಲ್ಲಿ ಕಟ್ಟಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಯಾರದೋ ಖರ್ಚಿನಲ್ಲಿ ಇನ್ನಾರೋ ದೊಡ್ಡವರಾಗುವ ಪ್ರಮೇಯ ಇದರಿಂದ ನಿವಾರಣೆಯಾಗುತ್ತದೆ. ಆದರೆ ಈ ಯೋಜನೆಯನ್ನು ಮಹಾನಗರ ಪಾಲಿಕೆ ಪ್ರದೇಶಗಳಿಗೆ ಸೀಮಿತಗೊಳಿಸುತ್ತಿರುವುದು ಮಾತ್ರ ಸಾಧುವಲ್ಲ. ಉಳಿದ ತಾಣಗಳಲ್ಲಿಯೂ ಮನೆಕಟ್ಟಿಕೊಳ್ಳಲು ಬೇರೆ ಸಾಮರ್ಥ್ಯವಿಲ್ಲದವರಿಗೆ ಈ ಅವಕಾಶವನ್ನು ನಿರಾಕರಿಸುವುದು ಸಲ್ಲದು.

ಗೃಹ ಮಂಡಳಿ ಹೆಚ್ಚು ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು ಎಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯ ಇರಲಾರದು. ಅದು ಹೆಚ್ಚು ಸಮರ್ಥವಾಗಿ ಜನರ ಅಗತ್ಯಗಳನ್ನು ಪೂರೈಸಬೇಕು. ಅದಕ್ಕಾಗಿ ಹಣಕಾಸನ್ನು ಅದಕ್ಕೆ ಒದಗಿಸ ಬೇಕು. ವಸತಿ ಚಟುವಟಿಕೆಗೆ ಬೇರಾವ ಸಂಸ್ಥೆಯೂ ಹಣಕಾಸು ಒದಗಿಸುವ ವ್ಯವಸ್ಥೆ ಇಲ್ಲದಿರುವುದರಿಂದ ಇದು ಅಗತ್ಯ. ಅಲ್ಲದೆ ಮಂಡಳಿಯು ಆಡಳಿತೆಯಲ್ಲಿಯೂ ಬೇಕಾದ ಸುಧಾರಣೆಗಳನ್ನು ಮಾಡಿಕೊಳ್ಳಬೇಕು. ಇದನ್ನೆಲ್ಲ ಮಾಡಬೇಡಿ ಎಂದು ಮಂಡಳಿಗಾಗಲೀ ಸರಕಾರಕ್ಕಾಗಲಿ ಯಾರೂ ಹೇಳಿಲ್ಲ. ಈ ದೇಶದಲ್ಲಿ ಗ್ರಾಹಕರ ಚಳವಳಿ ಬಲಗೊಳ್ಳದೆ ಇರುವುದರಿಂದಲೇ ಹೀಗೆಲ್ಲ ಆಗುತ್ತಿದೆ. ಜನಸಾಮಾನ್ಯರು ಗೃಹಮಂಡಳಿಯಂತಹ ಅಸಮರ್ಥ ಸಂಸ್ಥೆಗಳ ಕೃಪಾಶ್ರಯದಡಿಯಲ್ಲಿ ಬಾಳಬೇಕಾಗಿದೆ.

ನಾಗರಿಕರಿಗೇ ಅಸಡ್ಡೆ

ಪ್ರಿಯರೆ,

ಮಂಗಳೂರಿನ ಆಟೋರಿಕ್ಷಾ ಅವ್ಯವಸ್ಥೆ ಬಗ್ಗೆ ನಾಗರಿಕರೊಬ್ಬರು 21–4–86ರ 'ಮುಂಗಾರು' ಪತ್ರಿಕೆಯಲ್ಲಿ ದೂರಿಕೊಂಡ ಬಗ್ಗೆ ಕೈಗೊಳ್ಳಲಾದ ಕ್ರಮಗಳ ಬಗ್ಗೆ ದ. ಕ. ಜಿಲ್ಲಾ ಪೊಲೀಸಧಿಕಾರಿಯಿಂದ ತರಿಸಲಾದ ವರದಿಯನ್ನು ಪ್ರಕಟಣೆಗಾಗಿ ಈ ಕೆಳಗೆ ಕೊಟ್ಟಿರುತ್ತೇನೆ.

"ಮೀಟರು ಹಾಕದೆ ಮತ್ತು ಮೀಟರು ಅಳವಡಿಸದೆ ಓಡಿಸುವ ಆಟೋರಿಕ್ಷಾಗಳ ಮೇಲೆ ಕ್ರಮ ಕೈಗೊಂಡಿದ್ದು, ಬಹುತೇಕ ಮೀಟರು ಹಾಕುವ ಕ್ರಮ ಅಷ್ಟೊಂದು ಯಶಸ್ವಿಯಾಗಲಿಲ್ಲ. ಜುಲೈ 1984ರಿಂದ ಈ ಅಂಚೆ ಪಿರ್ಯಾದು ಚೀಟಿಯನ್ನು ಬಳಕೆಯಲ್ಲಿ ತಂದಿದ್ದರೂ ಕೂಡ ನಾಗರಿಕರು ಅವುಗಳನ್ನು ಉಪಯೋಗಿಸಿದ ಸಂಖ್ಯೆ ಕೇವಲ 46 ಮಾತ್ರ. ನಾಗರಿಕರು ದೂರು ಕೊಡಲು ಹಿಂಜರಿಯುವುದೆ ಆಟೋರಿಕ್ಷಾ ಚಾಲಕರಿಗೆ ಇಂಬು. ನಾಗರಿಕರಿಗೆ ತಮ್ಮ ಕರ್ತವ್ಯವನ್ನು ತಿಳಿ ಹೇಳಲು ಮಂಗಳೂರು ಟ್ರಾನ್ಸಿಟ್ ಹಾಗೂ ಬಳಕೆದಾರರ ಚಳವಳಿದವರನ್ನು ಈಗಾಗಲೇ ಉಪಯೋಗಿಸಿಕೊಂಡು ತಿಳಿಸಲಾಗಿದೆ.

ಮೀಟರು ಹಾಕದ ರಿಕ್ಷಾ ಚಾಲಕರ ಮೇಲೆ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡುವುದಲ್ಲದೆ ಅವುಗಳ ಮಾಲೀಕರ ಪರ್ಮಿಟನ್ನು ರದ್ದುಪಡಿಸಲು ಸಾರಿಗೆ ಪ್ರಾಧಿಕಾರಕ್ಕೆ ತಿಳಿಸಲಾಗಿದೆ. ರಿಕ್ಷಾದಲ್ಲಿ 3 ಜನ ಪ್ರಯಾಣಿಸುವಾಗ ಅದರಲ್ಲಿ ರಿಕ್ಷಾ ಮೀಟರಿಗಿಂತ ಒಂದೂವರೆ ಪಟ್ಟು ಹೆಚ್ಚು ದರವನ್ನು ವಸೂಲು ಮಾಡಬಹುದೆಂಬ ಕಾನೂನು ಇನ್ನೂ ಹಲವಾರು ನಾಗರಿಕರಿಗೆ ತಿಳಿದಿಲ್ಲ. ಈ ಬಗ್ಗೆ ಆಟೋರಿಕ್ಷಾ ಚಾಲಕರಿಗೆ ಒಂದು ವಾರದ ತರಬೇತಿಯನ್ನು ಕೊಡುವ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಳ್ಳಲಾಗಿದೆ. ಇದರಿಂದ ಪರಿಸ್ಥಿತಿ ಸುಧಾರಿಸಬಹುದೆಂಬ ಭರವಸೆಯಿದೆ. ಅಲ್ಲದೆ ಎಲ್ಲಾ ರಿಕ್ಷಾ ನಿಲ್ದಾಣದಲ್ಲಿ ಟ್ರಾಫಿಕ್ ಪೊಲೀಸರನ್ನು ಹಾಕಲು ನಮ್ಮ ಪೊಲೀಸರ ಸಂಖ್ಯೆ ಕಡಿಮೆಯಿರುವ ಕಾರಣದಿಂದಲೂ ರಿಕ್ಷಾ ನಿಲ್ದಾಣಗಳು ಹೆಚ್ಚಾಗಿರುವುದರಿಂದಲೂ ನಿಯಮಿಸಲು ಸಾಧ್ಯವಾಗುವುದಿಲ್ಲ. ಆದರೂ ಕೂಡ ರಿಕ್ಷಾ ಚಾಲಕರು ನಿಗದಿತ ತಂಗುದಾಣದಲ್ಲಿ ನಿಂತು ಸರದಿ ಪ್ರಕಾರ ಪ್ರಯಾಣಿಕರನ್ನು ಕೊಂಡೊಯ್ಯುತ್ತಾರೆ. ಇನ್ನು ಮುಂದೆ ಕೂಡ ದೈನಂದಿನ ತನಿಖೆಯ ಕಾಲದಲ್ಲಿ ಮೀಟರು ಹಾಕದ ರಿಕ್ಷಾ ಚಾಲಕರ ಹಾಗೂ ಮಾಲೀಕರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು."

—ಶಫೀಕ್

ಸಾರ್ವಜನಿಕ ಸಂಪರ್ಕಾಧಿಕಾರಿ, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ಕಾರ್ಯಾಲಯ.
ಬೆಂಗಳೂರು

ಪೋಲೀಸರೇ ಈ ವ್ಯವಸ್ಥೆ ಮಾಡಿ

ಪ್ರಿಯರೆ,

[illegible]

ಅಧಿಕಾರಿ ಕಿರುಕುಳ

ಪ್ರಿಯರೆ,

[illegible]

ಆಟೋರಿಕ್ಷಾ ಅವ್ಯವಸ್ಥೆ ಬಗ್ಗೆ "ಓದುಗರ ಕೋರಿಕೆ"ಯಲ್ಲಿ ಪ್ರಕಟಗೊಂಡಿದ್ದ ಪತ್ರ

ಎಲ್ಲಾ ರಿಕ್ಷಾಗಳಲ್ಲಿ ಮೀಟರುಗಳನ್ನು ಅಳವಡಿಸಲಾಗಿದೆ ಮತ್ತು ಸಾಧಾರಣವಾಗಿ ಎಲ್ಲಾ ರಿಕ್ಷಾ ಚಾಲಕರು ಗಾಡಿಯನ್ನು ಚಲಾಯಿಸುವಾಗ ಮೀಟರು ಹಾಕಿರುತ್ತಾರೆ. ಆದರೆ ಪ್ರಯಾಣಿಕರು ಇಳಿಯುವ ಸ್ಥಳದಲ್ಲಿ ಯಾರೂ ಇಲ್ಲದೆ ಹಿಂತಿರುಗಿ ಖಾಲಿ ಬರಬೇಕಾದ ಪರಿಸ್ಥಿತಿಯನ್ನು ಗಮನಿಸಿ ಹೆಚ್ಚಿಗೆ ಬಾಡಿಗೆ ಕೇಳುತ್ತಾರೆ. ಈ ಬಗ್ಗೆ ಪ್ರಯಾಣಿಕರ ಸೌಕರ್ಯಕ್ಕೆ ಅನುಕೂಲವಾಗುವಂತೆ ಅಂಚೆಯ ಮೂಲಕ ಪಿರ್ಯಾದು ಚೀಟಿಯನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಇಲಾಖೆಯ ದೈನಂದಿನ ತನಿಖೆಯ ಕಾಲದಲ್ಲಿ ಕೂಡಾ ಮೀಟರು ಹಾಕುವುದರ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವುದು. ಕೋರ್ಟಿನಲ್ಲಿ ಸಾಕ್ಷಿ ಹೇಳಲು ಹಿಂಜರಿಯುವ ನಾಗರಿಕರು ಈ ಅಂಚೆ ಪಿರ್ಯಾದು ಚೀಟಿಯ ಅಥವಾ ಲಿಖಿತ ದೂರಿನಲ್ಲಿ ಪೊಲೀಸರಲ್ಲಿ ದಾಖಲಿಸಲು ಹಿಂಜರಿಯುತ್ತಾರೆ. ಆದುದರಿಂದ

ಬಾಬಯ್ಯರವರನ್ನು ಬಿಡುಗಡೆ ಮಾಡಿ

ಪ್ರಿಯರೆ,

ಬೆಂಗಳೂರು ವಿ.ವಿ. ಅಧ್ಯಾಪಕ ಪ್ರೊ|| ಬಾಬಯ್ಯನವರನ್ನು ಕೆಲವು ದಿನಗಳ ಹಿಂದೆ ಭಯೋತ್ಪಾದಕ ಕಾನೂನಿನ ಯಲ್ಲಿ ಬಂಧಿಸಿದ್ದಾರೆ. ಇವರು ಮಾಡಿರುವ ಅಪರಾಧವಾದರೂ ಏನು? ಪ್ರಜಾಪ್ರಭುತ್ವವಾದಿ ವಿಚಾರಧಾರೆಯುಳ್ಳವರು, ಬಾಬಯ್ಯನವರನ್ನು ವಿನಾ ಕಾರಣ ಬಂಧಿಸಿ ಎಲ್ಲಿರಿಸಲಾಗಿದೆಯೆಂದು ಸರಿಯಾಗಿ ತಿಳಿಸದೆ, ಸಂಬಂಧಿಕರಿಗೆ ಮತ್ತು ಮಿತ್ರರಿಗೆ ಭೇಟಿಯಾಗಲೂ ಅವಕಾಶ ಕೊಡದೆ ಕಣ್ಣು ಮುಚ್ಚಾಲೆಯಾಟ ನಡೆಸುತ್ತಿದ್ದಾರೆ. ಬುಡದಿಂದ ತಲೆಯ ವರೆಗೆ ಕಾನೂನು ವಿರೋಧಿ ರಾಷ್ಟ್ರ ವಿರೋಧಿ ಚಟುವಟಿಕೆಯಲ್ಲಿ ತೊಡಗಿದವರನ್ನು ಬಂಧಿಸದೆ ಪ್ರೊ|| ಬಾಬಯ್ಯನವರನ್ನು ಬಂಧಿಸಿರುವ ಕಾರಣವೇನು?

ಪ್ರೊ||ರನ್ನು ಯಾವುದೇ ಕಾರಣಕ್ಕೆ ಬಂಧ್ರದ ಪೊಲೀಸರ ಕೈಗೆ ಕೊಡದೆ ಅವರನ್ನು ಗೌರವ ಪೂರ್ವಕವಾಗಿ ಬಿಡುಗಡೆಗೊಳಿಸಿ 75ರ ಕರಾಳ ಕಾಯಿದೆ ವಿರುದ್ಧ ಹೋರಾಡಿ ಅನುಭವವುಳ್ಳ ಇಂದಿನ ಆಡಳಿತ ಪಕ್ಷ ಜನತಾದ ಸಚಿವರು ಇತ್ತ ಗಮನಿಸಲಾರರೆ?

—ಕೆ. ಸುಮಾ

ಪೊನ್ನಂಪೇಟೆ

ಓದುಗರ ಕೋರಿಕೆ

6 ತಿಂಗಳಾದರೂ ಕನೆಕ್ಷನ್ ಇಲ್ಲ

ಪ್ರಿಯರೆ,

ನಾನು ವಿದ್ಯುತ್ ಕನೆಕ್ಷನ್‌ಗಾಗಿ ಅರ್ಜಿ ಗುಜರಾಯಿಸಿ ತಿಂಗಳು ಆರು ಕಳೆಯಿತು ಹಣಕಟ್ಟಿ ಮೂರು ತಿಂಗಳಾಯಿತು. ಟಂಪ್‌ಸೆಟ್ ತಂದೂ ಆಯಿತು. ಶೆಡ್‌ಕಟ್ಟಿ ಆಯಿತು. ಮಂಗಳೂರು ಕೆ.ಇ.ಬಿ.ಯವರು ಸುರತ್ಕಲ್‌ಗೆ ಹೋಗಲು ಹೇಳಿದರೆ ಸುರತ್ಕಲ್‌ನವರು ಮಂಗಳೂರಿಗೆ ಹೋಗಲು ಹೇಳುತ್ತಾರೆ. ಕಂಬ ಇತ್ಯಾದಿ ಸಾಗಿಸಲು ನಾವು ಅವರಿಗೆ ಲಾರಿ ಒದಗಿಸಬೇಕಂತೆ. ಈ ಗೋಳನ್ನು ಕೇಳುವವರಾರು?

—ಜೆ. ಎಂ. ಶೆಟ್ಟಿ

ಮೂಲ್ಕಿ

ಎಲ್ಲರಿಗೆ ಸಾಮಾಜಿಕ ನ್ಯಾಯ ನ್ಯಾಯಮೂರ್ತಿ ಭಗವತಿ ಆಶಯ

ಮಂಗಳೂರು, ಮೇ 31– "ಜಾತಿ, ಮತ, ಲಿಂಗ ಭೇದಗಳಿಲ್ಲದೆ ಎಲ್ಲರಿಗೆ ಸಾಮಾಜಿಕ ನ್ಯಾಯ ದೊರಕುವಂತಾಗಬೇಕೆಂದು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಪಿ. ಎನ್. ಭಗವತಿ ಅವರು ಆಶಿಸಿದರು.

ಅವರು ಗುರುವಾರ ಸಂಜೆ ಇಲ್ಲಿನ ನ್ಯಾಯಾಲಯದ ಆವರಣದಲ್ಲಿ ವಕೀಲರ ಸಂಘದ ಆಶ್ರಯದಲ್ಲಿ ವಕೀಲರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ವಕೀಲರು ತಮ್ಮ ವೃತ್ತಿಗೆ ನಿಷ್ಠರಾಗಿರಬೇಕೆಂದು ಜಸ್ಟಿಸ್ ಭಗವತಿ ಹೇಳಿದರು.

ಕಠೋಪನಿಷತ್‌ನ "ಸತ್ಯ ಮೇವ ಜಯತೆ" ಎನ್ನುವುದನ್ನು ಉದ್ಧರಿಸಿದ ಅವರು ಅದೇ ನಮ್ಮ ದೇಶದ ಗುರಿ ಕೂಡಾ ಎಂದರು.

ಭಾರತದಲ್ಲಿ ನ್ಯಾಯಾಂಗವು ಸಾಮಾಜಿಕ ನ್ಯಾಯದತ್ತಲೇ ಗಮನ ಹರಿಸಿದೆ. ನ್ಯಾಯಾಂಗವು ವಕೀಲರಿಲ್ಲದೆ ಏನೂ ಮಾಡುವಂತಿಲ್ಲ. ನ್ಯಾಯಾಧೀಶರು ಮತ್ತು ವಕೀಲರು ನ್ಯಾಯಾಂಗ ರಥದ ಎರಡು ಚಕ್ರಗಳಿದ್ದಂತೆ. ಇವೆರಡೂ ಒಂದಕ್ಕೊಂದು ಹೊಂದಿಕೊಂಡು ಹೋಗಬೇಕು ಎಂದು ಅವರು ಹೇಳಿದರು.

ವಕೀಲರು ಸಮಾಜಕ್ಕೆ ಬದ್ಧರಾಗಿರಬೇಕಲ್ಲದೆ ತಮ್ಮ ಕಕ್ಷಿದಾರರೊಂದಿಗೆ ಪ್ರಾಮಾಣಿಕರಾಗಿರಬೇಕು. ಭಾರತದಲ್ಲಿ ನ್ಯಾಯದಿಂದ ವಂಚಿತರಾದ ಬಹುತೇಕ ಮಂದಿಗೆ ನ್ಯಾಯ ದೊರಕಿಸುವಲ್ಲಿ ವಕೀಲರು ಶ್ರಮಿಸಬೇಕೆಂದು ಅವರು ಕರೆ ನೀಡಿದರು.

ವಕೀಲರು ಬಡತನವನ್ನು ನಿರ್ಮೂಲನ ಮಾಡಲು ಸಾಧ್ಯವಿಲ್ಲವಾದರೂ ಎಲ್ಲ ದುರ್ಬಲರಿಗೆ ಅವರ ಪ್ರಾಥಮಿಕ ಮಾನವ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡುವ ಕೆಲಸವನ್ನು ಇಂದು ಮಾಡಬೇಕಾಗಿದೆ. ಇದಕ್ಕಾಗಿ ಕಾನೂನು ನೆರವು ಮತ್ತು ಸಲಹಾ ಮಂಡಳಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಂವಿಧಾನದಲ್ಲಿ ಕಾನೂನು ನೆರವನ್ನು ಒದಗಿಸುವ ಬಗ್ಗೆ ಉಲ್ಲೇಖಿಸಲಾಗಿದೆ ಎಂದು ಅವರು ವಿವರಿಸಿದರು.

ಕಾನೂನು ನೆರವು ಸಮಾಜದ ಅತ್ಯಂತ ಕೆಳಸ್ತರದವರೆಗೂ ಲಭಿಸಬೇಕು. ಹಾಗಾಗದಿದ್ದರೆ ಬಹುತೇಕ ಮಂದಿ ಕಾನೂನಿನಿಂದ ವಂಚಿತರಾಗಿ ಉಳಿಬೇಕಾಗುತ್ತದೆ ಎಂದು ಅವರು ಹೇಳಿದರು.

ಕಾನೂನು ನೆರವಿನ ಬಗ್ಗೆ ಕಿರು ಹೊತ್ತಿಗೆ, ಸಾಕ್ಷ್ಯಚಿತ್ರಗಳನ್ನು ಹೊರತಂದಿರುವ ರಾಜ್ಯ ಸರ್ಕಾರದ ಬಗ್ಗೆ ಪ್ರಶಂಸಿಸಿದ ಅವರು ಪ್ರಾದೇಶಿಕ ಭಾಷೆಗಳಲ್ಲಿ ಕಾನೂನು ನೆರವಿನ ತಿಳುವಳಿಕೆ ನೀಡುವ ಕಿರು ಹೊತ್ತಿಗೆಗಳನ್ನು ಪ್ರಕಟಿಸಬೇಕೆಂದರು.

ಲೋಕ್ ಅದಾಲತ್

ಮಂಗಳೂರಿನಲ್ಲಿ "ಲೋಕ್ ಅದಾಲತ್" ನ್ಯಾಯಾಂಗ ವ್ಯವಸ್ಥೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದಾಗಿ ಭಗವತಿ ಅವರು ಪ್ರಕಟಿಸಿದರು.

"ಲೋಕ್ ಅದಾಲತ್" ವ್ಯವಸ್ಥೆಯಿಂದ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ನ್ಯಾಯ ದೊರಕುತ್ತದೆ ಎಂದ ಅವರು, ದೇಶದ ವಿವಿಧೆಡೆಗಳಲ್ಲಿ ಈ ವ್ಯವಸ್ಥೆ ಯಶಸ್ವಿಯಾಗಿರುವುದನ್ನು ವಿವರಿಸಿ ಜಿಲ್ಲಾ ಮಟ್ಟದಲ್ಲೂ ಇಂಥ ಒಂದು ವ್ಯವಸ್ಥೆ ಜಾರಿಗೆ ಬರುವುದು ಅತ್ಯಗತ್ಯ ಎಂದರು.

ವಕೀಲ ವೃತ್ತಿಯನ್ನು ಉದಾತ್ತ ಧ್ಯೇಯಗಳ ವೃತ್ತಿ ಎಂದು ಬಣ್ಣಿಸಿದ ಭಗವತಿ ಅವರು, ವಕೀಲರು ಜನ ಸಾಮಾನ್ಯರಿಗೆ ನ್ಯಾಯ ದೊರಕಿಸಲು ಶ್ರಮಿಸಬೇಕೆಂದು ಕರೆ ನೀಡಿದರು. ಮುನ್ಸಿಫ್ ಕೋರ್ಟುಗಳಲ್ಲಿ ಸುಮಾರು 25,000 ಮೊಕದ್ದಮೆಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ ಎಂದು ಅವರು ಹೇಳಿದರು.

ಸಭೆಯನ್ನುದ್ದೇಶಿಸಿ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಕೆ. ಜಗನ್ನಾಥ ಶೆಟ್ಟಿ ಮಾತನಾಡಿದರು.

ಸಭೆಯಲ್ಲಿ ಶ್ರೀಮತಿ ಭಗವತಿ, ಹೇಮಲತಾ ಜೆ. ಶೆಟ್ಟಿ, ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಆರ್. ಜಿ. ವೈದ್ಯನಾಥನ್ ಮೊದಲಾದವರು ಉಪಸ್ಥಿತರಿದ್ದರು.

ವರ್ಗಾವರ್ಗಿ

ಉಡುಪಿ, ಮೇ 31–ವಲಯ ಕಾರ್ಮಿಕ ಇನ್ಸ್‌ಪೆಕ್ಟರ್ ಆಗಿ ಕೆ. ಎನ್. ಸತ್ಯನಾರಾಯಣ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಈ ಹುದ್ದೆಯಲ್ಲಿದ್ದ ಎಚ್. ಕೆ. ಹನುಮಪ್ಪನವರು ಸೀನಿಯರ್ ಲೇಬರ್ ಇನ್ಸ್‌ಪೆಕ್ಟರ್ ಆಗಿ ಭಡ್ತಿ ಹೊಂದಿ, ಬೆಂಗಳೂರಿಗೆ ವರ್ಗವಾಗಿದ್ದಾರೆಂದು ಕಚೇರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉಳ್ಳಾಲ, ಸುರತ್ಕಲ್ ಕ್ಷೇತ್ರದ ಬಿ. ಜೆ. ಪಿ ಸಮ್ಮೇಳನ ಇಂದು

ಉಳ್ಳಾಲ, ಮೇ 31–ಮುಂಬರುವ ಜಿಲ್ಲಾ ಪರಿಷತ್ ಮಂಡಲ ಪಂಚಾಯತಿ ಹಾಗೂ ವಿಧಾನ ಪರಿಷತ್ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತಾಲೂಕು ಮಟ್ಟದಲ್ಲಿ ಪಕ್ಷವನ್ನು ಸಂಘಟಿಸಲು ವಿಧಾನ ಸಭಾಕ್ಷೇತ್ರಗಳಾದ ಸುರತ್ಕಲ್ ಮತ್ತು ಉಳ್ಳಾಲ ಕ್ಷೇತ್ರದ ಬಿ.ಜೆ.ಪಿ. ಕಾರ್ಯಕರ್ತರ ಸಮ್ಮೇಳನವನ್ನು ಜೂನ್ 1ರಂದು ಏರ್ಪಡಿಸಲಾಗಿದೆ.

ಈ ಸಮ್ಮೇಳನವು ಇಲ್ಲಿನ ಶ್ರೀ ಲಕ್ಷ್ಮೀನರಸಿಂಹ ದೇವಾಲಯದ ವ್ಯಾಸ ರಘುಪತಿ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಬಿ.ಜೆ.ಪಿ. ರಾಜ್ಯ ಸಮಿತಿ ಅಧ್ಯಕ್ಷ ಬಿ. ಶಿವಪ್ಪ, ಶಾಸಕರುಗಳಾದ ಬಿ.ಎಸ್. ಯಡಿಯೂರಪ್ಪ, ವಸಂತ ಬಂಗೇರ, ಕರಂಬಳ್ಳಿ ಸಂಜೀವ ಶೆಟ್ಟಿ, ಮಾಜಿ ಶಾಸಕರುಗಳಾದ ಧನಂಜಯ ಕುಮಾರ್, ಡಾ॥ ಎ.ಎಸ್. ಆಚಾರ್ಯ ಎ. ರುಕ್ಮಯ್ಯ ಪೂಜಾರಿ, ವಿಮಲಾ ಗೌಡ, ಕೆ. ನಾರಾಯಣ ಶೆಟ್ಟಿ ಮುಂತಾದವರು ಸಮ್ಮೇಳನದಲ್ಲಿ ಭಾಗವಹಿಸುವರು.

ಸಂಜೆ 5ರಿಂದ 6ರ ವರೆಗೆ ಮೆರವಣಿಗೆ ಮತ್ತು 6ಗಂಟೆಗೆ ಪೆರ್ಮನ್ನೂರು ಪಂಚಾಯತಿ ಮೈದಾನದಲ್ಲಿ ಸಾರ್ವಜನಿಕ ಸಭೆ ಜರಗಲಿದೆ.

ಗಂಡನ ಕೋಪಕ್ಕೆ ಹೆಂಡತಿ ಬಲಿ

ಕುಂದಾಪುರ, ಮೇ 31– ಹೆಂಡತಿ ಅಡುಗೆ ಮಾಡದೇ ಮಲಗಿಕೊಂಡು ಮಲಗಿದುದಕ್ಕೆ ಸಿಟ್ಟುಗೊಂಡು ಹೊಡೆದು ಹೆಂಡತಿಯ ಸಾವಿಗೆ ಗಂಡ ಕಾರಣನಾದ ಸುದ್ದಿಯೊಂದು ಸಿದ್ದಾಪುರದಿಂದ ಬಂದಿದೆ.

ಬಸವರಾಜ ಕೂಲಿಯಾಳು ... ಹೇಳಿದ ಕೆಲಸ ... ಮಾಡದಿರುವುದಕ್ಕೆ ಗಂಡ ಬಸವರಾಜನಿಗೆ ಸಿಟ್ಟು. ಮಗುವಿಗೆ ಪೋಲಿಯೋ ... ಕೊಡಿಸಲು ಹೋಗಿಂದಿದ್ದ ... ಗಡ ಹೆಂಡತಿ ತಾ. 28ರಂದು ಆಸ್ಪತ್ರೆಗೆ ಹೋದಾಗ ಆಸ್ಪತ್ರೆ ಬಂದಾಗಿತ್ತು. ಗಂಡ ಹೆಂಡತಿಯನ್ನು ಜರೆದ. ಹೆಂಡತಿ ... ಕೊಂಡು ಮಲಗಿಯೇ ಬಿಟ್ಟಳು. ... ಮಾಡಲಿಲ್ಲ.

ತಾಳ್ಮೆ ಕಳಕೊಂಡ ಗಂಡ ಸಂಜೆ 4 ಗಂಟೆಗೆ ಆಕೆಗೆ ದೊಣ್ಣೆಯಿಂದ ಬಿಟ್ಟ. ಕೆಳಗೆ ಬಿದ್ದ ಆಕೆಯ ತಲೆಗೆ ಮಣೆ ಬಡಿಯಿತು. ಅಲ್ಲೇ ಕುಸಿದು ಬಿದ್ದು ಸತ್ತಳು.

ತಡವಾಗಿ ವಿಷಯ ತಿಳಿದ ಪೊಲೀಸರು ಈಗ ತನಿಖೆ ನಡೆಸುತ್ತಿದ್ದಾರೆ.

ಸರ್ಕಲ್ ಇನ್ಸ್‌ಪೆಕ್ಟರ್ ಎಚ್. ಆರ್ ಭಂಡಾರಿ ಹಾಗೂ ಹೆಡ್ ಕಾನ್ಸ್‌ಟೇಬಲ್ ದೇರಪ್ಪ ಸ್ಥಳಕ್ಕೆ ಧಾವಿಸಿದ್ದಾರೆ.

ಈ ಜೋಡಿಗೆ ಸರಳ ಮದುವೆ ತರಲಿದೆ ಇಂದು ಬಾಳ ಬಂಧನ

ಮಂಗಳೂರು, ಮೇ 31–ಕರ್ನಾಟಕ ದಲಿತ ಸಂಘರ್ಷ ಸಮಿತಿಯ ... ಘಟಕದ ಆಶ್ರಯದಲ್ಲಿ ನಾಳೆ ಜೂನ್ 1ರಂದು ಕಾಂತಪ್ಪ ಅಲಂಗಾರು ... ಕೆ. ವಿಮಲ ಎಂಬವರು ಗೊಡ್ಡು ಸಂಪ್ರದಾಯಗಳನ್ನೆಲ್ಲ ತೂರಿದು ನಿಂತು ಸರಳ ಮದುವೆಯ ಮೂಲಕ ಬಾಳ ಸಂಗಾತಿಗಳಾಗಲಿದ್ದಾರೆ.

ನಗರದ ಬಿಷಪ್ಸ್ ಕಾಂಪೌಂಡ್‌ನ ಕುದ್ಮುಲ್ ರಂಗರಾವ್ ಸ್ಮಾರಕ ಭವನದಲ್ಲಿ ಈ ಸರಳ ಮದುವೆ ಸಮಾರಂಭ ನಡೆಯಲಿದ್ದು, ಈ ಸಂದರ್ಭದಲ್ಲಿ ಒಡೆಯರ್ ಡಿ. ಹೆಗ್ಗಡೆ ಮತ್ತು ರಾಮಚಂದ್ರ ... ಮಾತನಾಡಲಿದ್ದಾರೆ.

ವರದಕ್ಷಿಣೆ, ಹೆಣ್ಣನ್ನು ಗುಲಾಮಳನ್ನಾಗಿಸುವ ಹಾಗೂ ಮೌಢ್ಯ ... ಬಂಧಿಸುವ ಪದ್ಧತಿಯಿಂದ ದೂರ ... ಮಾದರಿಯಾಗಿ ಸ್ನೇಹ ... ಪ್ರೇಮದ ಬದುಕಿಗೆ ಪ್ರೋತ್ಸಾಹಿಸುವುದೇ ಈ ಕಾರ್ಯಕ್ರಮದ ಉದ್ದೇಶವೆಂದು ದ. ಸಂ. ಸ. ತಿಳಿಸಿದೆ.

ಬಂದರೆ ಬಂದರು ಬಿಟ್ಟರೆ ಬಿಟ್ಟರು!

ಮಂಗಳೂರು, ಮೇ 31– ಜಿಲ್ಲಾಭಿವೃದ್ಧಿ ಮಂಡಳಿ ಸಭೆ ನಡೆಯುವ ಸಂದರ್ಭದಲ್ಲೇ ಕೆಲವು ಇಲಾಖೆಗಳ ಅಧಿಕಾರಿಗಳಿಗೆ ಮದುವೆ, ಉಪನಯನ, ಪ್ರವಾಸಗಳು ದಿಢೀರ್ ಪ್ರತ್ಯಕ್ಷವಾಗುವುದು ಇಂದು ನಿನ್ನೆಯದಲ್ಲ. ಪ್ರತೀ ಸಲ ಜರಗುವ ಸಭೆಯಲ್ಲೂ ಜಿಲ್ಲಾಧಿಕಾರಿ ಸುಧೀರ್‌ಕೃಷ್ಣ ಅವರು ಅಧಿಕಾರಿಗಳನ್ನು ಎಚ್ಚರಿಸುತ್ತಲೇ ಬಂದಿದ್ದಾರೆ. ಆದರೂ ಕೆಲವು ಅಧಿಕಾರಿಗಳು ಗೈರುಹಾಜರು! ಕೆಲವರು ಬರುತ್ತಾರೆ ಅಂತೆ ಅಂತೆ... ಪ್ರಗತಿಯ ಚಿತ್ರಣವನ್ನು ಕಚೇರಿಯಲ್ಲೇ ಇಟ್ಟಿರುತ್ತಾರೆ.

ಶುಕ್ರವಾರ ಇಲ್ಲಿ ಸಮಾವೇಶಗೊಂಡಿದ್ದ ಜಿಲ್ಲಾಭಿವೃದ್ಧಿ ಮಂಡಳಿ ಸಭೆಗೆ ಜಿಲ್ಲಾ ವಿದ್ಯಾಂಗ ಉಪನಿರ್ದೇಶಕ ಎಚ್. ಅಶೋಕ ಕುಮಾರಿ ಅವರು ಗೈರುಹಾಜರಾದ ಬಗ್ಗೆ ಜಿಲ್ಲಾಧಿಕಾರಿ ಸುಧೀರ್‌ಕೃಷ್ಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಉಪನಿರ್ದೇಶಕಿ ಅವರು ಸಾಮಾನ್ಯ ರಜೆ ಹಾಕಿ ಹೋಗಿರುವುದಾಗಿ ಶಿಕ್ಷಣ ಇಲಾಖೆಯ ಮತ್ತೊಬ್ಬ ಅಧಿಕಾರಿ ಅವರು ಸಭೆಗೆ ತಿಳಿಸಿದರು.

ಇತ್ತೀಚೆಗೆ ಡಿ.ಎಲ್.ಆರ್.ಸಿ.(ಸ್ಥಳೀಯ ನೇಮಕಾತಿ ಸಮಿತಿ)ಯಲ್ಲಿ ಶಿಕ್ಷಕರ ನೇಮಕಾತಿ ಕುರಿತು ವಿವಾದಗಳೆದ್ದಿರುವುದರ ಹಿನ್ನೆಲೆಯಲ್ಲಿ ಉತ್ತರಿಸಬೇಕಾಗಿದ್ದ ಅಶೋಕ ಕುಮಾರಿ ಅವರೇ ಗೈರುಹಾಜರು!.

ಕಾಫಿ ಕಾರ್ಮಿಕರಿಗೆ 300 ರೂ.ಪರಿಹಾರಕ್ಕೆ ಆಗ್ರಹ

ಮಂಗಳೂರು, ಮೇ 31–ಕಾಫಿ ಕ್ಯೂರಿಂಗ್ ಕಾರ್ಖಾನೆಗಳ ಕೆಲಸಗಾರರಿಗೆ ಕೆಲಸವಿಲ್ಲದ ಸಮಯದಲ್ಲಿ ತಿಂಗಳಿಗೆ 300 ರೂಪಾಯಿ ನಿರುದ್ಯೋಗ ಪರಿಹಾರ ನೀಡಬೇಕೆಂದು ದ.ಕ. ಜಿಲ್ಲಾ ಕಾಫಿ, ಏಲಕ್ಕಿ ಮತ್ತು ಅಲ್ಯಾಡ್ ಕೆಲಸಗಾರರ ಸಂಘದ ಮಹಾಸಭೆ ಆಗ್ರಹಿಸಿದೆ.

ಇತ್ತೀಚೆಗೆ ನಡೆದ ಮಹಾ ಸಭೆಯಲ್ಲಿ ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಏಟಕ್ ಪ್ರಧಾನ ಕಾರ್ಯದರ್ಶಿ ಬಿ.ಶೀನ ಅವರು ವಹಿಸಿದ್ದರು.

ಗ್ರಾಚ್ಯುಟಿ ವಿವಾದವನ್ನು ಸುಪ್ರೀಂ ಕೋರ್ಟಿಗೆ ಒಯ್ದಿರುವ ಕಾಫಿ ಕ್ಯೂರಿಂಗ್ ಕಾರ್ಖಾನೆಗಳ ಆಡಳಿತವರ್ಗದ ಕಾರ್ಮಿಕ ವಿರೋಧಿ ಧೋರಣೆಗಳನ್ನು ಸಭೆ ಖಂಡಿಸಿತು.

ಮಂಗಳೂರಿನಲ್ಲಿ ಮುಚ್ಚಲ್ಪಟ್ಟ ಎಲ್ಲಾ ಗೇರು ಬೀಜ ಕಾರ್ಖಾನೆಗಳನ್ನು ಸರಕಾರವೇ ವಹಿಸಿ ಕೊಂಡು ಪುನರಾರಂಭಿಸಿ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದರ ಜೊತೆಗೆ ಕಾರ್ಮಿಕರ ನಿರುದ್ಯೋಗ ನಿವಾರಣೆಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರಕಾರವನ್ನು ಒತ್ತಾಯಿಸಲಾಯಿತು.

ದ.ಕ. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನಾಲ್ಕು ವರ್ಷಗಳಿಗಿಂತ ಹೆಚ್ಚು ಸಮಯದಿಂದ ಉದ್ಯೋಗದ ನಿರೀಕ್ಷೆಯಲ್ಲಿರುವವರಿಗೆ ಆರು ತಿಂಗಳೊಳಗೆ ಉದ್ಯೋಗ ಒದಗಿಸಬೇಕೆಂದು ಸಭೆಯು ಆಗ್ರಹ ಪಡಿಸಿತು.

ನವ ಮಂಗಳೂರು ಬಂದರು ಕೆಲಸಗಾರರ ಸಂಘದ ಕಾರ್ಯದರ್ಶಿ ರಾಜೇಂದ್ರನ್ ಹಾಗೂ ದ.ಕ. ಜಿಲ್ಲಾ ಬೀಡಿ ಕೆಲಸಗಾರರ ಫೆಡರೇಶನಿನ ಕಾರ್ಯದರ್ಶಿ ಭೋಜ ಕೋಟ್ಯಾನ್ ಅವರೂ ಈ ಸಂದರ್ಭದಲ್ಲಿ ಮಾತನಾಡಿದರು.

ಸಂಘದ ಕಾರ್ಯದರ್ಶಿ ಶಿವಾನಂದ ಕುಮಾರ್ ಅವರು ಸ್ವಾಗತಿಸಿ, ವರ್ಷದ ಚಟುವಟಿಕೆಯ ವರದಿ ಹಾಗೂ ಲೆಕ್ಕಪತ್ರವನ್ನು ಮಂಡಿಸಿದರೆಂದು ಸಂಘದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಗಳಿಗೆ ಸಚಿವರ ಕರೆ ನೋವಿಗೆ ಧ್ವನಿಯಾಗಲಿ

"ಸ್ಪಂದನ" ಎನ್ನುವ ಚಿಕ್ಕಮಗಳೂರು ಜಿಲ್ಲೆಯ ಪತ್ರಕರ್ತರ ಕಿರು ಪರಿಚಯದ ಪುಸ್ತಕವನ್ನು ಬಿಡುಗಡೆ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷ ಜಿ. ಕೆ. ಸತ್ಯ ಅವರು ಮಾತನಾಡುತ್ತ, ಜಿಲ್ಲಾ ಪತ್ರಕರ್ತರ ಸಂಘಟನೆ ಅಗತ್ಯವಿದೆ ಎಂದರು.

ಸಂಪೂರ್ಣ ಕ್ರಾಂತಿಗೆ ಸಜ್ಜು

ಸಮಾಜದಲ್ಲಿ ಬದಲಾವಣೆ ಅಗತ್ಯವಾಗಿದ್ದು, ಸಂಪೂರ್ಣ ಕ್ರಾಂತಿಗೆ ಜನರನ್ನು ಸಜ್ಜುಗೊಳಿಸುವ ಜವಾಬ್ದಾರಿ ಪತ್ರಿಕೆಗಳ ಮೇಲಿದೆ ಎಂದು ಹಿರಿಯ ಪತ್ರಕರ್ತ ಎಚ್. ಎಸ್. ದೊರೆಸ್ವಾಮಿ ಹೇಳಿದರು.

ಸಮ್ಮೇಳನದಲ್ಲಿ ಸನ್ಮಾನಿತರ ಪರವಾಗಿ ಮಾತನಾಡುತ್ತಿದ್ದ ಅವರು, 21ನೇ ಶತಮಾನಕ್ಕೆ ಕಾಲಿಡುವ ಸಂದರ್ಭದಲ್ಲಿ ಬಡವರು ಬಡತನದ ರೇಖೆಯಲ್ಲಿ ಹಿಂದುಳಿವ ಸಾಧ್ಯತೆ ಇದ್ದು, ಆ ರೀತಿ ಆಗದಂತೆ ಪತ್ರಿಕೆಗಳು ಜವಾಬ್ದಾರಿಯಿಂದ ನೋಡಿಕೊಳ್ಳಬೇಕೆಂದರು.

ಹೋರಾಟಗಾರರನ್ನು ಹುರಿದುಂಬಿಸಿ ಕ್ರಾಂತಿಯತ್ತ ಕೊಂಡೊಯ್ಯುವ ಜವಾಬ್ದಾರಿ ಪತ್ರಿಕೆಗಳದ್ದಾಗಬೇಕೆಂದು ಹೇಳಿದರು. ಇಂದಿನ ಪತ್ರಕರ್ತರಲ್ಲಿ ಸ್ಫೂರ್ತಿ, ವಿಚಾರಶೀಲ ಹೋರಾಟ ಇದೆ ಎಂದರು.

ಸನ್ಮಾನ

ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ಎಸ್. ಜಿ. ಮೈಸೂರ್‌ಮಠ, ಟಿ. ನಾಗರಾಜ್, ಎನ್ ವಿ. ಜೋಶಿ, ಅವರನ್ನೂ ಸನ್ಮಾನಿಸಲಾಯಿತು. ಅಲ್ಲದೆ ಚಿಕ್ಕಮಗಳೂರು ಜಿಲ್ಲಾ ಪತ್ರಕರ್ತರ ಸಂಘದ ಪರವಾಗಿ 23 ಜನರನ್ನು ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಜಿ. ಕೆ. ಸತ್ಯ ವಹಿಸಿದ್ದರು. ಚಂದ್ರಶೇಖರ್ ಸ್ವಾಗತಿಸಿ, ಮಲ್ಲಿಕಾರ್ಜುನಯ್ಯ ವಂದಿಸಿದರು.

ಶಿಕ್ಷಕರ ವರ್ಗಾವಣೆಗೆ ವಿರೋಧ: ಹಿತರಕ್ಷಕ ಸಂಘ ಸ್ಥಾಪನೆ

(ಮುಂಗಾರು ವರದಿ)

ಅಂಕೋಲಾ, ಮೇ 27–

ಅಕ್ಷಯನ್ನು ಅಧಿಕಾರಿಗಳು ಸರಿಯಾಗಿ ಸರಿಕಂಡ ರೀತಿಯಲ್ಲಿ ಅರ್ಥೈಸಿ, ವರ್ಗಾವರ್ಗಿ ಪಟ್ಟಿಯನ್ನು ಸಿದ್ಧಪಡಿಸುತ್ತಿರುವ ಬಗ್ಗೆ ಅಂಕೋಲಾ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದ ಮನವಿ ಪತ್ರವೊಂದರಲ್ಲಿ ಆಕ್ಷೇಪಿಸಿ, ಅದನ್ನು ಕೂಡಲೇ ಸರಿಪಡಿಸುವಂತೆ ವಿನಂತಿಸಿಕೊಂಡ ಬಗ್ಗೆ ತಿಳಿದುಬಂದಿದೆ.

ಒಂದೇ ಊರು ಇಲ್ಲವೇ ಒಂದೇ ಶಾಲೆಯಲ್ಲಿ 20 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದವರನ್ನು ವರ್ಗಮಾಡಬೇಕೆಂಬ ಸರಕಾರದ ಕಾಳಜಿಯನ್ನು ತಾವು ಸ್ವಾಗತಿಸುವುದಾಗಿ ಹೇಳಿದ ಶಿಕ್ಷಕರು ಒಂದು ತಾಲೂಕಿನ ಯಾವ್ಯಾವುದೋ ಶಾಲೆಯಲ್ಲಿ ಕಷ್ಟಪಟ್ಟು ಕೆಲಸ ಮಾಡಿಬಂದುದನ್ನೆಲ್ಲ ತಮ್ಮ 20 ವರ್ಷದ ಲೆಕ್ಕಾಚಾರಕ್ಕೆ ಸೇರಿಸಿ,– ಒಂದು ಸ್ಥಳವೆಂಬುದಕ್ಕೆ ಒಂದು ತಾಲೂಕನ್ನೇ ಯುನಿಟ್ಟಾಗಿ ಅರ್ಥೈಸುವುದರಿಂದ– ಶೇ. 90ರಷ್ಟು ಶಿಕ್ಷಕರಿಗೆ ವಿನಾಕಾರಣ ತೊಂದರೆ ಕೊಟ್ಟಂತಾಗುತ್ತದೆಯೆಂದು ಜಿಲ್ಲಾಧಿಕಾರಿಗಳನ್ನು ಖುದ್ದಾಗಿ ಕಂಡು ಅರ್ಪಿಸಿದ ಮನವಿ ಪತ್ರದಲ್ಲಿ ದೂರಿಕೊಂಡಿದ್ದಾರೆಂದು ಗೊತ್ತಾಗಿದೆ.

ಬೇರೆ ತಾಲೂಕಿನಲ್ಲಿ ಹುಟ್ಟಿದ ಶಿಕ್ಷಕರು, ತಮ್ಮ ತಾಲೂಕಿಗೆ ಬಂದು ಹತ್ತಿಪ್ಪತ್ತು ವರ್ಷಗಳಿಂದ ಬೇರು ಬಿಟ್ಟು ಭಾರೀ ಕಂಟ್ರಾಕ್ಟು ಮೊದಲಾದ ಉಪದಂಧೆ ಮಾಡಿಕೊಂಡಿದ್ದರೂ, ಅವರು ಈ ತಾಲೂಕಿನವರಲ್ಲವೆಂಬ ತಾಂತ್ರಿಕ ಕಾರಣದ ರಕ್ಷಣೆ ನೀಡಿ ವರ್ಗಾವರ್ಗಿ ಪಟ್ಟಿಯಲ್ಲಿ ಸೇರಿಸದೇ ಇರುವ ಬಗೆಗೂ ಅಂಕೋಲಾ ತಾಲೂಕಿನ ಶಿಕ್ಷಕ ಸಮುದಾಯ ಕುಪಿತಗೊಂಡು ತನ್ನ ಮನವಿಯಲ್ಲಿ ದೂರಿದೆಯಾಗಿ ತಿಳಿದುಬಂದಿದೆ.

ಕೆಲವು ಅಧಿಕಾರಿಗಳು ಈ ಹೊಸಆಜ್ಞೆಯನ್ನು ಈಗಾಗಲೇ ಮಂತ್ರಿಗಳು ಮಾಡಿದ ವರ್ಗಾವರ್ಗಿ ಆಜ್ಞೆ ರದ್ದುಪಡಿಸುವುದಕ್ಕೂ, ನಿವೃತ್ತಿಗೆ ಸಮೀಪ ಬಂದವರನ್ನೂ ಕೂಡ ತಮಗಿಷ್ಟ ಬಂದಲ್ಲಿ ಎತ್ತಿ ಹಾಕುವುದಕ್ಕೂ ಬಳಸಿಕೊಳ್ಳುವ ಅಪಾಯವಿದೆಯೆಂಬ ಆತಂಕವನ್ನೂ ಮನವಿಪತ್ರದಲ್ಲಿ ವ್ಯಕ್ತಪಡಿಸಲಾಗಿದೆ.

ಈ ದೋಷ ಹಾಗೂ ಇಂಥ ಹಲವು ಕುಂದುಕೊರತೆಗಳ ಬಗ್ಗೆ ಸರಕಾರದ ಗಮನ ಸೆಳೆದು, ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವ ಉದ್ದೇಶದಿಂದ, "ಅಂಕೋಲಾ ತಾಲೂಕು ಪ್ರಾಥಮಿಕ ಶಿಕ್ಷಕರ ಹಿತರಕ್ಷಕ ಸಂಘ" ಎಂಬ ಹೆಸರಿನಲ್ಲಿ ಹೊಸದೊಂದು ಸಂಘಟನೆಯನ್ನು ಈ ಶಿಕ್ಷಕರು ಕಟ್ಟಿಕೊಂಡಿದ್ದು, ಹಿರಿಯ ಸಾಮಾಜಿಕ ಕಾರ್ಯಕರ್ತರಾದ ಓಣಮ ಜಿ. ಶೆಟ್ಟಿಯವರು ಈ ನೂತನ ಸಂಘದ ಅಧ್ಯಕ್ಷರಾಗಿದ್ದಾರೆಂದು ಗೊತ್ತಾಗಿದೆ. ನಾಗೇಶ ವಿ. ನಾಯಿ ಹಾಗೂ ಕೆ. ಕೆ. ಶೇಟರು ಉಪಾಧ್ಯಕ್ಷರಾಗಿದ್ದು, ಬಿ. ವಿ. ನಾಯ್ಕ ಮತ್ತು ಸಿ. ಎಲ್. ನಾಯ್ಕರು ಕ್ರಮವಾಗಿ ಕಾರ್ಯದರ್ಶಿ ಮತ್ತು ಖಜಾಂಚಿಗಳಾಗಿರುವ ಈ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಯಶವಂತ ನಾಯ್ಕ, ಎಸ್.ಎಲ್.ನಾಯ್ಕ, ಎಸ್. ವಿ. ಗಾಂವಕಾರ, ವೆಂಕಣ್ಣ ಬಿ. ನಾಯಕ, ಎಸ್. ಡಿ. ರಾಯ್ಕರ, ಎಚ್. ಬಿ. ಕಟಗಿ, ಎಸ್. ಟಿ. ನಾಯ್ಕ, ಎಸ್. ಜಿ. ನಾಯಕ ಇವರುಗಳೆಲ್ಲ ಸದಸ್ಯರಾಗಿದ್ದಾರೆಂದು ಗೊತ್ತಾಗಿದೆ.

ಜೂನಿಯರ್ ಕಾಲೇಜು ಹೆಸರು ಬದಲಾವಣೆ

ಬೆಂಗಳೂರು, ಮೇ 27– ಕರ್ನಾಟಕ ರಾಜ್ಯದಲ್ಲಿರುವ ಕಿರಿಯ ಕಾಲೇಜುಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪದವಿ ಪೂರ್ವ ಕಾಲೇಜುಗಳೆಂದು ನಾಮಕರಣ ಮಾಡಲಾಗುವುದು ಎಂದು ಹೇಳಲಾಗಿದೆ.

BINNY'S TARPAULINS

Buy at Binny's recommended price

BINNY LIMITED (AGENCY DIVISION)
88/1 K.R. Road, Bangalore-4.
Ph: 601794/605191

PALS TRADING COMPANY
Shop No. 11, Kerala Samajam Shopping Complex, K.S. Rao Road,
Mangalore 575 001

BINNY — *For total protection*

ಹೊಸಾ ವಿಮಾ ವ್ಯವಹಾರ
ರೂ. 7,000 ಕೋಟಿಗಳಿಗೂ ಮೀರಿತು!



1985-86ರಲ್ಲಿ ಎಲ್ ಐ ಸಿಯು ಭಾರತದಲ್ಲಿ ಸಾಧಿಸಿದ ಹೊಸಾ ವ್ಯವಹಾರ (ವ್ಯಕ್ತಿಗತ ವಿಮೆ) ರೂ. 7,039.47 ಕೋಟಿಗಳಷ್ಟಾಗಿ ಕಳೆದ ವರ್ಷದ ಹೋಲಿಕೆಯಲ್ಲಿ ಶೇಕಡಾ 31.30ರಷ್ಟು ವೃದ್ಧಿ ಯಾಯಿತು. ಈ ವ್ಯವಹಾರವು 3,882 ಲಕ್ಷ ಪಾಲಿಸಿಗಳ ಮೂಲಕ ಪಡೆಸಿ ಕಳೆದ ವರ್ಷಕ್ಕಿಂತ ಶೇಕಡಾ 21.05ರಷ್ಟು ಹೆಚ್ಚಳವಾಯಿತು.

[illegible] ರೂ. 9,613.76 ಕೋಟಿಗಳ [illegible] ವ್ಯವಹಾರವನ್ನು 11.56 ಲಕ್ಷ [illegible] ಪೂರೈಸಿತು [illegible] ಸಾಧಿಸಿದ ಸಾಮೂಹಿಕ ವಿಮಾ [illegible] 2,832ರಷ್ಟು 1984-85 ಸಾಲಿನ [illegible] ಶೇಕಡಾ 20ರಷ್ಟು [illegible]

ವ್ಯಕ್ತಿಗತ ಮತ್ತು ಸಾಮೂಹಿಕ ವಿಮೆಗಳಿಂದ 1985-86ರಲ್ಲಿ ಆದ ಒಟ್ಟು ವ್ಯವಹಾರವು ರೂ. 16,673.23 ಕೋಟಿಗಳಿಗೆ ಏರಿ, ನಿಗಮದ ಚರಿತ್ರೆಯಲ್ಲಿ ಒಂದು ಗಮನಾರ್ಹ ಘಟ್ಟವನ್ನು ಸಾಧಿಸಿತು.

ಈ ವರ್ಷದಲ್ಲಿ ಸಾಮೂಹಿಕ ವಿಮೆಯ ಮೂಲಕ ಸಾಧಿಸಿದ ಒಂದು ಮುಖ್ಯ ಸಾಧನೆಯೆಂದರೆ, ಸಮಾಜದ ದುರ್ಬಲ ಘಟಕಕ್ಕೆ ಸೇರಿದ ನೇಕಾರರು, ಮೀನುಗಾರರು, ಕೈಗಾಡಿ ಎಳೆಯುವವರು, ರಿಕ್ಷಾ-ಚಾಲಕರು, ಬಡಗಿಗಳು, ಕೃಷಿ ಕೆಲಸಗಾರರು ಇತ್ಯಾದಿ, ನಾಲ್ಕು ಲಕ್ಷ ಜನಗಳಿಗೆ ಸಿಕ್ಕಿದ ವಿಮಾ ಯೋಜನೆ.

ನಿಗಮದ ಐದು ವಲಯಗಳಲ್ಲಿ ಪೂರ್ವ ವಲಯವು ಅತಿ ಹೆಚ್ಚು ವ್ಯವಹಾರ ದಾಖಲೆ ಮಾಡಿದೆ—ಶೇಕಡಾ 35ರ ಉನ್ನತಿ

ಒಟ್ಟು 41 ವಿಭಾಗಗಳಲ್ಲಿ, ಪೂರ್ವ ವಲಯದ ಕಟಕ್ ವಿಭಾಗವು ಶೇಕಡಾ 64.60 ವೃದ್ಧಿಯ ದಾಖಲೆ ಮಾಡಿ ಪ್ರಥಮ ಸ್ಥಾನವನ್ನು ಗಳಿಸಿದೆ.

ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ಮುಂಗಾರು

ಬುಧವಾರ, ಮೇ 28, 1986

ಅವ್ಯವಸ್ಥೆಯ ಆತಿಥ್ಯ

ವಿದೇಶಗಳಲ್ಲಿ ನೆಲಸಿ ವಾಣಿಜ್ಯೋದ್ಯಮಗಳನ್ನು ಕಟ್ಟಿ ಬೆಳೆಸಿ ಬದುಕಿನಲ್ಲಿ ಮೇಲೆ ಬಂದಿರುವ ಮಂದಿ ಒಟ್ಟು 128 ಕೋಟಿ ರೂಪಾಯಿ ಬಂಡವಾಳ ತೊಡಗಿಸಿ ಒಟ್ಟು 41 ಹೊಸ ಕೈಗಾರಿಕೆಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಲಿದ್ದಾರೆಂದು ರಾಜ್ಯದ ದೊಡ್ಡ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಜೆ. ಎಚ್. ಪಟೇಲರು ಪ್ರಕಟಿಸಿದ್ದಾರೆ.

ಈ ಕೈಗಾರಿಕಾ ಘಟಕಗಳು ಇನ್ನು 18 ತಿಂಗಳುಗಳ ಒಳಗೆ ಸ್ಥಾಪನೆಗೊಳ್ಳಲಿವೆ ಎಂದು ಸಚಿವ ಪಟೇಲರು ಹೇಳುತ್ತಾರೆ. ಈ ಘಟಕಗಳನ್ನು ಬೆಂಗಳೂರು ಹಾಗೂ ಆಸು ಪಾಸಿನಲ್ಲಿ ಸ್ಥಾಪಿಸುವುದಕ್ಕೆ ಅವಕಾಶವಿಲ್ಲ. ಸಂಬಂಧಿತ ಕಂಪೆನಿಗಳವರಿಗೆ ಸ್ಪಷ್ಟಪಡಿಸಲಾಗಿದ್ದು ಅವುಗಳು ಬಿದರೆ, ಕಲ್ಬುರ್ಗಿ, ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಭದ್ರಾವತಿ, ದಾವಣಗೆರೆ, ಹರಿಹರ ಮುಂತಾದ ಕಡೆ ಸ್ಥಾಪನೆಗೊಳ್ಳಬೇಕೆಂದು ಶರತ್ತು ಹಾಕಲಾಗಿದೆಯೆಂದು ತಿಳಿಸಿದ್ದಾರೆ. ಈ ಕಾರ್ಖಾನೆಗಳು ಉತ್ಪಾದಿಸುವ ಸಾಮಗ್ರಿಗಳನ್ನೂ ಸಚಿವರು ಪಟ್ಟಿ ಮಾಡಿದ್ದಾರೆ.

ಈ ಕಾರ್ಖಾನೆಗಳವರು ಅರ್ಧಾಂಶ ವಿದ್ಯುತ್ತನ್ನು ರಾಜ್ಯದ ಜಾಲದಿಂದ ಪಡೆಯಲಿದ್ದು ಉಳಿದರ್ಧವನ್ನು ವಿದ್ಯುಜ್ಜನಕಗಳ ಮೂಲಕ ತಾವೇ ಉತ್ಪಾದಿಸಿಕೊಳ್ಳಲು ಒಪ್ಪಿರುವರೆಂದೂ ಪಟೇಲರು ಹೇಳುತ್ತಾರೆ.

ಪಟೇಲರು ಹೇಳುತ್ತಿರುವ ಈ ಎಲ್ಲಾ ವಿವರಗಳು ಕಾರ್ಯರೂಪಕ್ಕೆ ಬರುವುದಿದ್ದರೆ ಸ್ವಾಗತಾರ್ಹವಾದ ವಿಷಯ. ಕರ್ನಾಟಕವು ಕೈಗಾರಿಕೀಕರಣದಲ್ಲಿ ಹಿಂದೆ ಬೀಳಲು ತೊಡಗಿ ಬಹುಕಾಲವಾಯಿತು. ಒಂದು ಘಟ್ಟದಲ್ಲಿ ಕೈಗಾರಿಕಾ ರಂಗದಲ್ಲಿ ಮುಂಚೂಣಿಯ ರಾಜ್ಯಗಳಲ್ಲಿ ಒಂದಾಗಿದ್ದ ಕರ್ನಾಟಕ ಇಂದು ಹಿಂದೆ ಬಿದ್ದಿದೆ. ಅನೇಕ ವಾಣಿಜ್ಯೋದ್ಯಮಿಗಳು ಕರ್ನಾಟಕಕ್ಕೆ ಬಂದು ಕೈಗಾರಿಕೆ ಸ್ಥಾಪಿಸಿ ನಾವು ಯಾಕಾದರೂ ಇಲ್ಲಿಗೆ ಬಂದೆವಪ್ಪಾ ಎಂದು ಪರಿತಪಿಸುವಂತಾಗಿದೆ. ರಾಜ್ಯದಲ್ಲಿ ಈಗ ಗರಿಷ್ಠ ಶೇಕಡಾ 85ರಷ್ಟು ವಿದ್ಯುತ್ ಕಡಿತವಿದೆ. ಮಳೆಗಾಲ ಶುರುವಾಗುವ ತನಕವೂ ಈ ಪರಿಸ್ಥಿತಿ ಇರುತ್ತದೆ. ಆಮೇಲೆಯೂ ಪರಿಸ್ಥಿತಿ ಪೂರ್ವಸ್ಥಿತಿಗೆ ಬರುವುದಿಲ್ಲ. ಕನಿಷ್ಠ ಶೇಕಡಾ 25ರಷ್ಟು ಕಡಿತ ಕಾಯಂ ಆಗಿ ಇದ್ದೇ ಇರುತ್ತದೆ. ಲಿಂಗನಮಕ್ಕಿ ಜಲಾಶಯ ಬತ್ತಿದಂತೆ ಕಡಿತವು ಕೂಡಾ ಹೆಚ್ಚುತ್ತಹೋಗುತ್ತದೆ.

ವಿದ್ಯುತ್ತನ್ನು ನುಂಗಿ ನೀರು ಕುಡಿಯುವ ಅನೇಕ ಕೈಗಾರಿಕೆಗಳು ಈ ರಾಜ್ಯದಲ್ಲಿವೆ. ಅವುಗಳ ಅವಶ್ಯಕತೆಯನ್ನು ಪೂರೈಸುವುದಕ್ಕಾಗಿ ವರ್ಷವೊಂದಕ್ಕೆ 110 ಕೋಟಿ ರೂಪಾಯಿ ಬೆಲೆಯ ವಿದ್ಯುತ್ತನ್ನು ವಸ್ತುಶಃ ಕಾಳಸಂತೆಯಲ್ಲಿ ರಾಜ್ಯವು ಹೊರ ರಾಜ್ಯಗಳಿಂದ ಖರೀದಿಸುತ್ತಿದೆ.

ಇಂತಹ ಪರಿಸ್ಥಿತಿ ಇರುವಾಗ ಕರ್ನಾಟಕದಲ್ಲಿ ಕೈಗಾರಿಕೆ ಸ್ಥಾಪಿಸಲು ಬರುವ ಉದ್ಯಮ ಸಾಹಸಿಗರು ಸಂಕಷ್ಟಕ್ಕೆ ಬೀಳಲಾರರೇ? ಸರಕಾರಕ್ಕೆ ರಾಜ್ಯದ ಔದ್ಯೋಗೀಕರಣದಲ್ಲಿ ನಿಜಕ್ಕೂ ಕಳಕಳಿ ಇರುವುದಾದರೆ ಅದು ಮೊದಲು ಮಾಡಬೇಕಾದ ಕೆಲಸ ಇಲ್ಲಿನ ವಿದ್ಯುತ್ ಪರಿಸ್ಥಿತಿಯನ್ನು ಗಮನಾರ್ಹವಾಗಿ ಸುಧಾರಿಸುವುದು. ಈಗ ಅರ್ಧದಲ್ಲಿರುವ ವಿದ್ಯುತ್ ಯೋಜನೆಗಳನ್ನು ಬೇಗನೇ ಕಟ್ಟಿ ಸಿದ್ಧಪಡಿಸಬೇಕು. ರಾಯಚೂರು ಉಷ್ಣ ವಿದ್ಯುತ್ ಸ್ಥಾವರಕ್ಕೆ ಬೇಕಾದ ಕಲ್ಲಿದ್ದಲನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು. ಮುಂದೆ ಬೇಕಾಗಬಹುದಾದ ವಿದ್ಯುತ್ತಿಗೂ ಸೂಕ್ತವಾದ ಭವಿಷ್ಯತ್ ಯೋಜನೆಗಳನ್ನು ರೂಪಿಸಬೇಕು. ಅದಷ್ಟೆಲ್ಲ ಮಾಡದೆ ಉದ್ಯಮಿಗಳನ್ನು ಕರೆದು ಮಣೆ ಹಾಕುವುದರಿಂದ ಇನ್ನಷ್ಟು ಗೊಂದಲವೇ ಆದೀತು.

ರಾಜ್ಯದಲ್ಲಿ ಇನ್ನಷ್ಟು ಕೈಗಾರಿಕೆಗಳು ಸ್ಥಾಪನೆಗೊಂಡರೆ ಇಲ್ಲಿನ ನಿರುದ್ಯೋಗಿ ತರುಣರಿಗೆ ಕೆಲಸ ಸಿಕ್ಕೀತು ಎಂಬ ಭರವಸೆ ಸರಕಾರಕ್ಕಿದೆಯೆ? ಅಂತಹ ಭರವಸೆಯನ್ನು ಪಡೆದೇ ಕೈಗಾರಿಕೆ ಸ್ಥಾಪನೆಗೆ ಪರವಾನಿಗೆ ಕೊಡುವ ಹೊಸ ವಿಧಾನವೊಂದನ್ನು ಸರಕಾರ ಕಾರ್ಯಗತಗೊಳಿಸುವುದು ಒಳ್ಳೆಯದು. ಇಲ್ಲವಾದರೆ ರೈಲ್ವೆ ಇಲಾಖೆಯ ಅಚ್ಚು-ಗಾಲಿ ಕಾರ್ಖಾನೆಯಲ್ಲಿ ಹೊರ ರಾಜ್ಯಗಳವರೇ ತುಂಬಿಕೊಂಡಿರುವಂತೆ, ರಾಜ್ಯದ ಇತರೆಲ್ಲಾ ದೊಡ್ಡ ಯೋಜನೆಗಳ ಉದ್ಯೋಗಾವಕಾಶದ ಲಾಭ ಬೇರೆಯವರಿಗೆ ಹೋಗಿರುವಂತೆ ಮುಂದೆಯೂ ಈ ರಾಜ್ಯದ ಸಂಪನ್ಮೂಲದಿಂದ ಬೆಳೆದು ಬರುವ ವಾಣಿಜ್ಯೋದ್ಯಮಗಳಲ್ಲಿನ ಉದ್ಯೋಗಾವಕಾಶಗಳೆಲ್ಲ ಬೇರೆ ರಾಜ್ಯಗಳವರಿಗೇ ದಕ್ಕಿಹೋದೀತು. ಇಂತಹ ವಿದ್ಯಮಾನದಿಂದ ಉಂಟಾಗುವ ಆರ್ಥಿಕ- ಸಾಮಾಜಿಕ ಕ್ಷೋಭೆಯ ಪರಿಚಯ ಈಗಾಗಲೇ ಈ ದೇಶದ ಜನಕ್ಕೆ ಆಗಿದೆ. ಅಂತಹ ಪ್ರಸಂಗ ಬಾರದಂತೆ ಎಚ್ಚರಿಕೆ ವಹಿಸಬೇಕಾದ ಹೊಣೆಗಾರಿಕೆ ಸರಕಾರದ್ದಾಗಿದೆ.

ಜನದನಿ

ಪುನಃ ಸರಕಾರದ ಕಣ್ಣಿಗೆ ಮಣ್ಣೇ

ಪ್ರಿಯರೆ,

ಹದಿನೆಂಟು ವರ್ಷಗಳ ಕಾಲ ಮಂಗಳೂರು ತಾಲೂಕಿನ ಕೋಡಿಕಲ್ ಎಂಬಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಸ್ಥೆಯಾಗಿದ್ದವರು ಶ್ರೀಮತಿ ಕಮಲಾಬಾಯಿ. ಅವರ ವಿರುದ್ಧ "ಊರವರು ಸಲ್ಲಿಸಿದ್ದ ದೂರಿನ ವಿಚಾರಣೆಗೆ" ಎಂದುಕೊಂಡು ಜಿಲ್ಲೆಯ ಡಿಡಿಪಿಐ ಅವರು 1976ರಲ್ಲೊಮ್ಮೆ ಅವರ ಶಾಲೆಗೆ ಬಂದಿದ್ದರು. ಆದರೆ ದೂರನ್ನು ತೋರಿಸಲಿಲ್ಲ; ಅದರ ಪ್ರತಿಯನ್ನೂ ಒದಗಿಸಲಿಲ್ಲ; ಅದನ್ನು ಸಲ್ಲಿಸಿದ್ದವರ ಹೆಸರುಗಳನ್ನು ಬಯಲಾಗಿಸಲಿಲ್ಲ; ಅವರುಗಳನ್ನು ಬರಮಾಡಿಕೊಂಡಿರಲಿಲ್ಲ; ಹಾಗಾಗಿ ಕಮಲಾಬಾಯಿಯು ಅವರುಗಳನ್ನು ಪ್ರಾಟಿಸವಾಲಿಗೆ ಗುರಿಪಡಿಸುವಂತಿರಲಿಲ್ಲ; ಪ್ರಾಯಶಃ ಆ ದೂರಿಗೆ ಸಹಿಯೇ ಇರಲಿಲ್ಲ. ಕಮಲಾಬಾಯಿಯ ಈ ಎಲ್ಲ ಆಕ್ಷೇಪಗಳಿಂದ ಡಿಡಿಪಿಐ ಅವರು ಕ್ರುದ್ಧರಾದರು. 'ವಿಚಾರಣೆ'ಯನ್ನು ಮಾಡದೆ ಹಿಂತೆರಳಿದರು.

30.3.1976ರಂದು ಜಿಲ್ಲಾ ಡಿಡಿಪಿಐ ಅವರಿಂದ ಅನ್ಯಾಯದ ಆದೇಶವೊಂದು ಬಂತು. 3.4.1976ರ ಒಳಗೆ ಕಮಲಾಬಾಯಿಯು ಶಾಲೆಯ ಮುಖ್ಯಸ್ಥ ಪದವಿಯನ್ನು ಸಹಾಯಕ ಶಿಕ್ಷಕ ವೆಂಕಟೆಶ್ವರರಿಗೆ ಒಪ್ಪಿಸತಕ್ಕದ್ದೆಂಬ ಆದೇಶ; ವೆಂಕಟೆಶ್ವರರೇ ಕಮಲಾಬಾಯಿಗಿಂತ ಅಧಿಕ ಸೇವಾಹಿರಿತನವಿದ್ದವರೆಂದೂ ಆ ಆದೇಶದಲ್ಲಿತ್ತು.

ಆದರೆ 1962ರ ಅಧಿಕೃತ 'ಸೇವಾಹಿರಿತನ ಪಟ್ಟಿ'ಯಲ್ಲಿಯ 68 ಹೆಸರುಗಳಲ್ಲಿ ಕಮಲಾಬಾಯಿಯ ಹೆಸರು 7ನೆಯದಾಗಿತ್ತು. ವೆಂಕಟೆಶ್ವರರ ಹೆಸರೇ ಆ ಪಟ್ಟಿಯಲ್ಲಿ ಇರಲಿಲ್ಲ. ಅವಶ್ಯವಾದ ಪೂರ್ವಭಾವಿ ಕ್ರಮವನ್ನು ಅನುಸರಿಸದೆ, 'ಸೇವಾಹಿರಿತನ ಪಟ್ಟಿ'ಯಲ್ಲಿ ತಿದ್ದುಪಡಿಯನ್ನು ಮಾಡುವುದು ಸಕ್ರಮವೆಂದು ಅನ್ನಿಸುವುದೂ ಅಸಾಧ್ಯವಾಗಿತ್ತು.

ಸೇವಾಹಿರಿತನದ ಪ್ರಸ್ತಾಪ ಮಾತ್ರವೇ ಇದ್ದುದಲ್ಲ ಡಿಡಿಪಿಐ ಅದರ ಆದೇಶದಲ್ಲಿ. ಕಮಲಾಬಾಯಿಯ ವಿರುದ್ಧ 'ಇದ್ದ' ಆರೋಪಗಳ ಕುರಿತು ತಾಲೂಕಿನ ಎಇಒ ಅವರು 10.4.1976ರ ಒಳಗೆಯೇ ವಿಚಾರಣೆ ನಡೆಸತಕ್ಕದ್ದೆಂಬ ಮಾತು ಬೇರೆ ಇತ್ತು! ಆದರೆ ವಿಚಾರಣೆಗೆ ಹನ್ನೊಂದೇ ದಿನಗಳು ಉಳಿದಿದ್ದರೂ, ಯಾವ ಮತ್ತು ಯಾವ ಆರೋಪಗಳು ಎಂಬುದರ ಲವಲೇಶವಾದರೂ ಸುಳಿವನ್ನು ಕೊಟ್ಟಿರಲಿಲ್ಲ.

ಯಾವ ನಿಯಮದಂತೆ ತನ್ನ ಸೇವಾಹಿರಿತನವನ್ನು ದಿಢೀರನೆ ಇಳಿಸಲಾಯಿತು, ಮತ್ತು ತನ್ನ ವಿರುದ್ಧವಾಗಿದ್ದ ಆರೋಪಗಳು ಯಾವುವು ಎಂಬುದನ್ನು ತಿಳಿಸಬೇಕೆಂದು ಕಮಲಾಬಾಯಿ 4.4.1976ರಂದು ಡಿಡಿಪಿಐ ಅವರಿಗೆ ಬರೆದುಕೊಂಡರು. ಅಪ್ಪಾ ಪರಿಪಾಲನೆಯ ವರದಿಯನ್ನು ಕಳುಹಿಸುವ ಬದಲಿಗೆ, ಆಜ್ಞೆಯ ನೆಲೆಯನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿದ 'ಅಪರಾಧ'ಕ್ಕಾಗಿ ಡಿಡಿಪಿಐ ಅವರು ಕಮಲಾಬಾಯಿಯನ್ನು ತಾತ್ಕಾಲಿಕವಾಗಿ ಕೆಲಸದಿಂದ ತೆಗೆದುಹಾಕಿದರು. ತುರ್ತುಪರಿಸ್ಥಿತಿ ಕಾಲದಲ್ಲಿಯ ಅಧಿಕಾರಿಗಳ ಕರಾಳ ಸ್ವಚ್ಛಂದತೆಗೆ ಅನುಗುಣವಾಗಿ ಮತ್ತು ಪ್ರಾಯಶಃ ವೆಂಕಟೆಶ್ವರರ ಆಮಿಷಕ್ಕೆ ಒಳಗಾಗಿ!

ಕಮಲಾಬಾಯಿಯು ಸರಕಾರಕ್ಕೂ ಹೈಕೋರ್ಟಿಗೂ ಮೊರೆಯಿಡಬೇಕಾಯಿತು. ಹತ್ತು ತಿಂಗಳು ಕಳೆದರೂ ಅತ್ತ ಸರಕಾರ ಮತ್ತು ಹೈಕೋರ್ಟು ತೀರ್ಮಾನಗಳನ್ನು ನೀಡಲಿಲ್ಲ. ಇತ್ತ ತಾಲೂಕಿನ ಎಇಒ ಅವರು ಹನ್ನೊಂದು ದಿವಸಗಳೊಳಗೆ ನಡೆಸುವವರಿದ್ದಾಗಿದ್ದ ವಿಚಾರಣೆಯನ್ನು ಹತ್ತು ತಿಂಗಳಲ್ಲೂ ನಡೆಸಲಿಲ್ಲ. ಹಾಗಾಗಿ ಬೇರೆ ದಾರಿಕಾಣದ ಕಮಲಾಬಾಯಿಯು ತನಗೆ 1976ರಲ್ಲಿ ಅನ್ಯಾಯ ಮಾಡಿದ್ದ ಡಿಡಿಪಿಐ ಅವರ ವಿರುದ್ಧ ಮಂಗಳೂರಿನ ಕೋರ್ಟಿನಲ್ಲಿ ದಾವೆಯನ್ನು ಹೂಡಬೇಕಾಯಿತು. (ಹೀಗಾ ಈಚೆಗೆ ಈ ದಾವೆಯು ಕಮಲಾಬಾಯಿಗೆ ಅನುಕೂಲವಾಗಿಯೇ ಇತ್ಯರ್ಥಗೊಳ್ಳುತ್ತಿದೆ)

ಕೆಳಕೋರ್ಟಿನಲ್ಲಿ ಈ ದಾವೆಯು ವಿಲೆ ಆಗುವ ಮುನ್ನ, 28.6.1978ರಂದು ಸರಕಾರವು ಕಮಲಾಬಾಯಿಯನ್ನು ಅವರ ಹಿಂದಿನ ಸ್ಥಾನದಲ್ಲಿಯೇ ಪುನಃ ಸ್ಥಾಪಿಸಬೇಕೆಂದು ಆದೇಶಿತು; 31.8.1978ರಂದು (2 ತಿಂಗಳ ಅನಂತರ) ಹೈಕೋರ್ಟು ಸಹಾ ಅಂತಹುದೇ ಆದೇಶವನ್ನು ನೀಡಿತು.

ಆದರೆ ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯವು ('ಸಾಶಿನಿ'ಯು) ಎರಡೂ ಆಜ್ಞೆಗಳನ್ನು ಉಲ್ಲಂಘಿಸಿತು. ಕಮಲಾಬಾಯಿಯನ್ನು ಮುಲ್ಕಿ ಎಂಬ ಬೇರೊಂದು ಊರಿನ ಹಿರಿಯ ಪ್ರಾಥಮಿಕ ಶಾಲೆಗೆ ಸಹಾಯಕ ಶಿಕ್ಷಕಿಯಾಗಿ ವರ್ಗಾಯಿಸಿತು.

ಹಾಗಾಗಿ 25.2.1986ರ 'ಕನ್ನಡಪ್ರಭ' ಮತ್ತು 'ಪ್ರಜಾವಾಣಿ' ಪತ್ರಿಕೆಗಳಲ್ಲಿ "ಅಧಿಕಾರಿಗಳನ್ನೇ ನಂಬಿದರೆ..." ಎಂಬ ತಲೆಬರಹದ ಪತ್ರದಲ್ಲಿ ನಾನು "ಸಾಶಿನಿ"ಯು ಸರಕಾರದ ಆಜ್ಞೆಯನ್ನು ಕಡೆಗಣಿಸಿ ತಾನೇ ಸರಕಾರವೆಂಬಂತೆ ನಡೆದುಕೊಂಡಿತ್ತೆಂದು ಆರೋಪಿಸಿದ್ದೆ.

28.2.1986ರಂದು ಸರಕಾರವು ಈ ನನ್ನ ಆರೋಪದ ಬಗ್ಗೆ "ಸಾಶಿನಿ"ಯ ಹೇಳಿಕೆಯನ್ನು ಕೋರಿತು. ಆ ಹೇಳಿಕೆಯ ಪ್ರತಿಯೊಂದನ್ನು ನನಗೂ ಕಳುಹಿಸತಕ್ಕದ್ದೆಂದು ಸೂಚಿಸಿತು.

ಈ ಜಿಲ್ಲೆಯ ಡಿಡಿಪಿಐ ಅವರು ಅಕ್ಟೋಬರೊಳಗೆಯೇ ಕಮಲಾಬಾಯಿಗೆ ಸಂಬಂಧಿಸಿದ ಬೇರೊಂದು ವಿಷಯದ ಕುರಿತು ಪ್ರಾಥಮಿಕ ಶಿಕ್ಷಣದ ಜಂಟಿ ನಿರ್ದೇಶಕರಿಗೆ ಬರೆದಿದ್ದ ಪತ್ರದ ಪ್ರತಿಗಳನ್ನೇ 'ಸಾಶಿನಿ'ಯು ಸರಕಾರಕ್ಕೂ ನನಗೂ ಕಳುಹಿಸಿತು. ನನ್ನ ಆರೋಪಕ್ಕೆ ತಕ್ಕ ಸಮಜಾಯಿಷಿ ಅದರಲ್ಲೇ ಇದೆ ಎಂಬಂತೆ. 1978ರಲ್ಲಿ ಕಮಲಾಬಾಯಿಯನ್ನು ಕೋಡಿಕಲ್‌ನಲ್ಲಿಯ ಮೇಲು ಹುದ್ದೆಯಿಂದ ಮುಲ್ಕಿಯಲ್ಲಿಯ ಕೀಳು ಹುದ್ದೆಗೆ ಅಟ್ಟಿದ್ದೇ ಸರಕಾರದ ಆಜ್ಞೆಯ ಉಲ್ಲಂಘನೆ ಎಂಬುದು ನನ್ನ ಆರೋಪ. ಆಕೆಯನ್ನು ಮುಲ್ಕಿಯಲ್ಲಿಯ ಕೀಳು ಹುದ್ದೆಯಿಂದ ಮಂಗಳೂರಿನ ಎಲ್ಲಿಯೋ ಕೀಳು ಹುದ್ದೆಗೂ ವರ್ಗಾಯಿಸಲು 1985ರಲ್ಲೂ ಆಗಲಿಲ್ಲವೇಕೆ ಎಂಬ ದೀರ್ಘ ಕಥೆಯು ನನ್ನ ಆರೋಪಕ್ಕೆ ತಕ್ಕ ಸಮಜಾಯಿಷಿಯಾಗುವುದು? 'ಸಾಶಿನಿ'ಯು ಸರಕಾರದ ಕಣ್ಣಿಗೆ ಎಷ್ಟೊಂದು ಲೀಲಾಜಾಲವಾಗಿ ಪುನಃ ಪುನಃ ಮಣ್ಣೆರಚುತ್ತಿದೆ ನೋಡಿದಿರಾ!

ತುರ್ತುಪರಿಸ್ಥಿತಿಯು ಕಳೆದ ಮೇಲೆ ಷಾ ಆಯೋಗದ ಈ ಪ್ರಕರಣವನ್ನು 'ವಿಚಾರಣೆಗೆ ಯೋಗ್ಯ'ವೆಂದು ಕರ್ನಾಟಕ ಸರಕಾರದ ಗಮನಕ್ಕೆ ತಂದಿತ್ತು. ಆದರೆ ಕಮಲಾಬಾಯಿಗೆ ಅನ್ಯಾಯಗೈದಿದ್ದ ಹಿಂದಿನ ಡಿಡಿಪಿಐ ಅವರು ಅಷ್ಟರೊಳಗೆ 'ಸಾಶಿನಿ'ಯಲ್ಲಿ ಉನ್ನತ ಹುದ್ದೆಗೆ ಏರಿದ್ದರು. ಸರಕಾರದ ದೃಷ್ಟಿಯಲ್ಲಿ 'ಸ್ಥಾನನಿಮಿತ್ತ ವಿಶ್ವಾಸಾರ್ಹ'ರಾಗಿದ್ದರು. ಹಾಗಾಗಿ ಸರಕಾರವು ಷಾ ಆಯೋಗದ ಸಲಹೆಯನ್ನು ಕಡೆಗಣಿಸಿತು. 'ರೂಲ್ ಆಫ್ ಲಾ'ವಿನ ಬಗ್ಗೆ ಸರಕಾರಕ್ಕಿಲ್ಲದ ಗೌರವ 'ಸಾಶಿನಿ'ಗೆ ಇರಲಿಕ್ಕುಂಟೆ?

—ಕೆ. ನಾರಾಯಣ ರಾವ್
ಸಂಚಾಲಕ,

ಉಡುಪಿ ಬಳಕೆದಾರರ ವೇದಿಕೆ.

ಮುಂಗಾರು

ಮಂಗಳವಾರ, ಅಕ್ಟೋಬರ್ 7 1986

ಜಿಲ್ಲೆಗೊಂದು ಕ್ರೀಡಾಶಾಲೆ

ಹದಿನಾರು ದಿನಗಳ ಕಾಲ ದಕ್ಷಿಣ ಕೊರಿಯದ ಸಿಯೋಲ್‌ನಲ್ಲಿ 10ನೇ ಏಷ್ಯಾ ಕ್ರೀಡಾಕೂಟ ಭರ್ಜರಿಯಾಗಿ ನಡೆಯಿತು. ಅಗಾಧ ಹಣ ಖರ್ಚುಮಾಡಿ ದಕ್ಷಿಣ ಕೊರಿಯ ಇದನ್ನು ನಡೆಸಿದೆ. ಅಪ್ರಿಯ ಘಟನೆಗಳೇನೂ ಇಲ್ಲದೆ ಈ ಕೂಟ ನಡೆದಿದೆ. ಈ ನಿಟ್ಟಿನಲ್ಲಿ ಅತಿಥೇಯ ರಾಷ್ಟ್ರವಾದ ಕೊರಿಯಕ್ಕೆ ಅಭಿನಂದನೆ ಸಲ್ಲಬೇಕು.

ಚೀನ, ಕೊರಿಯ ಹಾಗೂ ಜಪಾನ್‌ಗಳು ಒಟ್ಟು 657 ಪದಕಗಳನ್ನು ತಮ್ಮೊಳಗೆ ಹಂಚಿಕೊಂಡಿವೆ. ಚೀನ ದೆಹಲಿ ಏಷ್ಯಾಡ್‌ನಲ್ಲಿ ಜಪಾನನ್ನು ಹಿಂದಿಕ್ಕಿ ಪಡೆದಿದ್ದ ಮೊದಲ ಸ್ಥಾನವನ್ನು ಈ ಬಾರಿಯೂ ಉಳಿಸಿಕೊಂಡಿದೆ. ಆದರೆ 94 ಬಂಗಾರದ ಪದಕ ಪಡೆದ ಚೀನಕ್ಕಿಂತ ಒಂದೇ ಒಂದು ಪದಕ ಕಡಿಮೆ ಬಿದ್ದ ದಕ್ಷಿಣ ಕೊರಿಯ ಚೀನದ ಆಧಿಪತ್ಯಕ್ಕೆ ಬಲವಾದ ಪಂಥಾಹ್ವಾನ ನೀಡಿದೆಯೆಂಬುದಕ್ಕಡ್ಡಿಯಿಲ್ಲ. ಬಹುಕಾಲದಿಂದ ವಿಶ್ವದ ಕ್ರೀಡಾರಂಗದಲ್ಲಿ ಮೆರೆಯುತ್ತಿದ್ದ ಜಪಾನು ಈಗ ಹೊಸ ಶಕ್ತಿಗಳಿಗೆ ದಾರಿ ಬಿಟ್ಟುಕೊಡಬೇಕಾಗಿ ಬಂದದ್ದೂ ಅಚ್ಚರಿಯ ವಿಚಾರ.

ಭಾರತ ಈ ವಿದ್ಯಮಾನದಿಂದ ಬಹಳಷ್ಟನ್ನು ಕಲಿಯಬೇಕಾಗಿದೆ. ದೆಹಲಿ ಏಷ್ಯಾಡ್‌ನಲ್ಲಿ ಭಾರತಕ್ಕೆ 57 ಪದಕಗಳು ದೊರೆತಿದ್ದವು. ಅದರಲ್ಲಿ ಬಂಗಾರದ ಪದಕಗಳು 13. ಈ ಬಾರಿ ಸಿಕ್ಕಿದ್ದು ಐದು ಬಂಗಾರದ ಸಹಿತ 37 ಪದಕಗಳು ಮಾತ್ರ. ಈ ಬಾರಿ 400 ಜನರ ದೊಡ್ಡ ಪಟಾಲಮೇ ಸಿಯೋಲಿಗೆ ಹೋಗಿತ್ತು. ಐದು ಬಂಗಾರದಲ್ಲಿ ನಾಲ್ಕು ಬಂದದ್ದು ಪಿ. ಟಿ. ಉಷಾರಿಂದಾಗಿ. ಉಳಿದ ನೂರಾರು ಮಂದಿ ಸಾಧಿಸಿದ್ದು ಒಂದು ಬಂಗಾರದ ಪದಕವನ್ನು. ಹಣವನ್ನು ಅಗತ್ಯವಿಲ್ಲದ್ದಕ್ಕೆ ಖರ್ಚುಮಾಡದೆ [illegible] ಪ್ರವೃತ್ತಿಯಿಂದ ಆಗುವುದು [illegible]. ಸ್ಪರ್ಧೆಗೆ ತಯಾರಿ ಮಾಡುವುದಕ್ಕೆ ಸಾಕಷ್ಟು [illegible] ಕೊಡದೆ ಮೇಳವನ್ನು ನೋಡಿ ಅನುಭವಿಸುವುದಕ್ಕೆ ಶಾಸಕರನ್ನು ಸರಕಾರದ ಖರ್ಚಿನಲ್ಲಿ ಕಳಿಸುವ ಆಡಳಿತ ವ್ಯವಸ್ಥೆಯಲ್ಲಿ ಈ ಫಲಿತಾಂಶವಲ್ಲದೆ ಬೇರೇನೂ ಆಗುವುದಿಲ್ಲ.

ಚೀನವು ಕ್ರೀಡಾಕೂಟದ ಸಾಧನೆಯಲ್ಲಿ ಜಪಾನನ್ನು ಹಿಂದಿಕ್ಕಿ ಮುನ್ನಡೆಯಿತು. ದಕ್ಷಿಣ ಕೊರಿಯವು ಹಿಂದಿನ ಸಾಲಿನಿಂದ ನೆಗೆದು ಎರಡನೆ ಸ್ಥಾನಕ್ಕೆ ಬಂದುದಲ್ಲದೆ ಚೀನದ ಸ್ಥಾನಕ್ಕೂ ಬೆದರಿಕೆಯೊಡ್ಡಲು ಸಾಧ್ಯವಾದ ಕಾರಣಗಳನ್ನು, ಈ ಎರಡು ದೇಶಗಳ ಸಾಧನೆಯ ಹಿನ್ನೆಲೆಯನ್ನು ಅಧ್ಯಯನ ಮಾಡುವುದರಿಂದ ಭಾರತಕ್ಕೂ ಲಾಭವಾದೀತು. ಇವೆರಡು ದೇಶಗಳಿಗೆ ಈಗ ದೊರಕಿರುವ ಪ್ರಶಸ್ತಿಗಳು, ಸ್ಥಾನಮಾನಗಳು ಸುಮ್ಮನೆ ಬಂದಿಲ್ಲ. ದೇಶಬಾಂಧವರೇ ಸಿಯೋಲಿನಲ್ಲಿ ಸಾಧನೆಮಾಡಿ–ಬಂಗಾರದ ಪದಕ ಪಡೆಯಿರಿ–ನಿಮಗೆ ಲಕ್ಷ ರೂಪಾಯಿ ಕೊಡುತ್ತೇವೆ [illegible] ಆ ದೇಶಗಳಲ್ಲಿ [illegible] ಯರು ಕ್ರೀಡೆಗಳಲ್ಲಿ ಆಸಕ್ತಿ [illegible] ಪ್ರೋತ್ಸಾಹ ಕೊಟ್ಟಿವೆ. ಆಸಕ್ತ [illegible] ಮಕ್ಕಳಿಗೆ ಅವಶ್ಯಕ ಸೌಲಭ್ಯವನ್ನೂ ತರಬೇತಿಗೆ [illegible]ಗಳನ್ನೂ ಕೊಡಲಾಗಿದೆ. ಚೀನದಲ್ಲಿ [illegible] ವರ್ಷಗಳ ಹಿಂದೆ ಇಂತಹ ಸೌಲಭ್ಯಗಳಿರಲಿಲ್ಲ. ಕ್ರೀಡಾರಂಗದಲ್ಲಿ [illegible] ಶ್ರೇಷ್ಠವಾದ ಪರಂಪರೆಯೂ ಅದಕ್ಕಿರಲಿಲ್ಲ. [illegible] ವರ್ಷಗಳ ಹಿಂದೆ ಚೀನ ಕ್ರೀಡೆಗಳಲ್ಲಿ ತನ್ನ ಯುವ ಜನಾಂಗವನ್ನು ತೊಡಗಿಸುವ ಕಾರ್ಯಕ್ರಮ ರೂಪಿಸಿತು. ಜಿಲ್ಲೆ–ಜಿಲ್ಲೆಗಳಲ್ಲಿ ಕ್ರೀಡಾ ವಸತಿ ಶಾಲೆಗಳನ್ನು ತೆರೆಯಿತು. ಕ್ರೀಡೆಯಲ್ಲಿ ಅರಳುತ್ತಿರುವ ಪ್ರತಿಭೆಯುಳ್ಳ ಎಳೆಯರನ್ನೆಲ್ಲ ಹುಡುಕಿ ತಂದು ಈ ಶಾಲೆಗಳಲ್ಲಿ ನೆಲೆಗೊಳಿಸಿ ಒಳ್ಳೆಯ ಅನ್ನಾಹಾರ ಕೊಟ್ಟು, ನಾನಾ ವಿವಿಧ ಕ್ರೀಡೆಗಳಲ್ಲಿ ತರಬೇತಿ ಕೊಟ್ಟಿತು. ರಾಷ್ಟ್ರಮಟ್ಟದಲ್ಲಿ ಆಯ್ಕೆ ನಡೆಸಿ ಅಂತರರಾಷ್ಟ್ರೀಯ ಸ್ಪರ್ಧೆಗಳಿಗೆ ಕ್ರೀಡಾಳುಗಳನ್ನು ಆಯ್ಕೆ ಮಾಡಿತು. ಈ ಮಾದರಿಯನ್ನು ದಕ್ಷಿಣಕೊರಿಯವೂ ಅನುಸರಿಸಿತು. 10ನೇ ಸಿಯೋಲ್ ಏಷ್ಯಾಡ್‌ಗಾಗಿ ಕಳೆದ ನಾಲ್ಕು ವರ್ಷಗಳಿಂದ ದಕ್ಷಿಣ ಕೊರಿಯದ ಶಾಲೆಗಳಲ್ಲಿ ಎಳೆಯರು ತಾಲೀಮು ನಡೆಸುತ್ತಿದ್ದರೆಂದರೆ ಅಚ್ಚರಿ ಎನಿಸಬಹುದು.

ಅಂತರ್ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಇಂಥ ಸಾಧನೆ ಮಾಡಬೇಕೆಂದರೆ ಭಾರತವೂ ಇಂಥ ಕಾರ್ಯಕ್ರಮಗಳನ್ನೇ ನೆಚ್ಚಿಕೊಳ್ಳಬೇಕು. ಬೇರೆ ದಾರಿಯೇ ಇಲ್ಲ. ನಮ್ಮ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕ್ರೀಡಾ ಶಾಲೆಗಳನ್ನು ತೆರೆಯಬೇಕು. ಸಮಾಜದ–ಸರಕಾರದ ಖರ್ಚಿನಲ್ಲಿ ಅಲ್ಲಿ ಎಳೆಯರನ್ನು ತರಬೇತುಗೊಳಿಸಬೇಕು. ಆಮೇಲೆ ಯಾವ ಸಣ್ಣತನದ ರಾಜಕೀಯವನ್ನೂ ಮಾಡದೆ ಅರ್ಹತೆಯ ನೆಲೆಯಲ್ಲಿ ಆಯ್ಕೆ ಮಾಡಿ ರಾಷ್ಟ್ರಮಟ್ಟದಲ್ಲಿ ತರಬೇತಿ ಕೊಟ್ಟು ಸಜ್ಜುಗೊಳಿಸಬೇಕು.

ಇದರಿಂದ ಪ್ರತಿಭೆಗಳು ಅರಳಲು ಸಹಾಯಕವಾಗುತ್ತದೆ. ನಮ್ಮ ಯುವಕ–ಯುವತಿಯರು ಜಾಗತಿಕ ಕ್ರೀಡಾಂಗಣದಲ್ಲಿ ಮೆರೆಯುವುದು ಸಾಧ್ಯವಾಗುವುದೆ. ರಾಷ್ಟ್ರ [illegible] ಮೂಡುತ್ತದೆ. ಕ್ರಿಕೆಟ್ [illegible] ಊರೂರಲ್ಲಿ ಕ್ರಿಕೆಟ್ [illegible] ಹಳ್ಳಿ–ಹಳ್ಳಿಗಳಲ್ಲಿ ಆಸಕ್ತಿ [illegible]

ಇದಕ್ಕೆ [illegible] ಹಣವನ್ನು ತೆಗೆದಿರಿಸಬೇಕಾಗಿಲ್ಲ. ಹಾಳು ಮಾಡುವ ಹಣದ ಒಂದಂಶ ಸಾಕು. ಇಂದು ಈ ದೇಶ ಮನರಂಜನೆಯ ಹೆಸರಿನಲ್ಲಿ ಹಾಳು ಸಿನೆಮದ ಕ್ಷೇತ್ರದಲ್ಲಿ ತೊಡಗಿಸಿ ಹುಡಿಮಾಡುವ ಹಣದ ಶೇಕಡಾ ಹತ್ತರಷ್ಟು ಸಾಕು. ಇಷ್ಟನ್ನು ಮಾಡಿದರೆ ನಮ್ಮ ಮಕ್ಕಳು ಬೀದಿ ತಿರುಗುತ್ತ, ಕೆಟ್ಟ ಸಿನೆಮ ನೋಡುತ್ತ, ಸಮಯ ಹಾಳು ಮಾಡುವುದು ಕಡಿಮೆಯಾಗುತ್ತದೆ. ಮನರಂಜನೆಯ ಹೆಸರಿನಲ್ಲಿ ಮೈ–ಮನಸ್ಸುಗಳನ್ನು ಹಾಳುಮಾಡಿಕೊಳ್ಳುವುದು ನಿಂತು ಕ್ರೀಡೆಯ ಮಾಧ್ಯಮದ ಮೂಲಕ ಒಳ್ಳೆಯ ಮನರಂಜನೆ ದೊರೆಯುತ್ತದೆ. ಜತೆಗೆ ಯುವ ಪೀಳಿಗೆ ಆರೋಗ್ಯಶಾಲಿಯಾಗಿ ಬೆಳೆಯುತ್ತದೆ.

ಸರಕಾರ ಮೊದಲು ಮಾಡಬೇಕಾದ ಕೆಲಸ ಕ್ರೀಡಾ ಶಾಲೆಗಳನ್ನು ತೆರೆಯುವುದು. ಸಿನೆಮಕ್ಕೆ ಕೊಡುವ ಸಹಾಯಧನ ರದ್ದು ಮಾಡಿ ಆ ಹಣವನ್ನು ಈ ಶಾಲೆಗಳಿಗೆ ಖರ್ಚು ಮಾಡಿ. ಸಿನೆಮದಿಂದ ಬರುವ ಮನರಂಜನಾ ತೆರಿಗೆಯೆಲ್ಲವನ್ನೂ ಇದಕ್ಕೆ ನಿಗದಿಗೊಳಿಸಿ. ಯುವ ಪೀಳಿಗೆಯಲ್ಲಿ ಆಟೋಟಗಳ ಬಗ್ಗೆ ಆಸಕ್ತಿ ಹುಟ್ಟಿಸುವ ಕೆಲಸವೂ ಅಭಿವೃದ್ಧಿಯ ಒಂದಂಶವೆಂದೇ ತಿಳಿಯಲಿ.

ವಿಶುಕುಮಾರ್

ವಿಶುಕುಮಾರ್ ಹೆಸರು ಕನ್ನಡದ ಜನಕ್ಕೆ ತುಂಬ ಪರಿಚಿತವಾದದ್ದು. ಈ ವ್ಯಕ್ತಿ ಮೊನ್ನೆ ಮೊನ್ನೆವರೆಗೂ ತುಂಬ ಲವಲವಿಕೆಯ ಜೀವನೋತ್ಸಾಹದಿಂದ ಓಡಾಡುತ್ತಿದ್ದರು. ತಮ್ಮ ಕಾರ್ಯಕ್ಷೇತ್ರವನ್ನು ಸಾಹಿತ್ಯಕ್ಕೆ ಸೀಮಿತಗೊಳಿಸದೆ ನಾಟಕ, ಸಿನೆಮ, ರಾಜಕಾರಣ, ಸಮಾಜಸೇವೆ ಪತ್ರಿಕೋದ್ಯಮ ಎಂದೆಲ್ಲ ಹತ್ತಾರು ಅಭಿರುಚಿಗಳನ್ನು ಬೆಳೆಸಿಕೊಂಡವರು.

ಅದೇನಿದ್ದರೂ ಬರಹಗಾರನೆಂಬುದೇ ವಿಶುಕುಮಾರರ ಗಟ್ಟಿ ನೆಲೆ. ಹತ್ತಾರು ಕಾದಂಬರಿಗಳ ಕರ್ತೃ ಅವರೆಂಬುದೊಂದೇ ಅವರ ಹೆಗ್ಗಳಿಕೆಯಲ್ಲ. ಬರಹದಲ್ಲಿ ವಿಶುಕುಮಾರರು ಒಳ್ಳೆಯ ರಸಪಾಕವನ್ನು ಸಿದ್ಧಿಸಿಕೊಂಡಿದ್ದಾರೆಂಬುದೇ ಸಾಹಿತಿಯಾಗಿ ಅವರ ಮಹತ್ವ. ಬದುಕನ್ನು ಹತ್ತಿರದಿಂದ ನೋಡಿ ಅರ್ಥ ಮಾಡಿಕೊಂಡು ಕಲೆಯನ್ನಾಗಿ ನೇಯುವ ಕುಸುರಿ ಕೆಲಸದ ಕಲಾವಂತಿಕೆ ಅವರಿಗೆ ಸಿದ್ಧಿಸಿತ್ತು. ಅವರ ಕರಾವಳಿ ಕಾದಂಬರಿ ಇದಕ್ಕೊಂದು ನಿದರ್ಶನ. ಬದುಕಿನ ಬಗ್ಗೆ ಬಲು ವಾಸ್ತವವಾದ ಒಳನೋಟ ಅವರದ್ದೆನ್ನುವುದು, ಬದುಕಿನ ಜೀವದ್ರವ್ಯವನ್ನು ನೋಡಿ ತಿಳಿದು ಇತರರಿಗೆ ತಿಳಿಸುವ ಮಾನವೀಯತೆ ಅವರಿಗಿತ್ತೆನ್ನುವುದು "ಕರಾವಳಿ"ಯಲ್ಲಿಯೂ ಇತರ ಅವರ ಇತ್ತೀಚಿನ ಕಾದಂಬರಿಗಳಲ್ಲೂ ಶ್ರುತಪಡುತ್ತದೆ.

ಬಹುಮಂದಿ ಓದುಗರನ್ನು, ಅಭಿಮಾನಿಗಳನ್ನೂ ಸೃಷ್ಟಿಸಿಕೊಂಡ ಸಾಮರ್ಥ್ಯ ಅವರದಾಗಿತ್ತು. ಸಾಹಿತ್ಯ ಲೋಕದಲ್ಲಿ ಗಂಭೀರವೂ ಅಹುದು. ಅದೇ ವೇಳೆಗೆ ಜನಸಾಮಾನ್ಯರೂ ಮೆಚ್ಚುವ ಕೃತಿಗಳ ರಚನೆ ಸಾಧ್ಯವೆಂಬುದಕ್ಕೆ ವಿಶುಕುಮಾರ್ ಸಾಕ್ಷಿ. ಬದುಕಿನ ಬಗ್ಗೆ ಆಳವಾದ ಒಳನೋಟ ನೀಡುವುದರ ಜತೆಗೆ ತನ್ನ ಬರವಣಿಗೆಯ ಕಡೆಗೆ ಸಾಮಾನ್ಯ ಓದುಗರನ್ನು ಸೆಳೆದ ಸಾಧನೆ ಅವರದ್ದು. ಈ ನಿಟ್ಟಿನಲ್ಲಿ ಜನಪ್ರಿಯ–ಗಂಭೀರಗಳೆಂಬ ಸಾಹಿತ್ಯದ ಎರಡು ವರ್ಗಗಳ ನಡುವೆ ಬರಹಗಳ ಮೂಲಕ ಸುವರ್ಣ ಸೇತುವೆಯೊಂದನ್ನು ಬೆಸೆದ ಅವರ ಸಾಧನೆಯೇನೂ ಸಣ್ಣದಲ್ಲ.

ಸಮಾಜದ ಅವಗಣಿತ ವರ್ಗದಿಂದ ಬಂದು, ಸ್ವಂತ ಪ್ರತಿಭೆ, ಸಾಮರ್ಥ್ಯ, ಪರಿಶ್ರಮಗಳಿಂದ ಬದುಕನ್ನು ರೂಪಿಸಿಕೊಂಡದ್ದು ಅವರ ಸಾಧನೆ. ಜೀವನದ ಬಗ್ಗೆ ಅಪಾರ ಪ್ರೀತಿಯನ್ನೂ ಸುತ್ತಲಿನ ಸಮಾಜ–ಪರಿಸರದ ಬಗ್ಗೆ ಆಸ್ಥೆಯನ್ನೂ ಬೆಳೆಸಿಕೊಂಡ ವ್ಯಕ್ತಿತ್ವ ಅವರದ್ದು. ಇಂಥ ಸ್ನೇಹಶೀಲನೊಬ್ಬನ ಅಕಾಲ ಸಾವಿನಿಂದ ಸಮಾಜದ ಪ್ರಜ್ಞೆಯ ಒಂದಂಶವೇ ಸತ್ತಂತಾಗುತ್ತದೆ. ಇಂಥ ಪ್ರಜ್ಞೆಯನ್ನು ಸಮಾಜಕ್ಕೆ ಕೊಡುವ ವ್ಯಕ್ತಿತ್ವಗಳು ರೂಪುಗೊಳ್ಳುವುದು ಅಪರೂಪ: ಇಂಥ ವ್ಯಕ್ತಿತ್ವ ರೂಪಿಸುವ ಕ್ರಿಯೆಗೆ ಬಹುಕಾಲ ಬೇಕಾಗುತ್ತದೆ.

...ಕ್ರಿಯರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುತ್ತೂರು ಒಂದು ಜನನಿಬಿಡ ಪಟ್ಟಣವಾಗಿದ್ದು ಇಲ್ಲಿ ದಿನಹೋದಂತೆ ಸರಕಾರಿ ಕಚೇರಿಗಳೂ, ಕೈಗಾರಿಕೋದ್ಯಮಿಗಳ ಸಂಖ್ಯೆಯೂ ಹೆಚ್ಚುತ್ತಲಿವೆ. ಈ ಸಂದರ್ಭವು ಕೆಲವು ಸಂಸ್ಥೆಗಳು ಜನರ ಸುಲಿಗೆ ಮಾಡಲು ಉತ್ತಮ ಅವಕಾಶವಾಗಿ ಪರಿಣಮಿಸಿದೆ.

ನಿರುದ್ಯೋಗಿ ಮಹಿಳೆಯರು ಸ್ವಂತ ಉದ್ಯೋಗ ಆರಂಭಿಸುವಂತೆ ಸೌಲಭ್ಯ ನೀಡಲಾಗುವುದೆಂದು ಸರಕಾರ ಹೊರಡಿಸಿದ ಪ್ರಕಟಣೆಯಿಂದಾಗಿ ಜನರ ಸುಲಿಗೆ ನಡೆಸುವ ಕೆಲವರಿಗೆ ಸುವರ್ಣ ಸಂದರ್ಭ ಒದಗಿದೆ.

ಠಸೆ ಪತ್ರದ ಕಾಳಸಂತೆ

ಸ್ವೋದ್ಯೋಗ ಆರಂಭಿಸಲು ಅರ್ಜಿ ವಗೈರೆ ತಯಾರಿಕೆಗಾಗಿ ಠಸೆ ಪತ್ರ ಅಗತ್ಯವಾಗಿದ್ದು ಪುತ್ತೂರಿನಲ್ಲಿ ಠಸೆ ಪತ್ರವೇ ಇಲ್ಲವಾಗಿ ಮಂಗಮಾಯವಾಗಿತ್ತು. ಠಸೆ

ಪಿರ್ಕೋರ್

ವೆಂಡರುಗಳಿಗೆ ಸರಕಾರವೇ ಠಸೆ ಒದಗಿಸಿಲ್ಲವೆಂದು ವಿಚಾರಿಸಿದಾಗ ತಿಳಿದುಬಂತು.

ಆದರೆ ಇಲ್ಲಿನ ಜೆರಾಕ್ಸ್ ಸಿದ್ಧಪಡಿಸುವ ಸಂಸ್ಥೆಯೊಂದು ಐದು ರೂಪಾಯಿ ಮೌಲ್ಯದ ಠಸೆ ಪತ್ರಕ್ಕೆ ದುಬಾರಿ ಬೆಲೆ ವಸೂಲು ಮಾಡಿ ಬಹಿರಂಗ ಕಾಳಸಂತೆ ನಡೆಸಿತ್ತು. ಕೇವಲ ಐದು ರೂಪಾಯಿ ಮೌಲ್ಯದ ಠಸೆ ಪತ್ರವನ್ನು 12 ಅಥವಾ 15 ರೂಪಾಯಿಗಳಷ್ಟು ವಿಪರೀತ ಬೆಲೆಗೆ ಮಾರಾಟ ಮಾಡಿತ್ತು. ಈ ಬಹಿರಂಗ ಕಾಳಸಂತೆಯನ್ನು ಹತ್ತಿಕ್ಕಲು ಸಂಬಂಧಪಟ್ಟ ಅಧಿಕಾರಿಗಳು ವಿಚಾರಣೆ ನಡೆಸಿ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕೆಂದು ನೊಂದ ಸಾರ್ವಜನಿಕರು ವಿನಂತಿಸುತ್ತಿದ್ದಾರೆ.

—ನಿರುದ್ಯೋಗಿ
ಪುತ್ತೂರು

ಬಸ್
...ಗಿ ದರಣಿ

ನೀಡಿದ್ದರು.

ಹಲವು ಬಸ್‌ಗಳನ್ನು ಬಿಡುವುದಾಗಿ ಆಶ್ವಾಸನೆಯಿತ್ತ ಅಧಿಕಾರಿಗಳು 14–10–85ರಿಂದ 10–6–86ರ ವರೆಗೆ ಕೇವಲ ಎರಡೇ ಬಸ್ ಸರ್ವಿಸುಗಳನ್ನು ಮಾತ್ರ ನೀಡಿದರು. "ಈ ಗ್ರಾಮದಲ್ಲಿ ಸಾಕಷ್ಟು ಜನಸಂಖ್ಯೆಯಿದೆ. ಎರಡು ಬಸ್‌ಗಳು ಸಾಕಾಗುವುದಿಲ್ಲ. ಇನ್ನೂ ನಾಲ್ಕೈದು ಬಸ್‌ಗಳನ್ನು ಬಿಡಿ" ಎಂಬ ಗ್ರಾಮಸ್ಥರ ನಿರಂತರ ಮನವಿಗೆ ಅಧಿಕಾರಿಗಳಿಂದ ಯಾವುದೇ ಪ್ರತಿಕ್ರಿಯೆಯಿಲ್ಲ. ಅಧಿಕಾರಿಗಳ ಅಸಡ್ಡೆಯನ್ನು ವಿರೋಧಿಸಿ ಈ ಗ್ರಾಮಕ್ಕೆ ಹೆಚ್ಚುವರಿ ಬಸ್‌ಸಂಪರ್ಕವನ್ನು ಕಲ್ಪಿಸುವಂತೆ ಆಗ್ರಹಿಸಲು ಈ ಸತ್ಯಾಗ್ರಹ ಅನಿವಾರ್ಯವಾಗಿದೆ ಎಂದು ಸತ್ಯಾಗ್ರಹದ ಸಂಘಟಕರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಮನವಿ

ಈ ಸತ್ಯಾಗ್ರಹದ ಸಂದರ್ಭದಲ್ಲಿ ತಾವಾಗಲಿ ತಮ್ಮ ಪ್ರತಿನಿಧಿಗಳಾಗಲಿ ಉಪಸ್ಥಿತರಿದ್ದು ಸತ್ಯಾಗ್ರಹಕ್ಕೆ ಸಹಕಾರ, ರಕ್ಷಣೆಗಳನ್ನಿತ್ತು ಸತ್ಯಾಗ್ರಹದ ಯಶಸ್ಸಿಗೆ ಸಹಕರಿಸಬೇಕೆಂದು ಪಶ್ಚಿಮ ವಲಯದ ಡಿ. ಐ. ಜಿ. ರೇವಣ್ಣಸಿದ್ದಯ್ಯ ಅವರನ್ನು ಸತ್ಯಾಗ್ರಹದ ಸಂಘಟಕರು ಮನವಿ ಮಾಡಿಕೊಂಡಿದ್ದಾರೆ.

ಸುರುಳಿಯಲ್ಲಿ ವಯಸ್ಕರ ಶಿಕ್ಷಣ ಕೇಂದ್ರ ಉದ್ಘಾಟನೆ

ಮಂಗಳೂರು, ಅ. 6– ಪುತ್ತೂರು ತಾಲೂಕು ವಯಸ್ಕರ ಶಿಕ್ಷಣ ಸಮಿತಿ ಹಾಗೂ ಸುರುಳಿ ಶ್ರೀಬಾಲ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ ಸುರುಳಿ ಗ್ರಾಮದಲ್ಲಿ ಇತ್ತೀಚೆಗೆ ವಯಸ್ಕರ ಶಿಕ್ಷಣ ಕೇಂದ್ರವನ್ನು ಎಸ್. ಓ. ಶೇಷಪ್ಪ ಉದ್ಘಾಟಿಸಿದರು.

ಮನವಳಿಕೆಯ ಕೆ. ಕರಿಯಪ್ಪ ರೈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯಯೋಜನಾಧಿಕಾರಿ ಟಿ.ನರಸಿಂಹಯ್ಯ ಹಾಗೂ ತಾಲೂಕು ಶಿಕ್ಷಣ ಸಮಿತಿಯ ಮೇಲ್ವಿಚಾರಕ ಹಿ. ನೇಮು ಅವರು ವಯಸ್ಕರ ಶಿಕ್ಷಣದ ಮಹತ್ವವನ್ನು ವಿವರಿಸಿ, ಅನಕ್ಷರಸ್ಥ ಮಹಿಳೆಯರಿಗೆ ಇಲಾಖಾ ವತಿಯಿಂದ ಉಚಿತ ಸ್ಲೇಟು, ಪುಸ್ತಕಗಳನ್ನು ವಿತರಿಸಿದರು.

ವಯಸ್ಕರಶಿಕ್ಷಣ ಕೇಂದ್ರದ ನಿರ್ದೇಶಕ ಎಂ. ಬಾಲಕೃಷ್ಣ ರೈ ವಂದಿಸಿದರು.

ಬೋನಸ್ ವಿರೋಧಿಸಿ ಮೂಲ್ಕಿ ದೂರವಾಣಿ ನೌಕರರ ಮುಷ್ಕರ

ಮೂಲ್ಕಿ, ಅ. 6–ಕೇಂದ್ರ ಸರಕಾರದ ಬೋನಸ್ ನೀತಿಯನ್ನು ಪ್ರತಿಭಟಿಸಿ ಇಲ್ಲಿನ ದೂರವಾಣಿ ಕೇಂದ್ರದ ಎಲ್ಲ ನೌಕರರು ಕಳೆದ 3 ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ.

ಬೇಡಿಕೆ ಈಡೇರುವವರೆಗೆ ದಿನಂಪ್ರತಿ ಬೆಳಗ್ಗೆ 5ರಿಂದ 6 ಮಧ್ಯಾಹ್ನ 11ರಿಂದ 12 ಹಾಗೂ ಸಂಜೆ 6ರಿಂದ 7 ಗಂಟೆಗಳ ನಡುವಿನ ಅವಧಿಯಲ್ಲಿ ದೂರವಾಣಿ ಸಂಪರ್ಕವನ್ನು ಸ್ಥಗಿತಗೊಳಿಸುವುದರ ಮೂಲಕ ಚಳವಳಿ ನಡೆಸುವುದಾಗಿ ಈ ಕೇಂದ್ರದ ನೌಕರರು ಹೇಳಿದ್ದಾರೆ.

ಈ ದಿಸೆಯಲ್ಲಿ ಗ್ರಾಹಕರಿಗೆ ಉಂಟಾಗುವ ಅನಾನುಕೂಲತೆ ಬಗ್ಗೆ ವಿಷಾದಿಸುವುದಾಗಿಯೂ ಅವರು ತಿಳಿಸಿದ್ದಾರೆ.

ಕುಂದಾಪುರ ದೂರವಾಣಿ ನೌಕರರ ಮುಷ್ಕರ

ಕುಂದಾಪುರ, ಅ. 6– ಕೇಂದ್ರ ಸರಕಾರದ ಬೋನಸ್ ನೀತಿಯನ್ನು ವಿರೋಧಿಸಿ ಇಲ್ಲಿನ ದೂರವಾಣಿ ನೌಕರರು ಕಳೆದ 4 ದಿನಗಳಿಂದ ಸಾಂಕೇತಿಕ ಮುಷ್ಕರ ನಡೆಸುತ್ತಿದ್ದಾರೆ.

ಬೆಳಗ್ಗೆ ಮಧ್ಯಾಹ್ನ ಹಾಗೂ ಸಂಜೆ ತಲಾ ಒಂದು ಗಂಟೆ ಕೆಲಸ ನಿಲುಗಡೆ ಹಾಗೂ ಉಳಿದ ಸಮಯಗಳಲ್ಲಿ ನಿಧಾನಗತಿಯ ಕೆಲಸ ನಡೆಯುತ್ತಿದ್ದು, ಇದರಿಂದ ಗ್ರಾಹಕರ ಮೇಲೆ ಪರಿಣಾಮವಾಗಲಿದೆ.

ಇದೇ ಸಮಯದಲ್ಲಿ ಟೆಲಿಗ್ರಾಫ್ ನೌಕರರು ಇದೇ ಕಾರಣದಿಂದ ಮುಷ್ಕರ ನಿರತರಾಗಿರುವುದರಿಂದ ಎಸ್. ಟಿ. ಡಿ. ಹಾಗೂ ಇತರ ಸೌಲಭ್ಯಗಳು ದೊರಕದ ಗ್ರಾಹಕರು ತೊಂದರೆಗೀಡಾಗಿದ್ದಾರೆ.

ಈ ಸಾಂಕೇತಿಕ ಮುಷ್ಕರವನ್ನು ಸರಕಾರ ಗಮನಿಸದೇ ಹೋದರೆ, ತೀವ್ರ ಚಳವಳಿಗೆ ಇಳಿಯಬೇಕಾದೀತೆಂದು ದೂರವಾಣಿ ನೌಕರರು ತಿಳಿಸಿದ್ದಾರೆ.

ಸರಕಾರದ ಕಾರ್ಮಿಕ ವಿರೋಧಿ ನೀತಿಗೆ ಖಂಡನೆ

ಮಂಗಳೂರು, ಸೆ. 6– ಹಂಚಿನ ಕಾರ್ಖಾನೆ ನೌಕರರಿಗೆ ಕನಿಷ್ಠ ವೇತನ ನಿಗದಿ ಮಾಡದೆ ಕಾಲಹರಣ ಮಾಡುತ್ತಿರುವ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಹಂಚು ಕಾರ್ಖಾನೆ ನೌಕರರ ಸಂಘವು ಇತ್ತೀಚೆಗೆ ಖಂಡಿಸಿತು.

ಬೋಳಾರದಲ್ಲಿ ಸಭೆ ಸೇರಿದ್ದ ಸಂಘವು ಕಾರ್ಮಿಕರ ಬೇಡಿಕೆಗಳನ್ನು ಒತ್ತಾಯಿಸಲು ರಾಜ್ಯವ್ಯಾಪಿ ಚಳವಳಿ ನಡೆಸುವ ದಿಸೆಯಲ್ಲಿ ರಾಜ್ಯಮಟ್ಟದ ಹಂಚಿನ ಕಾರ್ಮಿಕರ ಸಮಾವೇಶವನ್ನು ಜರಗಿಸಲು ನಿರ್ಣಯಿಸಿತು.

ಸಂಘದ 43ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಕಾ| ಕೆ. ಆರ್. ಶ್ರೀಯಾನ್ ವಹಿಸಿದ್ದರು. ಜೆ. ವೀರಪ್ಪ ಹಾಗೂ ಗಂಗಯ್ಯ ಅವರು ಅತಿಥಿಗಳಾಗಿ ಭಾಗವಹಿಸಿದ್ದರು.

ಸಭೆಯಲ್ಲಿ ಇ.ಎಸ್.ಐ. ಸೌಲಭ್ಯದಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಮನವಿಯೊಂದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿ ಸರಿಪಡಿಸುವಂತೆ ಒತ್ತಾಯಿಸುವ ತೀರ್ಮಾನಕ್ಕೆಗೊಳ್ಳಲಾಯಿತು. ಈ ತಿಂಗಳ ಅಂತ್ಯದಲ್ಲಿ ನಡೆಯುವ ರೈತರ ಚಳವಳಿಯನ್ನು ಬೆಂಬಲಿಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷ ಬಿ. ಮಾಧವ, ಕಾ| ಡಿ. ಗೋಪಾಲ, ಅಬ್ರಹಾಂ ಕರ್ಕಡ ಮುಂತಾದವರು ಮಾತನಾಡಿದರು.

ಹೆಂಡತಿ, ಮಗ ಇಬ್ಬರೂ ಕಾಣೆ!

ಮಂಗಳೂರು, ಅ. 6– ತಮ್ಮ ಪತ್ನಿ ರೇವತಿ(25) ಹಾಗೂ ಮಗ ನಾಗೇಶ (2) ಈ ಇಬ್ಬರೂ ಕಳೆದ ಅ. 2ರಿಂದ ಕಾಣೆಯಾಗಿರುವುದಾಗಿ ಸೇಸಪ್ಪ ಎಂಬವರು ಕಂಕನಾಡಿ ಪೊಲೀಸರಿಗೆ ದೂರು ನೀಡಿದ್ದಾರೆ.

ಅ. 2ರಂದು ಬೆಳಗ್ಗೆ 8.30ಕ್ಕೆ ಪತ್ನಿ ಮತ್ತು ಮಗ ಮನೆ ಬಿಟ್ಟವರು ಮರಳಿ ಬಂದಿಲ್ಲವೆಂದು ಸೇಸಪ್ಪ ದೂರಿನಲ್ಲಿ ತಿಳಿಸಿದ್ದಾರೆ. ಕಂಕನಾಡಿ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜಯಂತ ವಿ. ಶೆಟ್ಟಿ ಅವರು ಕೇಸು ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕೋಳಿ ಜೂಜು ಕೇಂದ್ರಕ್ಕೆ ದಾಳಿ: ಇಬ್ಬರ ಬಂಧನ

ಕುಂದಾಪುರ, ಅ. 6– ಕಕ್ಕುಂಜೆಯಲ್ಲಿನ ಕೋಳಿಜೂಜು ಕೇಂದ್ರಕ್ಕೆ ಸ್ಥಳೀಯ ಸರ್ಕಲ್ ಇನ್ಸ್‌ಪೆಕ್ಟರ್ ಇತ್ತೀಚೆಗೆ ದಾಳಿ ನಡೆಸಿ ಇಬ್ಬರನ್ನು ಬಂಧಿಸಿ, 15 ಕೋಳಿಗಳನ್ನು ವಶಪಡಿಸಿಕೊಂಡಿದ್ದಾರೆ ಕೋಟ ಸಬ್‌ಇನ್ಸ್‌ಪೆಕ್ಟರ್ ಕೃಷ್ಣಪ್ಪ ತನಿಖೆ ನಡೆಸುತ್ತಿದ್ದಾರೆ.

ವೀಡಿಯೊ ಕೇಂದ್ರಕ್ಕೆ ದಾಳಿ: ಅಶ್ಲೀಲ ಚಿತ್ರ ಕ್ಯಾಸೆಟ್ ವಶ

ಮಂಗಳೂರು, ಅ. 6– ಬಂಟ್ವಾಳದ ಪಾಣೆ ಮಂಗಳೂರಿನ ವೀಡಿಯೋ ಕೇಂದ್ರವೊಂದಕ್ಕೆ ನಿನ್ನೆ ಪೊಲೀಸರು ದಾಳಿ ನಡೆಸಿ ಅಶ್ಲೀಲ ಚಿತ್ರಗಳ ಮೂರು ಕ್ಯಾಸೆಟ್‌ಗಳನ್ನು ವಶಪಡಿಸಿಕೊಂಡಿದ್ದಾರಲ್ಲದೆ ಆ ಸಂಬಂಧ ಇಬ್ಬರನ್ನು ಬಂಧಿಸಿ ಕೇಸು ದಾಖಲಿಸಿದ್ದಾರೆ.

ಪುತ್ತೂರು ಪೊಲೀಸ್ ಉಪಾಧೀಕ್ಷಕ ಎಸ್. ರಾಜು ಅವರ ಆದೇಶದ ಮೇರೆಗೆ ಬಂಟ್ವಾಳ ಪೊಲೀಸ್ ವೃತ್ತ ನಿರೀಕ್ಷಕ ಪಾಂಡುರಂಗ ರಾವ್, ಬಂಟ್ವಾಳ ಠಾಣಾ ಉಪನಿರೀಕ್ಷಕ ಎಸ್. ಕೆ. ಪುಟ್ಟಪ್ಪನವರು ಸಿಬ್ಬಂದಿಗಳಾದ ಸುಕುಮಾರನ್, ಚಂದ್ರೋಜಿರಾವ್, ನೀಲಯ ಪೂಜಾರಿ, ಕುಂಞಕಣ್ಣನ್, ಪದ್ಮನಾಭ, ಡ್ರೈವರ್ ಮಂಜುನಾಥ ಅವರ ಜೊತೆಗೂಡಿ ಈ ದಾಳಿ ನಡೆಸಿದರು.

ಹೇರೂರಿನಲ್ಲಿ ಲಾರಿ ಅಪಘಾತ: ಕ್ಲೀನರ್ ದುರ್ಮರಣ

ಕುಂದಾಪುರ, ಅ. 6– ಬ್ರಹ್ಮಾವರದ ಸಮೀಪದ ಹೇರೂರು ಗ್ರಾಮದ ಕೆಂಜೆ ಎಂಬಲ್ಲಿ ನಿನ್ನೆ ರಾತ್ರಿ ಮಿನಿ ಲಾರಿಯೊಂದು ಸ್ಕಿಡ್ ಆಗಿ ಮಗುಚಿ ಬಿದ್ದುದರಿಂದ ಲಾರಿ ಕ್ಲೀನರ್ ಅಬ್ದುಲ್ ಎಂಬವರು ಸ್ಥಳದಲ್ಲೇ ಮೃತರಾಗಿದ್ದಾರೆ.

ಮಿನಿಲಾರಿ ಮಲ್ಪೆಯಿಂದ ಮೀನು ತುಂಬಿಕೊಂಡು ಶಿವಮೊಗ್ಗಕ್ಕೆ ಹೋಗುತ್ತಿತ್ತು. ಲಾರಿಯ ಚಾಲಕ ಅಬ್ದುಲ್ ರಜಾಕನನ್ನು ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.

ಮಲ್ಪೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್

ಗಂಗಾಧರ (ಕಾರ್ಯದರ್ಶಿ), ಶಕುಂತಲಾ ಹಾಗೂ ಜಗದೀಶ (ಜತೆಕಾರ್ಯದರ್ಶಿ), ಹರೀಶ್ ಕುಮಾರ್ (ಕಾರ್ಯಾಲಯ ಕಾರ್ಯದರ್ಶಿ), ಶ್ರೀಕಾಂತಭಟ್ (ಕೋಶಾಧಿಕಾರಿ),ಸೋಮಶೇಖರ (ಸಂಘಟನಾ ಕಾರ್ಯದರ್ಶಿ) ಹಾಗೂ 15 ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಮುಂಬಯಿ ಮರ್ಚಂಟ್ ಇಂಡಿಯಾ ಫ್ರೆಂಡ್ಸ್ ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘ

ಕೆ. ಜೆ. ಸಾಲಿಯಾನ್ (ಅಧ್ಯಕ್ಷ) ಜಿ. ವಿ. ಶೆಟ್ಟಿಗಾರ್ ಹಾಗೂ ಸಿ. ಹಿರೇರಾ (ಉಪಾಧ್ಯಕ್ಷರು), ಅಶೋಕ ಎಸ್. ಸುವರ್ಣ (ಗೌರವ ಪ್ರಧಾನಕಾರ್ಯದರ್ಶಿ) ಹರೀಶ್. ಎಸ್. ಪೂಜಾರಿ (ಗೌರವ ಜತೆ ಕಾರ್ಯದರ್ಶಿ), ಮಾಧವ ಎಸ್. ಪೂಜಾರಿ (ಕೋಶಾಧಿಕಾರಿ), ಆನಂದ ವಿ. ಶೆಟ್ಟಿ (ಜತೆ ಕೋಶಾಧಿಕಾರಿ) ಹಾಗೂ 17 ಮಂದಿ ಸದಸ್ಯರು.

ಮಂಡಲ ಪಂಚಾಯತ್ ಸಜಿಪ ಮುನ್ನೂರು

ಎಂ. ಪರಮೇಶ್ವರ ಸಜಿಪ ಮುನ್ನೂರು (ಅಧ್ಯಕ್ಷ), ಬಿ. ಇಸ್ಮಾಯಿಲ್, ಲಕ್ಷ್ಮಣ ಪೂಜಾರಿ ಹಾಗೂ ಎ. ಚಿದಾನಂದ (ಉಪಾಧ್ಯಕ್ಷರು), ಕೆ. ಸಂಜೀವ ಪೂಜಾರಿ (ಪ್ರಧಾನಕಾರ್ಯದರ್ಶಿ), ಎಂ. ಬಾವಾ ಹಾಗೂ ಕೆ. ಬಾವಾ(ಜತೆ ಕಾರ್ಯದರ್ಶಿಗಳು), ಪುರುಷೋತ್ತಮ ಕೋಶಾಧಿಕಾರಿ) ಹಾಗೂ 25 ಮಂದಿ ಸದಸ್ಯರು.

ಪಾಂಡುರಂಗ ಸೇವಾ ಸಮಿತಿ ಗುರುವಾಯನಕೆರೆ

ಪಿ. ರಾಜೇಂದ್ರ ನಾಯರ್ (ಅಧ್ಯಕ್ಷ), ನೇಮಣ್ಣ ಶೆಟ್ಟಿ ಮತ್ತು ನಿರ್ಮಲ ಎಸ್. ರಾವ್ (ಉಪಾಧ್ಯಕ್ಷರು), ಕೆ. ಬಾಬು ಗೌಡ (ಕಾರ್ಯದರ್ಶಿ). ದಯಾನಂದ ಪೂಜಾರಿ ಮತ್ತು ಪುಷ್ಪಲತ (ಜತೆ ಕಾರ್ಯದರ್ಶಿಗಳು), ಕೆ. ಯೋಗೀಶ ನಾಯಕ್ (ಕೋಶಾಧಿಕಾರಿ) ಹಾಗೂ 19 ಮಂದಿ ಸದಸ್ಯರು.

ಪಡುಕೋಣೆ ವ್ಯವಸಾಯ ಸೇವಾ ಸಹಕಾರಿ ಸಂಘ

ಸಂಘದ ಮಹಾ ಸಭೆಯಲ್ಲಿ ಇತ್ತೀಚೆಗೆ ಜರಗಿತು. ಸಂಘದ ನೂತನ ಪದಾಧಿಕಾರಿಗಳನ್ನಾಗಿ ಈ ಕೆಳಗಿನವರನ್ನು ಆಯ್ಕೆ ಮಾಡಲಾಯಿತು.

ಕೆ. ಚಂದ್ರಶೇಖರ ಹೆಬ್ಬಾರ್, ಜಿ. ನರಸಿಂಹ ಶೆಟ್ಟಿ, ಸೂರಜೆ ಕಾಂಚನ

ವಿದ್ಯಾರ್ಥಿ ವಾರ್ತೆ

ಮತ್ತು ಸುಬ್ರಾಯ ಭಾತ್ರ (ಆಡಳಿತ ಮಂಡಳಿ ಸದಸ್ಯರು) ಗುಲಾಬಿ ಕುಲಾಲ್ತಿ, (ಮಹಿಳಾ ಪ್ರತಿನಿಧಿ) ವೆಂಕಟ ಹರಿಜನ (ಹರಿಜನ ಗಿರಿಜನರ ಪ್ರತಿನಿಧಿ), ಎ. ಬಾಲಕೃಷ್ಣ ಶೆಟ್ಟಿ, ಚಂದ್ರಶೇಖರ ಶೆಟ್ಟಿ, ಜಿ. ರಾಜು ಭಂಡಾರಿ, ಶೀನ ದೇವಾಡಿಗ ಹಾಗೂ ವೆಂಕಟ ಪೂಜಾರಿ (ಸಾಮಾನ್ಯ ಸದಸ್ಯ ಪ್ರತಿನಿಧಿಗಳು)

ಮರವಂತೆ ಯುವಕ ಮಂಡಲ

ಎಂ. ಎಲ್. ಭಟ್ ಮರವಂತೆ (ಅಧ್ಯಕ್ಷ), ಎಂ. ರಾಜಶೇಖರ ಹೆಬ್ಬಾರ (ಉಪಾಧ್ಯಕ್ಷ), ಎಂ.ಭಾಸ್ಕರ ಶೆಟ್ಟಿ (ಕಾರ್ಯದರ್ಶಿ),ಎಂ.ಸಂಜೀವಮೊಗವೀರ(ಸಹಕಾರ್ಯದರ್ಶಿ), ಗ್ರೇಷನ್ ಅರ್ಲಾನ್ಸೊ (ಕ್ರೀಡಾ ಕಾರ್ಯದರ್ಶಿ), ಎಂ. ಜನಾರ್ಧನ ಹೆಬ್ಬಾರ (ಖಜಾಂಚಿ), ಮತ್ತು 9 ಜನ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಇವರಿಗೆ ಸಹಕಾರಿಯಾಗಿ 10 ಜನ ಸದಸ್ಯರು.

ರಿಕ್ಷಾ ಮತ್ತು ಟೆಂಪೊ ಡ್ರೈವರ್ಸ್ ಯೂನಿಯನ್, ಬೈಂದೂರು

ಲಿಂಗಯ್ಯ ಶೆಟ್ಟಿ (ಅಧ್ಯಕ್ಷ), ಕೆ. ಶಂಕರ ದೇವಾಡಿಗ (ಗೌರವಾಧ್ಯಕ್ಷ), ಎಸ್. ಎಂ. ಸಯ್ಯದ್ ಸಾಹೇಬ್ (ಉಪಾಧ್ಯಕ್ಷ), ಎಂ. ಆರ್. ಪ್ರಭಾಕರ (ಕಾರ್ಯದರ್ಶಿ), ವಾಸುದೇವ ಉಳ್ಳೂರ್ ಮತ್ತು ಕೆ. ಮಹಾಬಲ (ಸಹಕಾರ್ಯದರ್ಶಿಗಳು) ನಾರಾಯಣ ಬಿಲ್ಲವ (ಖಜಾಂಚಿ), ರಾಮ ದೇವಾಡಿಗ ಮತ್ತು ಗಿರೀಶ್ ಕುಮಾರ್ (ಲೆಕ್ಕ ಪರಿಶೋಧಕರು), ಹಾಗೂ 8 ಜನ ಸಲಹಾ ಸಮಿತಿ ಸದಸ್ಯರು.

ಪುತ್ತೂರು ಯುವಕ ವೃಂದ

ಕೆ. ಸುನಿಲ್ ಕುಮಾರ್ ಶೆಟ್ಟಿ (ಅಧ್ಯಕ್ಷ) ಸುದರ್ಶನ್ ರೈ ಮತ್ತು ಚಂದ್ರಶೇಖರ್ ಎಚ್. (ಉಪಾಧ್ಯಕ್ಷ), ಕೆ. ಸೀತಾರಾಮ ರೈ (ಕಾರ್ಯದರ್ಶಿ), ಹರ್ಷವರ್ಧನ್ (ಸಹಕಾರ್ಯದರ್ಶಿ), ಚಂದ್ರಶೇಖರ ಭಟ್ (ಖಜಾಂಚಿ), ಪ್ರೇಮಾನಂದ(ಮನರಂಜನಾ ಕಾರ್ಯದರ್ಶಿ) ಗಂಗಾಧರ್ ಆಚಾರ್ಯ ಮತ್ತು ಉಮೇಶ್ (ಉಪಕಾರ್ಯದರ್ಶಿಗಳು) ಹಾಗೂ 10 ಜನ ಸಲಹಾ ಸಮಿತಿ ಸದಸ್ಯರು.

ಕವಿಮುದ್ದಣ ಸಾಂಸ್ಕೃತಿಕ ಮಂಡಳಿ, ನಂದಳಿಕೆ.

ನಂದಳಿಕೆ ಬಾಲಚಂದ್ರ ರಾವ್ (ಗೌರವ ಅಧ್ಯಕ್ಷ), ಎನ್. ಚಂದ್ರಹಾಸ ಚೌಟ (ಅಧ್ಯಕ್ಷ), ಎಸ್. ಸುಂದರ ರಾಮ ಬಂಗೇರ(ಉಪಾಧ್ಯಕ್ಷ), ಎನ್.ನಾರಾಯಣ ಭಟ್ (ಪ್ರಧಾನ ಕಾರ್ಯದರ್ಶಿ), ಎನ್. ವೆಂಕಟ ಕೃಷ್ಣ (ಸಹಕಾರ್ಯದರ್ಶಿ), ಎನ್. ಸುಧಾಕರ ರಾವ್ (ಖಜಾಂಚಿ), ಸುಬ್ರಹ್ಮಣ್ಯ ಭೈಪಡಿತ್ತಾಯ(ಗ್ರಂಥಾಲಯ ಕಾರ್ಯದರ್ಶಿ) ಹಾಗೂ 5 ಜನ ಕಾರ್ಯಕಾರಿ ಸಮಿತಿ ಸದಸ್ಯರು.

ಮುಂಗಾರು

ಗುರುವಾರ, ಅಕ್ಟೋಬರ್ 9, 1986

ಪ್ರಮಾಣಬದ್ಧ ಪ್ರಾತಿನಿಧ್ಯ

ಕರ್ನಾಟಕ ಸರಕಾರ ಶಿಕ್ಷಣದಲ್ಲಿ ಹಾಗೂ ಸರಕಾರಿ ಸೇವೆಯಲ್ಲಿ ಹಿಂದುಳಿದ ವರ್ಗಗಳವರಿಗೆ ಮೀಸಲಾತಿಯನ್ನು ನೀಡುವುದಕ್ಕೆ ಹೊಸ ಸೂತ್ರವೊಂದನ್ನು ರೂಪಿಸಿದೆ. ಇದರ ಪರಿಣಾಮವಾಗಿ ಮಸ್ಲುಶ ಹಾವನೂರ್ ಆಯೋಗದ ಶಿಫಾರಸನ್ನೂ ವೆಂಕಟಸ್ವಾಮಿ ಆಯೋಗದ ಶಿಫಾರಸನ್ನೂ ಕೈಬಿಟ್ಟಂತಾಗಿದೆ. ಸಾಮಾನ್ಯವಾಗಿ ಎಲ್ಲಾ ಹಿಂದುಳಿದ ಜಾತಿಗಳಿಗೂ ಸರಕಾರದ ಹೊಸ ಸೂತ್ರದನ್ವಯ ಮೀಸಲಾತಿಯು ದೊರೆಯುತ್ತದೆ. ಈ ಸೂತ್ರದ ಪ್ರಕಾರ, ಜನಸಂಖ್ಯೆಯ ಶೇಕಡಾ 92ರಷ್ಟು ಮಂದಿಗೆ ಮೀಸಲಾತಿಯ ರಕ್ಷಣೆಯು ದೊರೆಯುತ್ತದೆ. ಮೀಸಲಾತಿಯ ಒಟ್ಟು ಶೇಕಡಾತಿಯು ಮೊದಲಿದ್ದಂತೆಯೇ 68.

ಹೊಸ ಸೂತ್ರದಲ್ಲಿ ವಿವಿಧ ಹಿಂದುಳಿದ ಜಾತಿಗಳನ್ನು ವಿವಿಧ ಗುಂಪುಗಳಾಗಿ ಮಾಡಲಾಗಿದೆ. ಆಯಾ ಜಾತಿಗಳವರ ಸಾಮಾಜಿಕ ಸ್ಥಾನಮಾನಗಳಿಗೆ ಅನುಸಾರವಾಗಿ ಅವುಗಳಿಗೆ ದೊರೆಯುವ ಮೀಸಲಾತಿ ಶೇಕಡಾತಿಯನ್ನು ನಿಗದಿಪಡಿಸಲಾಗಿದೆ. ಬ್ರಾಹ್ಮಣರು, ಜೈನರು, ವೈಶ್ಯರು, ಮೊದಲಿಯಾರರು ಮೊದಲಾದ ಮುಂದುವರಿದ ಜಾತಿಗಳವರಲ್ಲಿಯೂ ಇರಬಹುದಾದ ಆರ್ಥಿಕವಾಗಿ ಬಡವರಾದವರಿಗೆ ಮೀಸಲಾತಿಯ ವಿಶೇಷ ಗುಂಪನ್ನು ರಚಿಸಿ ಶೇಕಡಾ ಐದರಷ್ಟು ಮೀಸಲಾತಿ ನೀಡಲಾಗಿದೆ. ಸಾರ್ವತ್ರಿಕವಾಗಿ ಎಲ್ಲ ಜಾತಿಗಳವರೂ ಅರ್ಹತೆಯ ನೆಲೆಯಲ್ಲಿ ಶೇಕಡಾ 32ರಷ್ಟು ಹುದ್ದೆಗಳಿಗೆ ಸ್ಪರ್ಧಿಸಲು ಅವಕಾಶವಿದೆ.

ಕೆಲವು ವರ್ಗಗಳವರಿಗೆ ಮೀಸಲಾತಿಯನ್ನು ಆರ್ಥಿಕವಾಗಿ ಬಡವರಾದವರಿಗೆ ಸೀಮಿತಗೊಳಿಸಿದ್ದು ಅಂದರೆ ಮೀಸಲಾತಿಗೆ ವರಮಾನದ ಮಿತಿಯನ್ನು ಹಾಕಿರುವುದು ಹೊಸದೇ ಆದ ಒಂದು ಹೆಜ್ಜೆ. ಮೀಸಲಾತಿಯ ವಿಶೇಷ ಗುಂಪಿನವರಿಗೆ ಸೌಲಭ್ಯ ಪಡೆದುಕೊಳ್ಳಲು ಈ ನಿರ್ಬಂಧ ಮೊದಲೇ ಇದ್ದಿತಾದರೂ ಈ ಪರಿಕಲ್ಪನೆಯನ್ನು ಇನ್ನಿತರ ಕೆಲವು ಗುಂಪುಗಳಿಗೂ ವಿಸ್ತರಿಸಿರುವುದು ಹೊಸ ಅಂಶ.

ಸರಕಾರ ರೂಪಿಸಿರುವ ಈ ಹೊಸ ಸೂತ್ರ ವಿಚಾರಶೀಲವಾಗಿದೆ. ಸಾಮಾಜಿಕವಾಗಿ ಹಿಂದುಳಿದಿರುವ ಎಲ್ಲರಿಗೂ ಸಾಮಾಜಿಕ ನ್ಯಾಯವನ್ನೊದಗಿಸುವ ಹೆಜ್ಜೆ ಇದಾಗಿದೆ. ಆಯಾ ಜಾತಿಗಳವರ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣದಲ್ಲಿಯೂ, ಸೇವೆಯಲ್ಲಿಯೂ ಪ್ರಾತಿನಿಧ್ಯ ನೀಡುವ ವಿವೇಕಯುತವಾದ ಉಪಕ್ರಮವಾಗಿದೆ. ಸೆಪ್ಟಂಬರ 24ರ ಸಂಪಾದಕೀಯದಲ್ಲಿ ನಾವು ಈ ನೀತಿಯನ್ನೇ ಪ್ರತಿಪಾದಿಸಿದ್ದೆವು.

ಈ ಸೂತ್ರದ ಸಿಂಧುತ್ವವನ್ನು ಆಸಕ್ತ ವರ್ಗಗಳವರು ನ್ಯಾಯಾಲಯದಲ್ಲಿ ಪ್ರಶ್ನಿಸುವ ಸಾಧ್ಯತೆಯಿದೆ. ಇಂದಿನ ವಿದ್ಯಮಾನಕ್ಕೆ ಕಾರಣವೆನಿಸಿದ ವರದಿಯನ್ನೊಪ್ಪಿಸಿದ ಆಯೋಗದ ಅಧ್ಯಕ್ಷ ಟಿ. ವೆಂಕಟಸ್ವಾಮಿಯವರೂ ಆ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಅದ್ದರಿಂದ ಸಾಮಾಜಿಕ ನ್ಯಾಯವನ್ನು ನೀಡುವ ಆಶಯಕ್ಕೆ ಸರಕಾರ ತಿರುಳು ತುಂಬಬೇಕು. ಅದಕ್ಕಾಗಿ ಅದು ಈ ಮೀಸಲಾತಿ ಸೂತ್ರವನ್ನು ಕಾನೂನಿನ ನೆಲೆಯಲ್ಲಿ ಸಮರ್ಥಿಸುವ ಶಾಸ್ತ್ರೀಯ ತಳಹದಿಯನ್ನು ಒದಗಿಸಿಕೊಡಬೇಕು. ಸಮಾಜದ ಎಲ್ಲರಿಗೆ ಪ್ರಮಾಣಬದ್ಧವಾದ ಪ್ರಾತಿನಿಧ್ಯವನ್ನು ನೀಡುವ ಈ ಸೂತ್ರಕ್ಕೆ ವಾಸ್ತವದ ನೆಲೆಗಟ್ಟು ಉಂಟೆಂಬುದನ್ನು ಸಾಬೀತುಪಡಿಸಬೇಕು. ಅದಕ್ಕಾಗಿ ವಿಷಯ ಸಂಗ್ರಹ ಮಾಡಬೇಕು.

ಈ ವಿಷಯ ಸಂಗ್ರಹ ಕ್ರಮಬದ್ಧವಾಗಿ, ಶಾಸ್ತ್ರೀಯವಾಗಿ ನಡೆಯಬೇಕು. ಪತ್ರರಲ್ಲಿ ಇಬ್ಬರನ್ನೋ ಮೂವರನ್ನೋ ಕಂಡು, ಕೇಳಿ ಬರೆದುಕೊಂಡರೆ ಸಾಲದು. ಕ್ರಮಬದ್ಧವಾದ ಖಾನೇಶುಮಾರಿಯನ್ನು ಇದಕ್ಕಾಗಿ ನಡೆಸಬೇಕು. ಮನೆಮನೆಗೆ ಭೇಟಿ ಕೊಡಬೇಕು. ಆಯಾ ಜಾತಿಗಳಲ್ಲಿರುವ ಜನರ ಸಂಖ್ಯೆ, ಜಾತಿಗಳಿಗಿರುವ ಉಪನಾಮಗಳು ಜನರ ಆರ್ಥಿಕ ಪರಿಸ್ಥಿತಿ ಶೈಕ್ಷಣಿಕ ಮಟ್ಟ, ಔದ್ಯೋಗಿಕ ಪರಿಸ್ಥಿತಿ ಇವೆಲ್ಲವನ್ನೂ ತಿಳಿದುಕೊಳ್ಳಬೇಕು. ಇಂಥ ವಿವರಗಳ ಕ್ರೋಢೀಕರಣದಿಂದ ಪ್ರತಿಯೊಂದು ಜಾತಿಯ ಆರ್ಥಿಕ-ಸಾಮಾಜಿಕ ಸ್ಥಾನಮಾನಗಳ ಚಿತ್ರ ಗೋಚರಿಸುತ್ತದೆ. ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಯೂ ಆರ್ಥಿಕ-ಸಾಮಾಜಿಕ ಸ್ಥಾನಮಾನಗಳಲ್ಲಿ ವ್ಯತ್ಯಾಸ ಕಂಡು ಬಂದರೆ ಆಗ ನೀಡುವ ಮೀಸಲಾತಿ ಶೇಕಡಾತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಹುದು.

ಜಾತಿ ಜನ ಬಲದ ಆಧಾರದಲ್ಲಿ ಮೀಸಲಾತಿ ಕೊಡುವ ಈ ಸೂತ್ರವನ್ನು ಖಾನೇಶುಮಾರಿಯ ವಿವರಗಳ ತಳಹದಿಯಲ್ಲಿ ಮಾತ್ರವೇ ಸರಕಾರವು ನ್ಯಾಯಾಂಗದ ಮುಂದೆ ಸಮರ್ಥಿಸಿಕೊಳ್ಳುವುದು ಸಾಧ್ಯ. ವಸ್ತುಸ್ಥಿತಿಯನ್ನು ಮಂಡಿಸಿದರೆ ನ್ಯಾಯಾಲಯವು ಈ ಸೂತ್ರ ಸಾಮಾಜಿಕ ನ್ಯಾಯಕ್ಕೆ ಪೂರಕವಾಗುವುದೆಂಬುದನ್ನು ಒಪ್ಪಿಕೊಳ್ಳುವುದು ಸಂಭವನೀಯ. ಇಂಥ ಅಂಕಿ ಅಂಶಗಳನ್ನು ದೋಷ ರಹಿತ ವಿಧಾನದಿಂದ ಸಂಗ್ರಹ ಮಾಡುವುದರಿಂದ ಸರಕಾರವು ನೇಮಿಸಲು ಉದ್ದೇಶಿಸಿರುವ ಹಿಂದುಳಿದವರನ್ನು ಗುರುತಿಸುವ ಇನ್ನೊಂದು ಆಯೋಗದ ಕೆಲಸವೂ ಸುಲಭವಾದೀತು. ಅದರ ಪ್ರಯತ್ನಕ್ಕೆ ವೈಜ್ಞಾನಿಕ ತಳಹದಿಯೂ ದೊರೆಯುತ್ತದೆ.

ಆದ್ದರಿಂದ 'ಜಾತಿನೆಲೆಯ ಖಾನೇಶುಮಾರಿಯನ್ನು ತಡ ಮಾಡದೆ ಸರಕಾರ ಮಾಡಬೇಕು.ಅದನ್ನು ರಾಜ್ಯ ಸರಕಾರವೇ ಮಾಡುವುದು ಸಾಧ್ಯ. ಕೇಂದ್ರದ ಅನುಮತಿಯೇನೂ ಅದಕ್ಕೆಬೇಕಾಗಿಲ್ಲ.

ಧರ್ಮಜ್ಞಾನಿಗಳೇ ಉತ್ತರಿಸಬೇಕು

ಪ್ರಿಯರೆ,

ಬಹುಸಂಖ್ಯಾತ ಮುಸಲ್ಮಾನರು ಇಂದು ಮೂಢನಂಬಿಕೆಗಳ ಕೂಪದಲ್ಲಿ ಬಿದ್ದು ನರಳುತ್ತಿರುವುದು ಯಾರಿಗೂ ಅರಿಯದ ವಿಷಯವೇನೂ ಆಗಿ ಉಳಿದಿಲ್ಲ. ಇವರ ಈ ನಂಬಿಕೆ ಧರ್ಮಗ್ರಂಥದಲ್ಲಿ ಪ್ರಸ್ತಾಪಿತ ವಿಚಾರಕ್ಕೆ ತೀರಾ ತದ್ವಿರುದ್ಧವಾಗಿರುವುದೇ ಜಾಸ್ತಿ. ಹೀಗೆ ಮೂಢನಂಬಿಕೆಯನ್ನೇ ನಿಜವಾದ ಧರ್ಮ ಎಂದು ಆಚರಿಸಲು ಮತ್ತು ಆ ಬಗ್ಗೆ ವಾದಿಸುವಂತಹ ಸ್ಥಿತಿ ಮುಸ್ಲಿಮರೆಡೆಯಲ್ಲಿ ಸಂಜಾತವಾಗಿರುವುದಕ್ಕೆ ನಮ್ಮ ಪುರೋಹಿತಶಾಹಿಯ ಕೊಡುಗೆಯೂ ಅಪಾರವಾಗಿದೆ. ಇವರ ಇಂತಹ ಕೊಡುಗೆಗಳು ಮೂಢ ನಂಬಿಕೆಗಳನ್ನು ಪ್ರೋತ್ಸಾಹಿಸುವುದು ಆಗಿರಬಹುದು ಅಥವಾ ಆ ಬಗ್ಗೆ ವಹಿಸುವ ಮೌನವು ಆಗಿರಬಹುದು.

ಯಾವನೇ ಗಡ್ಡಧಾರಿ ಮತ್ತು ಕೈಯಲ್ಲಿ ಜಪಮಣಿ ಸರವನ್ನು ಹಿಡಿದುಕೊಂಡವ ತನ್ನ ಸ್ವಾರ್ಥ ಸಾಧನೆಗಾಗಿ ದೇವಭಕ್ತಿ ಮತ್ತು ದೇವಭೀತಿಯ ಹೆಸರಲ್ಲಿ ಏನೇ ಮೂಢ ನಂಬಿಕೆಯನ್ನು ಬಿತ್ತರಿಸಿದರೆ ಸಾಕು ಅದು ಮುಸಲ್ಮಾನರೆಡೆಯಲ್ಲಿ ಮಿಂಚಿನವೇಗದಲ್ಲಿ ಪ್ರಚಾರಗೊಂಡು ಕೆಲವೊಮ್ಮೆ ಧರ್ಮಗ್ರಂಥದಲ್ಲಿಯ ವಿಚಾರಕ್ಕಿಂತ ಇದಕ್ಕೆ ಹೆಚ್ಚು ಮಹತ್ವ ಲಭಿಸುವ ಸಾಧ್ಯತೆಯೂ ಇದೆ. ಮುಸಲ್ಮಾನರ ಇಂತಹ ನಂಬಿಕೆಗಳಿಗೆ ಇನ್ನಷ್ಟು ಗ್ರಾಸವನ್ನೊದಗಿಸಿ ಅವರ ಧರ್ಮವನ್ನು ಹಾಸ್ಯಾಸ್ಪದಗೊಳಿಸುವುದರಲ್ಲಿ ಇಸ್ಲಾಮ್ ವಿರೋಧಿಅಂತರಾಷ್ಟ್ರೀಯ ಸಂಚು ಕೂಡಾ ಆಗಾಗ್ಗೆ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಇತ್ತೀಚೆಗೆ ಲಭಿಸಿದ ಒಂದು ಬಹಿರಂಗ ಉದಾಹರಣೆಯೆಂದರೆ ಸೌದಿಯ "ನಾಗಮಾನವ" ಘಟನೆ. ಈ ರೀತಿಯಲ್ಲಿ ಯಾವುದೇ ಒಂದು ಮೂಢ ನಂಬಿಕೆಯು ಬಹು ಸಂಖ್ಯಾತ ಮುಸಲ್ಮಾನರೆಡೆಯಲ್ಲಿ ಧರ್ಮದ ಸ್ಥಾನಗಳಿಸಲು ಮುಖ್ಯ ಕಾರಣ ನಮ್ಮ ಪುರೋಹಿತಶಾಹಿಯು ಧರ್ಮದ ತಿರುಳನ್ನು ಅವರಿಗೆ ತಲುಪಿಸುವುದರಲ್ಲಿ ವಿಫಲಗೊಂಡಿರುವುದೇ ಆಗಿರುತ್ತದೆ.

"ನಾಗಮಾನವ ಘಟನೆಯ ತರುವಾಯ ಈಗ ಈ ಪತ್ರದೊಂದಿಗೆ ಲಗತ್ತೀಕರಿಸಲಾದ ಕರಪತ್ರವೊಂದು ಮುಸ್ಲಿಮರಲ್ಲಿ ವ್ಯಾಪಕವಾಗಿ ಪ್ರಚಾರಗೊಳ್ಳುತ್ತಿದೆ. ನನ್ನ ಅರಿವಿನ ಪ್ರಕಾರ ಹೇಳುವುದಾದರೆ ಈ ಪತ್ರ ಸುಮಾರು ಎಂಟು ವರ್ಷಗಳಿಂದಲೂ ಮುಸಲ್ಮಾನರೆಡೆಯಲ್ಲಿ ಪ್ರಚಾರದಲ್ಲಿದೆ. ಈ ಎಂಟು ವರ್ಷಗಳ ಅವಧಿಯಲ್ಲಿ ಒಂದು ವರ್ಷ ಯಾ ಎರಡು ವರ್ಷಕ್ಕೊಮ್ಮೆ ಇದರ ಹಠಾತ್ ಪ್ರಚಾರ ಆರಂಭಗೊಳ್ಳುತ್ತಲೇ ಇದ್ದು ನಂತರ ತನ್ನಷ್ಟಕ್ಕೆ ತಣ್ಣಗಾಗುತ್ತಿದೆ. ಈಗ ಮತ್ತೊಮ್ಮೆ ಅದು



ಕಾರ್ಯರಂಗಕ್ಕಿಳಿದಿದೆ. ಈ ಪತ್ರದಲ್ಲಿ "ಮದೀನಾದಶೇಖ್ ಅಹ್ಮದ್ (?) ಎಂಬವರಿಗೆ ಕುರಾನ್ ಓದುತ್ತಿರುವಾಗ ನಿದ್ರೆ ಬಂದು ಒಂದು ಕನಸು ಕಂಡಿತು. ಆ ಕನಸಿನಲ್ಲಿ ಪ್ರವಾದಿಗಳು ಹೇಳಿದರು– ಒಂದು ಶುಕ್ರವಾರದಿಂದ ಮತ್ತೊಂದು ಶುಕ್ರವಾರದ ನಡುವಣ ಅವಧಿಯಲ್ಲಿ 6,000 ಮುಸಲ್ಮಾನರು ತೀರಿ ಹೋಗುತ್ತಾರೆ. ಅವರಿಗೆ ವಿಶ್ವಾಸವೆಂಬುದಿಲ್ಲ (ಈ ಆರು ಸಾವಿರ ಮಂದಿಯಲ್ಲಿ ಧರ್ಮ ವಿದ್ವಾಂಸರೂ ಸೇರಿರಬಹುದಲ್ಲವೆ?) ಒಂದು ನಕ್ಷತ್ರ ಆಕಾಶದಲ್ಲಿ ಕಾಣುತ್ತದೆ. ಪಶ್ಚಾತ್ತಾಪದ ಬಾಗಿಲು ಮುಚ್ಚುತ್ತದೆ. ಅಂತ್ಯಕಾಲ ಬೇಗ ಬರಲಿದೆ. ಸೂರ್ಯ ಒಂದು ಕಾಲು ಗೇಣಿನಲ್ಲಿ ಬಂದು ನಿಲ್ಲುತ್ತದೆ. ಈ ಕರ ಪತ್ರವನ್ನು ಓದಿದವರು ಇದರ 30 ಪ್ರತಿಗಳನ್ನು ಮುದ್ರಿಸಿ ಹಂಚಬೇಕು. ಆಗ ಅವರಿಗೆ 15 ದಿವಸದೊಳಗೆ ಸಂತೋಷ ಪ್ರಾಪ್ತವಾಗುವುದು. ಇದನ್ನು ನಿಷೇಧಿಸಿದ ಓರ್ವನ ಮಗು ಸತ್ತುಹೋಯಿತು. (ಅಂದರೆ ಈ ಓರ್ವನ ಮಗು ಕಳೆದ ಎಂಟು ವರ್ಷಗಳಿಂದಲೂ ಸಾಯುತ್ತಿದೆ?) ಇದರ 30 ಪ್ರತಿಗಳನ್ನು ಮುದ್ರಿಸದಿದ್ದರೆ ಅಂತ್ಯ ದಿನದಲ್ಲಿ ವಿಚಾರ

ಜನದನಿ

ಣೆಗೆ ಉತ್ತರಿಸಬೇಕಾದಿತೆಂಬ ಎಚ್ಚರಿಕೆ ಇದು ಇದರಲ್ಲಿರುವ ಸಂಕ್ಷಿಪ್ತ ವಿಚಾರ.

ಕೆಲವೊಂದು ಉತ್ತಮ ಬೋಧನೆಗಳನ್ನೊಳಗೊಂಡ ಪ್ರಸ್ತುತ ಕರಪತ್ರದ ಮೂಲಕರ್ತನಿಗೆ ಬ್ಲಾಕ್‌ಮೇಲ್ ಮಾಡಲು ಈ ಬೋಧನೆ ಅತ್ಯಾವಶ್ಯಕವೆಂದು ಕಂಡಿರಬಹುದು. ಈ ಪತ್ರದ ಸತ್ಯಾಸತ್ಯತೆಯನ್ನು ಧರ್ಮವಿದ್ವಾಂಸರು ಬಹಿರಂಗವಾಗಿ ಘೋಷಿಸಿ ಮುಸ್ಲಿಮರೆಡೆಯಲ್ಲಿ ಇಂತಹುಗಳು ಪ್ರಚಾರಗೊಳ್ಳುವುದಕ್ಕೆ ಒಂದು ತೆರೆ ಎಳೆಯಬೇಕಾಗಿದೆ. ಒಂದು ವೇಳೆ ಧರ್ಮವಿದ್ವಾಂಸರಿಗೆ ಸತ್ಯವೇನೆಂದು ಗೊತ್ತಿದ್ದೂ ಈ ಬಗ್ಗೆ ಮೌನ ವಹಿಸಿದರೆ ಧರ್ಮಕ್ಕೆ ಅಪಚಾರವೆಸಗುವುದರಲ್ಲಿ ತಮ್ಮದೇ ಆದ ಕೊಡುಗೆಯನ್ನು ಅವರು ನೀಡಿದಂತಾಗುತ್ತದೆ.

—ಮಹಿವಿಶ್, ಕಾಟಿಪಳ್ಳ

ಕಾಟಪಳ್ಳ

ಸ್ಪಷ್ಟೀಕರಣ

ಪ್ರಿಯರೆ,

ದಿನಾಂಕ: 15-8-1986ರಂದು ಕೋಟಾದಲ್ಲಿ ಉದ್ಘಾಟನೆಯಾಗಿರುವ ನಾಡ ಕಚೇರಿ ಸರಕಾರದ ಅಧಿಕಾರ ವಿಕೇಂದ್ರೀಕರಣದ ಪ್ರಥಮ ಹೆಜ್ಜೆಯಾಗಿದ್ದು ಸದ್ಯಕ್ಕೆ ಪ್ರಾಯೋಗಿಕವಾಗಿ ಸರಕಾರಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತದೆ. ಈ ಪ್ರಯೋಗ ಯಶಸ್ವಿಯಾದಲ್ಲಿ ಮತ್ತು ಖಾಯಂ ಮಾಡುವ ಅವಕಾಶ ಒದಗಿದ್ದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಎಲ್ಲಾ ವ್ಯವಸ್ಥೆಗಳನ್ನು ಒದಗಿಸುವರೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

—ಶಾ. ಮೊ. ಕಾಮತ್
ತಹಸೀಲ್ದಾರ್

ಉಡುಪಿ

ಶಂಭೂರಿನಲ್ಲಿ ಅಂಚೆ ಕಚೇರಿಯ ನೂತನ ಕಟ್ಟಡವನ್ನು ಪುತ್ತೂರು ವಿಭಾಗದ ಅಂಚೆ ಅಧೀಕ್ಷಕ ಕೆ. ಬಿ. ಕಾಮತ್ ಇತ್ತೀಚೆಗೆ ಉದ್ಘಾಟಿಸಿದರು.

ಆಯ್ಕೆ

ಮಂಗಳೂರು, ಅ. 8–ಫರಂಗಿಪೇಟೆ ವ್ಯವಸಾಯ ಸಹಕಾರಿ ಸಂಘದ ಆಡಳಿತ ಮಂಡಳಿಯ 9ಸ್ಥಾನಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಚಿಕ್ಕ ರೈತರ ಸ್ಥಾನದಿಂದ ಕಾಂತಪ್ಪ ಪೂಂಜ, ನಾಗಣ್ಣ ಗಾಂಭೀರ, ರಾಮಣ್ಣ ತಂತ್ರಿ, ಪದ್ಮನಾಭ ಗಾಂಭೀರ, ಶ್ರೀನಿವಾಸ ನಾಯಕ (ಅವಿರೋಧ ಆಯ್ಕೆ), ವಸಂತಿ ಎಸ್. ಶೆಟ್ಟಿ (ಮಹಿಳಾ ಮೀಸಲು) ಮತ್ತು ಸಾಮಾನ್ಯ ಸ್ಥಾನದ ಮೂರು ಸ್ಥಾನಗಳಿಗೆ ಎಂ. ಎಸ್. ರವಿನಂದ, ರಾಘವ ಶೆಣೈ ಮತ್ತು ಸದಾಶಿವ ತಂತ್ರಿ ಬಹುಮತದಿಂದ ಚುನಾಯಿತರಾದರು.

...ಾ. ಬಚತ್: ...ಗಳ ಗುರಿ

ಮೂಲಕ ಬಹುಮಾನ ಕೊಡಲಾಗುವುದು. ಚಿಕ್ಕಮಕ್ಕಳಿಗೆ ಸ್ಟೀಲಿನ ಊಟದ ತಟ್ಟೆ, ಕಾಲೇಜು ವಿದ್ಯಾರ್ಥಿಗಳಿಗೆ ಎಚ್. ಎಂ. ಟಿ ಕೈಗಡಿಯಾರ, ಕ್ಯಾಲ್‌ಕುಲೇಟರ್ ಯಂತ್ರ ಹಾಗೂ ಇನ್ನಿತರ ಉಪಯುಕ್ತ ವಸ್ತುಗಳನ್ನು ಬಹುಮಾನವಾಗಿ ನೀಡಲಾಗುವುದೆಂದು ಸಚಿವರು ತಿಳಿಸಿದರು.

ಆಯಾ ಶಾಲೆಯು ಸಂಗ್ರಹಣೆ ಮಾಡಿದ ಒಟ್ಟು ಹಣದಲ್ಲಿ ಶೇ. 2ರಷ್ಟನ್ನು ವಿದ್ಯಾರ್ಥಿಗಳಿಗೆ ಬಹುಮಾನದ ರೂಪದಲ್ಲಿ, ಶೇ. 2ರಷ್ಟನ್ನು ಆಯಾ ಶಾಲೆಗಳ ಅಧ್ಯಾಪಕರಿಗೆ ಮತ್ತು ಶಾಲಾಭಿವೃದ್ಧಿ ನಿಧಿಗೆ ನೀಡುವುದಾಗಿ ತಿಳಿಸಿದ ಸಚಿವರು, ರಾಷ್ಟ್ರೀಯ ಉಳಿತಾಯ ಯೋಜನೆಯಡಿ 15ಸಾವಿರ ರೂ.ಗಳನ್ನು ಶೇಖರಣೆ ಮಾಡಿದ ಪ್ರತಿಯೊಬ್ಬ ಅಧ್ಯಾಪಕರಿಗೆ ಶೇ. ಒಂದರಷ್ಟು ಕಮಿಶನ್ ಹಣ ನೀಡುವುದಾಗಿ ತಿಳಿಸಿದರು.

ಶಂಭೂರಿನಲ್ಲಿ ಪಡಿತರ ವಿತರಣಾ ಕೇಂದ್ರ ಉದ್ಘಾಟನೆ

ಶಂಭೂರು, ಅ 8– ಇಲ್ಲಿನ ನೂತನ ಪಡಿತರ ವಿತರಣಾ ಕೇಂದ್ರವನ್ನು ದಕ್ಷಿಣ ಕನ್ನಡದ ವಿಶೇಷ ಜಿಲ್ಲಾಧಿಕಾರಿ ಸುಂದರ ನಾಯಕ್ ಅವರು ಇತ್ತೀಚೆಗೆ ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪಾಣೆಮಂಗಳೂರು ರೈತ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಕೆ. ಸದಾಶಿವ ಆಳ್ವ ಅವರು ಪಡಿತರ ವಿತರಣಾ ವ್ಯವಸ್ಥೆಯಲ್ಲಿನ ಕುಂದು ಕೊರತೆಗಳನ್ನು ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸಂಘ ಸಂಸ್ಥೆಗಳಲ್ಲಿ ತಿಳಿಸಿ ಪರಿಹಾರ ಪಡೆದುಕೊಳ್ಳಬೇಕು ಎಂದರು.

ಡಾ। ಅಮ್ಮೆಂಬಳ ಬಾಳಪ್ಪ ಹಾಗೂ ರೈತ ಸೇವಾ ಸಹಕಾರಿ ಸಂಘದ ನಿರ್ದೇಶಕ ಪದ್ಮನಾಭ ಅವರು ಶುಭಕೋರಿದರು. ಬೆಂದರವಾಡಿ ಸುಬ್ರಹ್ಮಣ್ಯ ಶರ್ಮ ಹಾಗೂ ರಾಜೇಶ್ ಶರ್ಮ ಅವರಿಂದ ಕವಿತಾವಾಚನ ಕಾರ್ಯಕ್ರಮ ಜರಗಿತು.

ಆರಂಭದಲ್ಲಿ ಪಂಚಾಯತ್ ಆಡಳಿತಾಧಿಕಾರಿ ಕೆ. ಸುರೇಂದ್ರ ನಾಯಕ್ ಸ್ವಾಗತಿಸಿದರು. ಸ್ವಾಗತ ಸಮಿತಿ ಅಧ್ಯಕ್ಷ ಕೆ. ರಾಮಚಂದ್ರ ರಾವ್ ಪ್ರಾಸ್ತಾವಿಕ ಭಾಷಣ ಮಾಡಿದರು. ನಂದಳಿಕೆ ಬಾಲಚಂದ್ರ ರಾವ್ ಕಾರ್ಯಕ್ರಮ ನಿರ್ವಹಿಸಿದರು.

ರಾಷ್ಟ್ರೀಯ ಏಕತಾ ಸಪ್ತಾಹ

ಬಳ್ಳಾರಿ, ಅ. 8–ಅಕ್ಟೋಬರ್ 12 ರಿಂದ 19 ರವರೆಗೆ ದೇಶಾದ್ಯಂತ ಆಚರಿಸಲಾಗುವ ರಾಷ್ಟ್ರೀಯ ಏಕ್ಯತಾ ಸಪ್ತಾಹದ ಅಂಗವಾಗಿ 34ನೆ ಕರ್ನಾಟಕ ಬೆಟಾಲಿಯನ್ ಎನ್. ಸಿ. ಸಿ. ಘಟಕವು ಇಲ್ಲಿನ ಸರಕಾರಿ ಜೂನಿಯರ್ ಕಾಲೇಜಿನಲ್ಲಿ ರಾಷ್ಟ್ರೀಯ ಏಕ್ಯತಾ ಸಪ್ತಾಹವನ್ನು ಆಚರಿಸಲಿದೆ.

ಶಾಸಕಿ ಮನೆ ಮುಂದೆ ಮಹಿಳಾ ಮೀನುಗಾರರ ಧರಣಿ

ಮಲ್ಪೆ, ಅ. 8– ಮಲ್ಪೆಯ ಮೀನುಗಾರಿಕಾ ಬಂದರಿನೊಳಗೆ ಹಲವಾರು ವರ್ಷಗಳಿಂದ ಮುಸ್ಸಂಜೆಯಿಂದ ಹಿಡಿದು ಪರಿಶಿಷ್ಟ ಮಹಿಳೆಯರು ಜೋಪಡಿ ಕಟ್ಟಿಕೊಂಡು ಮೀನು ಒಣಗಿಸಿ ವ್ಯಾಪಾರ ನಡೆಸುತ್ತಾ ಜೀವನ ಸಾಗಿಸುತ್ತಿದ್ದು, ಇದೀಗ ಈ ದಲಿತ ಮಹಿಳೆಯರು ಉದ್ಯೋಗವಿಲ್ಲದೆ ಸಂಕಷ್ಟಕ್ಕೆ ಒಳಗಾಗಿರುವುದನ್ನು ಪ್ರತಿಭಟಿಸಿ ಉಡುಪಿ ಶಾಸಕಿ ಶ್ರೀಮತಿ ಮನೋರಮಾ ಮಧ್ವರಾಜ್ ಅವರ ನಿವಾಸದೆದುರು ಕರ್ನಾಟಕ ದಲಿತ ಸಂಘರ್ಷ ಸಮಿತಿ ಸೋಮವಾರ ಸಾಂಕೇತಿಕ ಧರಣಿ ನಡೆಸಿತು.

ದಲಿತ ಮಹಿಳೆಯರಿಗೆ ಮೀನಿನ ವ್ಯಾಪಾರ ನಡೆಸಲು ಬಂದರಿನ ಹೊರವಲಯದಲ್ಲಿ ಸರ್ವೆ ನಂ. 265–3ರಲ್ಲಿ 1–10 ಎಕರೆ ಸ್ಥಳವನ್ನು ತಾ. 14-7-83ರಂದು ಮಂಜೂರು ಮಾಡಿತ್ತು. ಆದರೆ ಸಂಬಂಧಿಸಿದ ಅಧಿಕಾರಿಗಳು ಈ ಸ್ಥಳವನ್ನು ದಲಿತ ಮಹಿಳೆಯರಿಗೆ ನೀಡದಂತೆ ಶಾಸಕಿ ಒಳಸಂಚು ನಡೆಸುತ್ತಿದ್ದಾರೆಂದು ದಸಂಸ ಆರೋಪಿಸಿದೆ.

ಇದಲ್ಲದೆ ಇತ್ತೀಚೆಗೆ "ಮೀನುಗಾರಿಕಾ ಇಲಾಖೆ–ಮಂಗಳೂರು" ಇವರು ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಮೀನು ಒಣಗಿಸಲು ಸ್ಥಳದ ಅವಶ್ಯಕತೆಯನ್ನು ಅರಿತು "ಫಿಶ್‌ಯಾರ್ಡ್" ಸರ್ವೆ ನಂ. 262-ಸಿ1 ರಲ್ಲಿ 1 ಎಕರೆ ಸ್ಥಳವನ್ನು ತಾ. 26-8-86 ರಂದು ಮಂಜೂರುಗೊಳಿಸಿದೆ. ಮಂಜೂರಾದ ಈ ಸ್ಥಳವನ್ನು ಕೂಡ ಬಡ ದಲಿತ ಮಹಿಳೆಯರಿಗೆ ಲಭಿಸದಂತೆ "ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾದ ಸ್ಥಳ" ಎಂಬ ನೆಪ ಒಡ್ಡಿ ಜಾಗದ ಸುತ್ತ ರಾತೋರಾತ್ರಿ ಕಲ್ಲಿನ ಕಂಬ ಹಾಕಿ ನಾಮಫಲಕ ತೂಗು ಹಾಕಲಾಗಿದೆ ಎಂದು ಸಮಿತಿ ತಿಳಿಸಿದೆ.

ಅಕ್ರಮ ಮರ ಪತ್ತೆ

ಮಂಗಳೂರು, ಅ. 8- ಸುಳ್ಯ ತಾಲೂಕು ಸುಬ್ರಹ್ಮಣ್ಯ ವಲಯದ ಬಾರದ್ಯ ಶಾಖೆಗೆ ಒಳಪಟ್ಟ ನಾಲ್ಕೂರು ಸುರಕ್ಷಿತ ಅರಣ್ಯದ ಮಧ್ಯೆ ಗುಬ್ಬಡ್ಕ, ಮುಂಡಬಾಳು ಎಂಬಲ್ಲಿ ಗಾಳಿಗೆ ಬಿದ್ದ ಬೀಟೆ ಮತ್ತು ನಂದಿ ಮರಗಳನ್ನು ಕಡಿದು ಸಮೀಪದಲ್ಲಿಯೇ ದರೆಯ ಮೇಲೆ ಹಾಕಿರುವುದನ್ನು ಇತ್ತೀಚೆಗೆ ಅರಣ್ಯ ಸಿಬ್ಬಂದಿಯವರು ಪತ್ತೆ ಹಚ್ಚಿದ್ದಾರೆ.

ಈ ಸಂಬಂಧವಾಗಿ ಆಸುಪಾಸಿನ ಪ್ರದೇಶದ ಮೂವರು ಅಪರಾಧಿಗಳನ್ನು ಬಂಧಿಸಲಾಗಿದ್ದು ತಪ್ಪಿಸಿಕೊಂಡ ಉಳಿದ ಇಬ್ಬರ ಪತ್ತೆಕಾರ್ಯ ನಡೆಯುತ್ತಿದೆ. ವಶಪಡಿಸಿಕೊಂಡ ಮರದದಿಮ್ಮಿಗಳಬೆಲೆ ಸುಮಾರು 5 ಸಾವಿರ ರೂ. ಗಳೆಂದು ಹೇಳಲಾಗಿದೆ.

ಇದಲ್ಲದೆ ಸುಬ್ರಹ್ಮಣ್ಯ ಶಾಖೆಯ ಐನೆಕಿದು ಗ್ರಾಮದ ಚಾಡೆಮಲೆ ಕಾಡಿನಿಂದ ಸುಮಾರು 6000ರೂ. ಮೌಲ್ಯದ ಹೆಬ್ಬಲಸು ಮರವನ್ನು ಕಡಿದು ಸಿಗಿದು ಸುಮಾರು 53 ಸೈಜುಗಳನ್ನು ಸುಬ್ರಹ್ಮಣ್ಯ ಮತ್ತು ಬಾರದ್ಯ ಶಾಖೆಯ ಅರಣ್ಯಪಾಲಕರು ಇತ್ತೀಚೆಗೆ ವಶಪಡಿಸಿಕೊಂಡಿದ್ದಾರೆ.



ವಿತರಕರು: ಶ್ರೀ ಬಾಲಾಜಿ ರೂಫಿಂಗ್ಸ್, 133/13, ಅಪ್ಪರ್ ಪಿಲ್ಲರ್ ರೋಡ್, ಬಾಬುರಾವ್‌ಪೇಟೆ, ಬೆಂಗಳೂರು-18.
ಅಧಿಕೃತ ಸಂಗ್ರಾಹಕರು: ಮಂಗಳೂರು: ಮೆ। ಎಮ್. ಆರ್. ಕಾಮತ್ ಎಂಡ್ ಕೊ: ಕೃಷ್ಣಾ ಬಿಲ್ಡಿಂಗ್ಸ್, ಪಿ. ಬಿ. ನಂಬ್ರ 20, ಬಂದರೆ, ಮಂಗಳೂರು. ಉಡುಪಿ: ಮೆ। ಯು. ಆರ್. ಶೆಣೈ, ಮೈನ್ ರೋಡ್. ಕುಂದಾಪುರ: ಮೆ। ಸ್ಟೀಲ್ ಸೆಂಟರ್, ಮೈನ್ ರೋಡ್, ಪುತ್ತೂರು: ಮೆ। ನಾಯಕ್ ಇಂಡಸ್ಟ್ರೀಸ್, ಮೈನ್ ರೋಡ್ ಪುತ್ತೂರು. ಕಾರ್ಕಳ: ಮೆ। ಲಕ್ಷ್ಮೀ ಮೆಟಲ್ ಮರ್ಚೆಂಟ್ ಮೈನ್ ರೋಡ್, ...